ಲಂಕೇಶ್

ಫೆಬ್ರವರಿ 24, 2010 ರೂ. 12/-

ಲಂಕೇಶ್-75
ಪುಣೇಕರ್ ಲಂಕೇಶ್ ಸ್ನೇಹ

ಳ್ಳಾರಿ





ಪದ್ಮಾವತಿ ಕೊಲೆ ಹಿಂದಿನ ರಹಸ್ಯ!

ಪೆಟ್ರೋಲ್ ದರ ಹೆಚ್ಚಳದ ಹಿಂದಿನ ಕುತಂತ್ರ



ಉಡುಪಿ: ಸೆಕ್ಸ್ ಸಿಡಿ ಹಗರಣದಲ್ಲಿ ಪೊಲೀಸ್



ಸೋಮಣ್ಣನ ಕರ್ಮ



ಟ್ಟಾ ಮಗನೇ ಸುನೀಲನ ರಕ್ಷಕ!

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್

ಕಿರೀತ್ ಪಾರೀಕ್‌ನ ಕಿರಿಕ್

ಒಲೆಯ ಬೆಂಕಿ ಆರಿಸಿ ಮನೆಗೆ ಬೆಂಕಿ ಹಚ್ಚುವ ವರದಿ



ಮೊದಲ ಯುಪಿಎ ಸರ್ಕಾರ ಬಡವರ ಮನೆಯ ಒಲೆಯ ಮೇಲಿದ್ದ ಪಾತ್ರೆಯನ್ನೇ ಕಸಿದರೆ ಈ ಯುಪಿಎದ ಎರಡನೇ ಅವತಾರ ಒಲೆಯಲ್ಲಿದ್ದ ಬೆಂಕಿಯನ್ನೇ ಆರಿಸಿ ಬಡವನ ಗುಡಿಸಲಿಗೇ ಬೆಂಕಿಹಚ್ಚುವ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿರುವಂತೆ ಕಾಣುತ್ತಿದೆ. ಉದಾರೀಕರಣ ಪ್ರಾರಂಭವಾದ ನಂತರ ಸರ್ಕಾರ ಬಡವರಿಗೆ ನೀಡುತ್ತಿದ್ದ ಎಲ್ಲಾ ಸಹಾಯಧನವನ್ನೂ ಒಂದೊಂದಾಗಿ ವಾಪಸ್ ತೆಗೆದುಕೊಳ್ಳುತ್ತಿದೆ. ಆ ಸರಕುಗಳನ್ನು ಮುಕ್ತ ಮಾರುಕಟ್ಟೆ ಬೆಲೆಗೆ ಸರಿದೂಗಿಸಿದ ಕೂಡಲೇ ಆ ವ್ಯವಹಾರವನ್ನು ಖಾಸಗಿ ಕಂಪನಿಗಳಿಗೆ ವಹಿಸುತ್ತಿದೆ. ಇದೇ ಉದಾರೀಕರಣದ ಅಸಲಿ ಹುನ್ನಾರ.

ಅದೇ ರೀತಿ ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ ಇತ್ಯಾದಿ ಉರುವಲಿಗೆ ಸರ್ಕಾರ ಕೊಡುತ್ತಿರುವ ರಿಯಾಯತಿ ಧನವನ್ನು ಹಿಂತೆಗೆದುಕೊಳ್ಳಬೇಕೆಂದು ಕಳೆದ ಎರಡು ದಶಕಗಳಿಂದಲೂ ತೈಲ ಉತ್ಪನ್ನ ಕಂಪನಿಗಳು ಹುಯಿಲೆಬ್ಬಿಸಿವೆ. ಇವುಗಳು ಜನಸಾಮಾನ್ಯರ ನಿತ್ಯವಶ್ಯಕ ವಸ್ತುಗಳಾಗಿರುವುದರಿಂದ ಅವುಗಳ ಬೆಲೆಯನ್ನು ಸರ್ಕಾರ ನಿಯಂತ್ರಣದಲ್ಲಿಟ್ಟಿತ್ತು. ಬೆಲೆಯು ನಿಯಂತ್ರಣದಲ್ಲಿದ್ದರಿಂದ ಲಾಭದ ಅವಕಾಶ ಕಡಿಮೆ ಎಂದರಿತ ಖಾಸಗಿ ಕಂಪನಿಗಳು ಈ ವ್ಯವಹಾರದಲ್ಲಿ ತಲೆದೂರಿಸಿರಲಿಲ್ಲ. 2002ರಲ್ಲಿ ಎನ್‌ಡಿಎ ಸರ್ಕಾರ ತೈಲಬೆಲೆಯ ನಿಯಂತ್ರಣವನ್ನು ತೆಗೆದುಹಾಕಿದಾಗ ರಿಲಯನ್ಸ್, ಎಸ್ಸಾರ್ ಇನ್ನಿತ್ಯಾದಿ ಹಲವು ಖಾಸಗಿ ಕಂಪನಿಗಳು ಲಾಭವನ್ನು ಬಾಚಿಕೊಳ್ಳಲು ನುಗ್ಗಿದವು. ಆದರೆ 2004ರ ನಂತರ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೈಲಬೆಲೆ ಮೂರುಪಟ್ಟು ಹೆಚ್ಚಾಗಿದ್ದರಿಂದ ಈ ವ್ಯವಹಾರದಲ್ಲಿ ಲಾಭ ಕಡಿಮೆ ಎಂದು ಅವೆಲ್ಲಾ ಹಿಂದೆ ಸರಿದಿದ್ದವು. ನಂತರದಲ್ಲಿ ಸರ್ಕಾರ ಪಾಕ್ಷಿಕವಾಗಿ ಮಾತ್ರ ತೈಲಬೆಲೆ ನಿಯಂತ್ರಣವನ್ನು ಸಡಿಲಿಸಿ ಈ ಬಗ್ಗೆ ಅಧ್ಯಯನ ನಡೆಸಲು ಉದಾರೀಕರಣದ ಮಹಾನ್ ವಕ್ತಾರನಾದ ಮತ್ತು ನರಸಿಂಹರಾವ್ ಕಾಲದಿಂದಲೂ ಪ್ರಧಾನ ಮಂತ್ರಿಗಳಿಗೆ ಆರ್ಥಿಕ ಸಲಹೆಗಾರನಾಗಿಯೂ, ಹಲವಾರು ಉದ್ದಿಮೆ ಸಂಸ್ಥೆಗಳ ನಿರ್ದೇಶಕ ಮಂಡಲಿಯ ಸದಸ್ಯರೂ ಆಗಿರುವ ಕಿರೀತ್ ಪಾರೀಕ್ ಅನ್ನು ನೇಮಿಸಲಾಯಿತು.

ಕಳೆದ ಫೆಬ್ರವರಿ 3 ರಂದು ಕಿರೀತ್ ಪಾರೀಕ್ ಸಮಿತಿ ತನ್ನ ವರದಿಯನ್ನು ನೀಡಿದೆ. ಸಾರಾಂಶದಲ್ಲಿ ಈ ವರದಿಯು ತೈಲಬೆಲೆಯ ಮೇಲೆ ಸರ್ಕಾರದ ನಿಯಂತ್ರಣವನ್ನು ಸಂಪೂರ್ಣವಾಗಿ ಕಿತ್ತುಹಾಕಬೇಕೆಂದು ಸಲಹೆ ನೀಡಿದೆ. ಅಂದರೆ ಶ್ರೀಸಾಮಾನ್ಯರು ಕೊಳ್ಳುವ ಸೀಮೆಎಣ್ಣೆ, ಅಡುಗೆ ಅನಿಲದಿಂದ ಹಿಡಿದು, ಈ ದೇಶದ ಆರ್ಥಿಕತೆಯನ್ನೇ ಏರುಪೇರು ಮಾಡಬಲ್ಲ ಡೀಸೆಲ್

ಚಾರ್ವಾಕ



ಶಿವಸುಂದರ್


ಬೆಲೆಯವರೆಗೆ ಎಲ್ಲವನ್ನೂ ಹಂತಹಂತವಾಗಿ ಸರ್ಕಾರಿ ನಿಯಂತ್ರಣದಿಂದ ಮುಕ್ತಗೊಳಿಸಬೇಕೆಂದು ಸಲಹೆ ನೀಡಿದೆ. ಇದರರ್ಥ ಈವರೆಗೆ ಸರ್ಕಾರ ಇವುಗಳನ್ನು ಜನಸಾಮಾನ್ಯರಿಗೆ ಎಟುಕುವ ಬೆಲೆಯಲ್ಲಿ ಇಟ್ಟುಕೊಳ್ಳಲು ನೀಡುತ್ತಿದ್ದ ಸಹಾಯಧನವನ್ನು ಸಂಪೂರ್ಣವಾಗಿ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಿಂತೆಗೆದುಕೊಳ್ಳಬೇಕು. ಇದರಿಂದ ತೈಲ ಕಂಪನಿಗಳ ಆರೋಗ್ಯ ವೃದ್ಧಿಸುತ್ತದಂತೆ. ಏಕೆಂದರೆ ಈ ಬೆಲೆ ನಿಯಂತ್ರಣದಿಂದ ಇವುಗಳ ಉತ್ಪಾದನೆ ಮತ್ತು ಸರಬರಾಜಿಗೆ ತಗಲುತ್ತಿದ್ದ ಖರ್ಚು ಕಳೆದು ಲಾಭ ಹುಟ್ಟುವುದಿಲ್ಲ ಎನ್ನುವುದು ಈ ಕಂಪನಿಗಳ ಗೋಳಾಗಿತ್ತು. ಕಿರೀತ್ ಪಾರೀಖ್ ಸಮಿತಿ ಸಹ ಅದನ್ನು ಎತ್ತಿಹಿಡಿದಿದೆ. ತೈಲಬೆಲೆಯನ್ನು ಮುಕ್ತಗೊಳಿಸಿದರೆ ಈ ಕಾರಣದಿಂದ ಕಂಪನಿಗಳು ಕಳೆದುಕೊಳ್ಳುತ್ತಿದ್ದ 40,000 ಕೋಟಿ ರೂಪಾಯಿ ಉಳಿದು ಕಂಪನಿಗಳ ಆರೋಗ್ಯವಂತವಾಗುತ್ತವಂತೆ!

ಆದರೆ ಜನಸಾಮಾನ್ಯ? ಸರ್ಕಾರ ರಿಯಾಯತಿ ಧನ ಒದಗಿಸದಿದ್ದರೆ ಬೆಲೆ ತಾನಾಗಿಯೇ ಹೆಚ್ಚಾಗುತ್ತದೆ. ಪಾರೀತ್ ವರದಿಯು ಈ ಕೂಡಲೇ ಸೀಮೆಎಣ್ಣೆಯ ದರವನ್ನು ಲೀಟರಿಗೆ 6 ರೂ.ಗಳಷ್ಟು, ಅಡುಗೆ ಅನಿಲದ ಬೆಲೆಯನ್ನು ಸಿಲಿಂಡರಿಗೆ 100 ರೂ. ಅಷ್ಟು, ಪೆಟ್ರೋಲ್ ದರವನ್ನು ಲೀಟರಿಗೆ 4 ರೂ. ಹಾಗೂ ಡೀಸೆಲ್ ದರವನ್ನು ಲೀಟರಿಗೆ 3.50 ರೂ.ಗಳಷ್ಟು ಹೆಚ್ಚಿಸಬೇಕೆಂದು ಶಿಫಾರಸ್ಸು ಮಾಡಿದೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆಯ ಮೇಲೆ ಇದರ ಪರಿಣಾಮವೇನಾಗಬೇಕು? ಅದರಲ್ಲೂ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಾದರೆ ಎಲ್ಲಾ ನಿತ್ಯವಶ್ಯಕ ಸರಕುಗಳ ಬೆಲೆಯೂ ಹೆಚ್ಚಿದಂತೆಯೇ ಅಲ್ಲವೇ?

ಜನಸಾಮಾನ್ಯರ ಆರೋಗ್ಯವನ್ನು ಹದಗೆಡಿಸುವ ಈ ಕಿರಿಕ್ ಪಾರೀಕನ ಶಿಫಾರಸ್ಸು ಯಾರ ಆರೋಗ್ಯವನ್ನು ಸುಧಾರಿಸುತ್ತದೆ ಎಂದು ನೋಡೋಣ. ಬೆಲೆ ನಿಯಂತ್ರಣ ತೆಗೆದುಹಾಕುವುದರಿಂದ ತೈಲ ಉತ್ಪನ್ನ ಕಂಪನಿಗಳಷ್ಟೇ ತೈಲ . ಚಿಲ್ಲರೆ ವಿತರಣೆ ವ್ಯವಹಾರದಲ್ಲಿದ್ದ ಖಾಸಗಿ ಕಂಪನಿಗಳೂ ಖುಷಿಯಾಗುತ್ತವೆ. ಏಕೆಂದರೆ ಈ ವರದಿಯು ಚಿಲ್ಲರೆ ವಿತರಣೆ ವ್ಯವಹಾರದಲ್ಲಿ ತೊಡಗಿರುವ ಖಾಸಗಿ ತೈಲ ಕಂಪನಿಗಳು ವಿತರಣೆ ವ್ಯವಹಾರದಲ್ಲಿ ಲಾಸು ಅನುಭವಿಸಿದರೆ ಅದಕ್ಕೆ ಸರ್ಕಾರ ಸಬ್ಸಿಡಿ ಕೊಡಬೇಕೆಂದು ಸಲಹೆ ಮಾಡಿದೆ! ಅಂದರೆ ಜನರಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ಕಿತ್ತುಕೊಂಡು ಈ ಖಾಸಗಿ ಕಂಪನಿಗಳಿಗೆ ಕೊಡಲಾಗುತ್ತದೆ. ಅಷ್ಟು ಮಾತ್ರವಲ್ಲ, ಕಚ್ಚಾತೈಲ ಬೆಲೆ ಏರಿಕೆಯಿಂದ ಸಂಭವಿಸುವ ಬೆಲೆ ಏರಿಕೆಯನ್ನು ಅವು ಸಾರಾಸಗಟು ಬಳಕೆದಾರನ ಮೇಲೆ ವರ್ಗಾಯಿಸಬಹುದು! ಆದ್ದರಿಂದಲೇ ಕಳೆದೆರಡು ವರ್ಷಗಳಿಂದ ಮುಚ್ಚಲಾಗಿದ್ದ ರಿಲಯನ್ಸ್ ಪೆಟ್ರೋಲ್ ಬಂಕ್‌ಗಳು ಮತ್ತು ಎಸ್ಸಾರ್ ಬಂಕ್‌ಗಳು ಮತ್ತೆ ಲಾಭಲೂಟಿ ಹೊಡೆಯಲು ಸಜ್ಜಾಗುತ್ತಿವೆ.

ಜನಸಾಮಾನ್ಯರ ಬದುಕನ್ನು ಇನ್ನಷ್ಟು ಕಂಗೆಡಿಸುವ ಕಿರೀತ್ ಪಾರೀಕ್ ಸಮಿತಿ ವರದಿಯಿಂದ ದೇಶದ ಆರ್ಥಿಕ ಆರೋಗ್ಯ ಸುಧಾರಿಸುತ್ತದೆ ಎಂದೇ ತೈಲ ಇಲಾಖೆ ಮತ್ತು ಸರ್ಕಾರ ಹೇಳುತ್ತಿದೆ. ಹಾಗಾದರೆ ಈ ದೇಶದ ಆರೋಗ್ಯವೆಂದರೆ "ಜನಸಾಮಾನ್ಯರ ಆರೋಗ್ಯ ಅಲ್ಲ" ಎಂದಾಯ್ತು. ದೇಶವೆಂದರೆ ರಿಲಾಯನ್ಸ್ ಮತ್ತು ಎಸ್ಸಾರ್‌ನಂಥ ಬಹುರಾಷ್ಟ್ರೀಯ ಕಂಪನಿಗಳೇ ಎಂದಾಯ್ತು! ●

ಬಿಟಿ ಬದನೆ-ಗೆಲುವಲ್ಲದ ಗೆಲುವು, ಸೋಲಲ್ಲದ ಸೋಲು!



ಕಳೆದ ಒಂದು ತಿಂಗಳಿಂದ ದೇಶಾದ್ಯಂತ ಸುದ್ದಿ ಮಾಡುತ್ತಿದ್ದ ಬಿಟಿ ಬದನೆಯ ಬಗೆಗಿನ ಪರಿಸರ ಮಂತ್ರಿ ಜೈರಾಂ ರಮೇಶ್ ಒಡ್ಡೋಲಗ ಬೆಂಗಳೂರಿನಲ್ಲೂ ನಡೆದು ಜನಸಾಮಾನ್ಯರ, ರೈತಪ್ರತಿನಿಧಿಗಳ, ರಾಜಕಾರಣಿಗಳ ಮತ್ತು "ವಿಜ್ಞಾನಿಗಳ" ನಡುವೆ ಬಿಸಿಬಿಸಿ ಚರ್ಚೆಯನ್ನೂ ಅದಕ್ಕಿಂತ ಜಾಸ್ತಿ ಸದ್ದನ್ನೂ ಹುಟ್ಟುಹಾಕಿದ್ದು ಸರಿಯಷ್ಟೇ! ಈಗ ಪರಿಸರ ಸಚಿವಾಲಯ ದೇಶದಲ್ಲಿ ನಡೆದ ಎಲ್ಲಾ ಸಾರ್ವಜನಿಕ ಚರ್ಚೆಗಳನ್ನು ಆಧರಿಸಿ ಒಂದು ದಿನ ಮೊದಲೇ ತನ್ನ ನಿರ್ಧಾರವನ್ನು ಪ್ರಕಟಿಸಿದೆ. ಪರಿಸರ ಇಲಾಖೆಯ "Genetic Enginerring Approval Committee" (GEAC) ಯು ಮಾನ್ಸಾಂಟೋ ಮತ್ತು ಭಾರತದ ಮಹಿಕೋ ಕಂಪನಿಯು ಉದ್ದೇಶಿಸಿದ್ದ ಬಿಟಿ ಬದನೆಯ ವಾಣಿಜ್ಯ ಉತ್ಪಾದನೆಗೆ "ತಾತ್ಕಾಲಿಕವಾಗಿ ತಡೆ" ನೀಡಿದೆ. ಪರಿಸರ ಇಲಾಖೆಯ ಈ ನಿರ್ಧಾರವನ್ನು ಭಾರತದ ಜನತೆಗೆ ದಕ್ಕಿದ ಅಪೂರ್ವ ಜಯವೆಂದೂ, ಸರ್ಕಾರದ ಐತಿಹಾಸಿಕ ನಿರ್ಧಾರವೆಂದೂ ಈಗಾಗಲೇ ಹಲವು ಎನ್‌ಜಿಒಗಳೂ ಮತ್ತು ಹಲವು ರೈತ ಮುಖಂಡರೂ ಬೀಗುತ್ತಿದ್ದಾರೆ.

ಆದರೆ ಪರಿಸರ ಇಲಾಖೆಯ ಆದೇಶವನ್ನು ಆಳವಾಗಿ ಗಮನಿಸಿದರೆ ಅಂಥಾ ಸಂಭ್ರಮಕ್ಕೆ ಕಾರಣವಿಲ್ಲವೆಂದು ಅರ್ಥವಾಗುತ್ತದೆ. ಒಂದೊಂದಾಗಿ ನೋಡೋಣ. ಇದು ಶಾಶ್ವತ ತಡೆಯಲ್ಲ, ತಾತ್ಕಾಲಿಕ ತಡೆ. ಅದು ಎಲ್ಲಾ ಬಗೆಯ ಬಿಟಿ ಪ್ರಕ್ರಿಯೆಗೆ ಹಾಕಿರುವ ತಡೆಯಲ್ಲ, ಈ ತಡೆ ಕೇವಲ ಬದನೆಗೆ ಮಾತ್ರ. ಮತ್ತು ಅದೂ ಮಹಿಕೋ ಕಂಪನಿ ಉದ್ದೇಶಿಸಿದ್ದ ವಾಣಿಜ್ಯ ಉತ್ಪಾದನೆಗೆ ಮಾತ್ರ. ಇಷ್ಟು ಮಾತ್ರವಲ್ಲ, ಪರಿಸರ ಇಲಾಖೆ GEACಯು ಮಹಿಕೋ ಕಂಪನಿಯ ಬಿಟಿ ಬದನೆಗೆ ಸಮ್ಮತಿ ನೀಡಲು ತೆಗೆದುಕೊಂಡ ಯಾವುದೇ ಕ್ರಮಗಳನ್ನು ಪರಿಶೀಲಿಸುವ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಹೀಗಾಗಿ ಭಾರತದ ವಿವಿಧ ಭಾಗಗಳಲ್ಲಿ ನಡೆದ ಸಾರ್ವಜನಿಕ ಸಭೆಗಳಲ್ಲಿ ಸಾರ್ವಜನಿಕರು, ಜನಪರ ವಿಜ್ಞಾನಿಗಳು (ಅದರಲ್ಲಿ ಮಾನ್ಸಾಂಟೋ ಕಂಪನಿಯ ಮಾಜಿ ನಿರ್ದೇಶಕ ಜಗದೀಶನ್ ಅವರೂ ಸೇರಿದ್ದರು) ಹಾಗೂ ರೈತರು ಬಿಟಿ ತಂತ್ರಜ್ಞಾನ ಮತ್ತು ಮೊನ್ಸಾಂಟೋದಂತ ಕಂಪನಿಗಳು ಅನುಸರಿಸುತ್ತಿರುವ ಜೀವವಿರೋಧಿ ಪ್ರಕ್ರಿಯೆಗಳ ಬಗ್ಗೆ ಎತ್ತಿರುವ ತಾತ್ವಿಕ ಆಕ್ಷೇಪಣೆಯ ಬಗ್ಗೆ ಸರ್ಕಾರ ಸಮ್ಮತಿ ಸೂಚಿಸಿಲ್ಲ. ಬದಲಿಗೆ ಇಷ್ಟೆಲ್ಲಾ ವಿರೋಧ ಇದ್ದರೂ ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲಕರವಾಗಿ ನಡೆದಿರುವ ಈ ಪರವಾನಗಿ ಪ್ರಕ್ರಿಯೆಯನ್ನು ಏನನ್ನೂ ಬದಲಾಯಿಸದಿರಲೆಂದೇ ಸರ್ಕಾರ ನಿರ್ಧರಿಸಿದೆ. ಇವೆಲ್ಲದರ ನಡುವೆ ಸಾರ್ವಜನಿಕರ ಮೂಗಿಗೆ ತುಪ್ಪ ಸವರಲು ತಾತ್ಕಾಲಿಕ ತಡೆ ನೀಡಿದೆ.

ಇಷ್ಟಾದರೂ ಆದದ್ದು ಸಾರ್ವಜನಿಕರ ಜಾಗೃತಿ ಮತ್ತು ಪ್ರತಿಭಟನೆಗಳಿಂದ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಪಡೆದ ಗೆಲುವಿನ ಗಾತ್ರ ಗೊತ್ತಿಲ್ಲದ ಸಂಭ್ರಮ ಭ್ರಾಂತಿಯನ್ನಷ್ಟೇ ಹುಟ್ಟುಹಾಕುತ್ತದೆ. ಅದೂ ಹೊಸ ಮತ್ತು ದೊಡ್ಡ ಸವಾಲಿಗೆ ಸಜ್ಜಾಗಬೇಕಿರುವ ಕಾಲದಲ್ಲಿ! ●

ನೋ ಕಾಮೆಂಟ್ಸ್

"ಸ್ಲಂ ಡಾಗ್ ಮಿಲೇನಿಯರ್ ಚಿತ್ರ ಭಾರತೀಯರನ್ನು ಅತ್ಯಂತ ಕಳಪೆಯಾಗಿ ಚಿತ್ರಿಸಿರುವ ನಾನು ನೋಡಿರುವ ಅತ್ಯಂತ ಕಳಪೆ ಚಿತ್ರ."

- ಗಿರೀಶ್ ಕಾರ್ನಾಡ್

"ಉರ್ದು ಕೇವಲ ಒಂದು ಜಾತಿ ಅಥವಾ ಧರ್ಮದ ಭಾಷೆಯಲ್ಲ. ಅದು ಹಿಂದೂ ಮತ್ತು ಮುಸ್ಲಿಮರ ನಡುವೆ ಸಂಪರ್ಕ ಸೇತುವೆಯಂತೆ ಕೆಲಸ ಮಾಡುತ್ತಿದೆ."

- ರಾಜ್ಯಪಾಲ ಭಾರದ್ವಾಜ್

"ಸೋಮಶೇಖರ್ ಆಯೋಗದ ಮಧ್ಯಂತರ ವರದಿಯನ್ನು ಸೀಲ್ ಮಾಡಿದ ಲಕೋಟೆಯಲ್ಲಿ ಸರ್ಕಾರಕ್ಕೆ ಸಲ್ಲಿಸಲಿಲ್ಲ ಎನ್ನುವುದು ತಪ್ಪು. ಮಂಗಳೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಗಣ್ಯರ ಸಮ್ಮುಖದಲ್ಲಿ ಅದನ್ನು ಸೀಲ್ ಮಾಡಿದ ಲಕೋಟೆಯಲ್ಲಿ ನೀಡಲಾಗಿದೆ."

- ಸೋಮಶೇಕರ್ ಆಯೋಗದ ಕಾರ್ಯದರ್ಶಿ

"ಇರಾನ್‌ಗೆ ಸಂಸ್ಕರಿತ ಪೆಟ್ರೋಲ್ ಸರಬರಾಜು ಮಾಡುವುದನ್ನು ರಿಲಯನ್ಸ್ ಕಂಪನಿ ನಿಲ್ಲಿಸಿದೆ ಎನ್ನುವುದು ಸುಳ್ಳು. ನಾವು ನಿರಂತರವಾಗಿ ರಿಲಯನ್ಸ್ ಕಂಪನಿಯಿಂದ ಸಂಸ್ಕರಿತ ತೈಲವನ್ನು ಪಡೆದುಕೊಳ್ಳುತ್ತಿದ್ದೇವೆ."

-ಇರಾನ್ ರಾಯಭಾರಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಚುನಾವಣೆ ಮುಂದೂಡಿಕೆ ಕುರಿತಂತೆ ಸುಪ್ರೀಂಕೋರ್ಟು ಆದೇಶದಂತೆ ಹೈಕೋರ್ಟಿನ ಮುಂದೆ ಅರ್ಜಿ ಸಲ್ಲಿಸದಿರಲು ಮುಖ್ಯ ಕಾರಣ ಸುಪ್ರೀಂಕೋರ್ಟಿನ ಆದೇಶದ ಪ್ರತಿ ನಮ್ಮ ಕೈ ತಲುಪದೇ ಇದ್ದದ್ದು"

-ಬಿಬಿಎಂಪಿ ಅಧಿಕಾರಿಗಳು

"ಈ ಮುನ್ನ ನಾನು ವಾಣಿಜ್ಯ ಸಚಿವನಾಗಿದ್ದಾಗ ಕುಲಾಂತರಿ ಆಹಾರ ಬೀಜ ತಯಾರಿಸುವ ಕಂಪನಿಗಳೊಂದಿಗೆ ಸಂಪರ್ಕ ಇದ್ದದ್ದು ನಿಜ. ಆದರೆ ಪರಿಸರ ಸಚಿವನಾಗಿ ಅಧಿಕಾರ ಸ್ವೀಕರಿಸಿದ ನಂತರ ಯಾವುದೇ ಕಂಪನಿಯ ಯಾವುದೇ ಪ್ರತಿನಿಧಿಯನ್ನು ನಾನು ಭೇಟಿಯಾಗಿಲ್ಲ."

- ಜೈರಾಂ ರಮೇಶ್

"ಮೊನ್ಸಾಂಟೋ ಕಂಪನಿ ಬೀಜ ಉದ್ಯಮಕ್ಕೆ ಇಳಿಯುತ್ತಿದ್ದಂತೆ ಆ ಕಂಪನಿ ಸರಬರಾಜು ಮಾಡುತ್ತಿದ್ದ ಬೀಜಕ್ಕೆ ಕುಲಾಂತರಿ ಜೀನುಗಳನ್ನು ಬೆರೆಸುತ್ತಿರುವ ಮಾಹಿತಿ ನನಗೆ ತಿಳಿದುಬಂತು. ಇದರರ್ಥ ರೈತರು ಪ್ರತಿಬಾರಿ ಬೆಳೆ ಬೆಳೆಯುವಾಗಲೂ ದುಬಾರಿ ಬೆಲೆ ತೆತ್ತು ಕಂಪನಿಯಿಂದ ಬೀಜ ಖರೀದಿಸಲೇ ಬೇಕು ಎಂದಾಗುತ್ತದೆ."

-ಜಾಗದೀಶನ್, ಮೊನ್ಸಾಂಟೋ ಕಂಪನಿಯ ಭಾರತೀಯ ಕಚೇರಿಯ ಮಾಜಿ ನಿರ್ದೇಶಕ

ಇದು ಗುಜರಾತಿನ ರಾಷ್ಟ್ರಗೀತೆ!

"ಮೋದಿಯೇ ನಿಮ್ಮ ರಾಮ. ಮೋದಿಯೇ ನಿಮ್ಮ ರಹೀಮ. ಮೋದಿಯೇ ನಿಮ್ಮ ಯೇಸು. ಆ ಶಬರಿಗೆ ರಾಮ ಮೋಕ್ಷ ಕರುಣಿಸಿದಂತೆ ಈ ಮೋದಿ ನಿಮ್ಮ ವಿಮೋಚನೆಗೆ ಬಂದಿದ್ದಾರೆ."

- ಗುಜರಾತಿನ ಡಾಂಗ್ ಜಿಲ್ಲೆಯ ಜಿಲ್ಲಾಧಿಕಾರಿ

ಈ ಟೀಚರನ್ನು ಪಾಸು ಮಾಡಬಹುದು!

"ಪರೀಕ್ಷೆಯಲ್ಲಿ ನಕಲು ಮಾಡಲು ಹೋಗಿ ಸಿಕ್ಕಿ ಬೀಳುವ ಬದಲಿಗೆ ಅಧಿಕೃತವಾಗಿಯೇ ಪುಸ್ತಕಗಳನ್ನು ನೋಡಿ ಪರೀಕ್ಷೆ ಬರೆಯಲು ಅವಕಾಶ ನೀಡುವುದು ಒಳ್ಳೆಯದು. ಆಗ ಯಾವುದೇ ವಿದ್ಯಾರ್ಥಿಗೆ ಪರೀಕ್ಷೆಯೆಂಬ ಪೆಡಂಭೂತ ಕಾಡುವುದಿಲ್ಲ."

- ನಾಗಲಾಂಬಿಕಾ ದೇವಿ, ಶಿಕ್ಷಣ ಆಯುಕ್ತರು

ಈತ ಒಬಾಮಾಗೆ, ಆರೆಸ್ಸೆಸ್ಸಿಗರಿಗೆ ಸುದರ್ಶನ ಚಕ್ರ ಪ್ರಯೋಗಿಸಲು ಕಲಿಸುತ್ತಾನೆ!

"ನಾನು ಇರಾನ್–ಇರಾಕ್‌ಗೆ ಸುದರ್ಶನ ಕ್ರಿಯೆ ಕಲಿಸಿಕೊಟ್ಟ ನಂತರ ಅಲ್ಲಿನ ಜನ ಯುದ್ಧಭೀತಿಯಿಂದ ಹೊರಬಂದರು. ತಮಿಳುನಾಡಿನಲ್ಲಿ ಸುನಾಮಿಯಿಂದ ಅಲ್ಲಿನ ಜನ ಸಮುದ್ರ ಕಂಡು ಹೆದರುತ್ತಿದ್ದರು. ಆದರೆ ಅವರಿಗೆ ಶಿಬಿರ ನಡೆಸಿದ ಮೇಲೆ ಸಮಾಧಾನಗೊಂಡರು."

-ರವಿಶಂಕರ ಸ್ವಾಮೀಜಿ

ಬೊಗಳೆ ದಾಸಯ್ಯನ ಅಸಲಿ ಮುಖ!

"ನಿರಂತರ ವಿದ್ಯುತ್ ಕೊಡುವುದು ಅಸಾಧ್ಯ."

-ಯಡಿಯೂರಪ್ಪ

ಆದರೆ ಇದು ಪ್ರಜಾಪ್ರಭುತ್ವ ಮುಖ್ಯಮಂತ್ರಿಗಳೇ!

ರಾಜಪರಂಪರೆ ಆಡಳಿತ ನಡೆಸುತ್ತಿದ್ದಾಗಲೂ ರಾಜಗುರುಗಳು ರಾಜನಿಗೆ ಆಡಳಿತದಲ್ಲಿ ಮಾರ್ಗದರ್ಶನ ಮಾಡುತ್ತಿದ್ದರು. ಈಗಲೂ ಮಠಾಧೀಶರು ಆ ಕೆಲಸ ಮಾಡಬೇಕು."

-ಯಡಿಯೂರಪ್ಪ

ಸರ್ಕಾರದ ಫ್ಯೂಚರ್ ಟ್ರೇಡಿಂಗ್ ಜನತೆಗಿನ್ನು ನೋ ಫ್ಯೂಚರ್!



ಕಂಡಹಾಗೆ

ಗೌರಿ ಲಂಕೇಶ್

ಕಳೆದ ಒಂದು ದಶಕದಿಂದ ಪ್ರತಿವರ್ಷ ಶೇ. ರಷ್ಟು ಏರುತ್ತಿದ್ದ ಹಣದುಬ್ಬರ ಇದೇ ಜನವರಿ ಕ್ಕೇ ಶೇ. 17.94 ರಷ್ಟು ಏರಿತು. ಇದರಿಂದಾಗಿ ಲ್ಲಾ ವಸ್ತುಗಳ ಬೆಲೆ, ಅದರಲ್ಲೂ ನಿತ್ಯ ಅಗತ್ಯ ಸ್ತುಗಳ ಬೆಲೆ ಗಗನಕ್ಕೆ ಏರಿದೆ. ಅಕ್ಕಿ ಕೇಜಿಗೆ –50 ರೂ. ಸಕ್ಕರೆ 45 ರೂ. ಎಣ್ಣೆ 90 ರೂ. ಾಪಿ ನಿಂತಿದೆ. ಪರಿಸ್ಥಿತಿ ಹೀಗಿರುವಾಗ ಧ್ಯಮವರ್ಗ ನೆಮ್ಮದಿಯಿಂದ ವಿಸುವುದಾದರೂ ಹೇಗೆ? ಬಡವರು ದುಕಿರುವುದಾದರೂ ಹೇಗೆ?

ನಿತ್ಯ ಅಗತ್ಯ ವಸ್ತುಗಳ ಬೆಲೆ ಹೀಗೆ ದ್ದರಿಂದ ಎಲ್ಲೆಡೆ ಹಾಹಾಕಾರವೆದ್ದು ಜನ ಭಟಿಸುತ್ತಿದ್ದಾರೆ. ನಿರ್ಲಜ್ಜ ಆಹಾರ ಮಂತ್ರಿ ದ್ ಪವಾರ್ "ಸಕ್ಕರೆ ತಿನ್ನುವ ಅಗತ್ಯವಿಲ್ಲ. ಸಕ್ಕರೆ ದೆ ಸತ್ತವರ್‍ಯಾರೂ ಇಲ್ಲ. ಬದಲಾಗಿ ಸಕ್ಕರೆ ತಿಂದು



ಯಾಬಿಟಿಸ್ ರೋಗವನ್ನು ಹಚ್ಚಿಕೊಂಡು ಸತ್ತವರೇ ಟ್ಟ" ಎಂದು ಹೇಳಿಕೆ ನೀಡಿದ್ದಾನೆ.

ನ್ನು ಯುಪಿಎ ಸರ್ಕಾರದ ನೇತೃತ್ವ ಹಿದಿರುವ ಕಾಂಗ್ರೆಸ್ ಪಕ್ಷ ಕೂಡ ಬೆಲೆ ಗೂ ತನಗೂ ಸಂಬಂಧವೇ ಇಲ್ಲವೆಂಬಂತೆ ಕ್ಕೆಲ್ಲ ಎನ್‌ಸಿಪಿ ಪಕ್ಷದ ನಾಯಕ ಶರದ್ ರ್‌ನೇ ಕಾರಣ ಎಂದು ಬೊಟ್ಟು ಮಾಡುತ್ತಿದೆ. ಹಾಗೆಯೇ ಬಿಜೆಪಿ ಕೂಡ ಬೆಲೆ ಏರಿಕೆಯ ವಲ್ಲಿ ತನ್ನ ರಾಜಕೀಯ ಬೇಳೆ ಯಿಸಿಕೊಳ್ಳಲು ಹವಣಿಸುತ್ತಿದೆ. ಪ್ರಧಾನಿ ಮೋಹನ್ ಸಿಂಗರ ಆರ್ಥಿಕ ನೀತಿಗಳನ್ನು ಲಿಸುವ ಮತ್ತು ತಾನು ಅಧಿಕಾರದಲ್ಲಿದ್ದಾಗ ನೀತಿಯನ್ನು ಪರಿಪಾಲಿಸಿದ ಬಿಜೆಪಿಗೆ ಬೆಲೆ ಏರಿಕೆ ಕುರಿತು ಪ್ರತಿಭಟಿಸುವ ನೈತಿಕತೆ ಇರದಿದ್ದರೂ ತನ್ನ ಎಂದಿನ ಕೂಗುಮಾರಿ ಸ್ವಭಾವವನ್ನು ತೋರಿಸುತ್ತಿದೆ.

ಸಾಮಾನ್ಯವಾಗಿ ಬೇಡಿಕೆ ಮತ್ತು ಪೂರೈಕೆ **(demand-supply)** ನಡುವೆ ಏರುಪೇರುಗಳಾದಾಗ ಬೆಲೆ ಏರಿಕೆ ಸಂಭವಿಸುತ್ತದೆ. ಹಾಗೆಯೇ ಬೇಡಿಕೆಯನ್ನು ತೂಗುವಷ್ಟು ಅಗತ್ಯ ವಸ್ತುಗಳ ಪೂರೈಕೆ ಇರದಿದ್ದರೆ ಅದಕ್ಕೆ ಸರ್ಕಾರದ ಅದಕ್ಷತೆಯೇ ಕಾರಣವಾಗಿರುತ್ತದೆ.

ಆದರೆ ಈ ಬಾರಿ ಹಾಗಾಗಿಲ್ಲ. ಒಂದೆಡೆ ಕೃಷಿ ಉತ್ಪತ್ತಿಯೂ ಕಡಿಮೆಯಾಗಿಲ್ಲ, ಇನ್ನೊಂದೆಡೆ ಸರ್ಕಾರವು ಅದಕ್ಷತೆಯನ್ನು ಮೆರೆದಿಲ್ಲ. ಹಾಗಿದ್ದರೂ ಅದೇಕೆ ನಿಯಂತ್ರಣಕ್ಕೆ ಸಿಗದಂತೆ ಬೆಲೆಗಳು ಏರುತ್ತಿವೆ? ಉತ್ತರ ಸುಲಭ. ಕಾಂಗ್ರೆಸ್ ನೇತೃತ್ವದ ಯುಪಿಎ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ **'futures trading'** ಅದಿ ಆಹಾರ ಧಾನ್ಯಗಳನ್ನು ಸೇರಿಸಿದೆ. **futures trading** ನ ಅರ್ಥವೇ ಇವತ್ತು ಸಾಮಾನನ್ನು ಕೊಂಡು, ಅದನ್ನು ಬೇಕಾದಷ್ಟು ದಿನ ತನ್ನ ಬಳಿಯೇ ಇಟ್ಟುಕೊಂಡು ಮುಂದೊಂದು ದಿನ ಹೆಚ್ಚಿನ ಬೆಲೆಗೆ ಮಾರುವುದು. ಈಗ ಈ ದಂಧೆಯಲ್ಲಿ ಹಲವಾರು ಅಂತರರಾಷ್ಟ್ರೀಯ ಕಂಪನಿಗಳೂ ಮತ್ತು ರಿಲೆಯನ್ಸ್‌ನಂತರ 'ಭಾರತೀಯ' ಕಂಪನಿಗಳೂ ಸಕ್ರಿಯವಾಗಿವೆ. ಅವೇ ಸದ್ಯಕ್ಕೆ ಮಾರುಕಟ್ಟೆಯಲ್ಲಿ ಅಗತ್ಯವಸ್ತುಗಳ ಅಭಾವವನ್ನು ಸೃಷ್ಟಿಸಿ ಬೆಲೆಗಳು ಗಗನಕ್ಕೇರುವಂತೆ ಮಾಡಿವೆ.

ಇದೆಲ್ಲ ಬಿಜೆಪಿಗಳಿಗೆ ಗೊತ್ತಿಲ್ಲ ಎಂದಲ್ಲ. ಅವರಿಗೆ ಚೆನ್ನಾಗಿಯೇ ಗೊತ್ತಿದೆ. ಯಾಕೆಂದರೆ ಈ **futures trading** ಬಿಸಿನೆಸ್‌ನಲ್ಲಿ ಕೈಹಾಕಿರುವ ಮಾರ್ವಾಡಿಗಳು ಮತ್ತು ವರ್ತಕರೂ ಬಿಜೆಪಿಯ ಬೆಂಬಲಿಗರೇ ಆಗಿದ್ದಾರೆ. ಹಾಗೆಯೇ ಇದು ಕಾಂಗ್ರೆಸ್‌ಗೂ ಗೊತ್ತಿದೆ. ಯಾಕೆಂದರೆ ಕಾಂಗ್ರೆಸ್‌ನ ಖಾಸಗೀಕರಣ ಸಿದ್ಧಾಂತವನ್ನು ಬೆಂಬಲಿಸುವ ಬಂಡವಾಳಶಾಹಿಗಳೂ ಕಾಂಗ್ರೆಸ್ ಪಕ್ಷದ ಬೆಂಬಲಿಗರೇ. ಇಷ್ಟಾದರೂ ಬಿಜೆಪಿ ಭಾರತದ ರಸ್ತೆಗಳಲ್ಲಿ ಬೆಲೆ ಏರಿಕೆ ವಿರುದ್ಧ ದೊಂಬರಾಟ ಮಾಡುತ್ತಿದೆ; ಕಾಂಗ್ರೆಸ್ ತನಗೇನೂ ಗೊತ್ತಿಲ್ಲದಂತೆ ಬೆರಳು ಚೀಪುವ ನಟನೆ ಆಡುತ್ತಿದೆ.

ಇನ್ನು ಪ್ರಸ್ತುತ ಪರಿಸ್ಥಿತಿಗೆ ಸರ್ಕಾರದ ಅದಕ್ಷತೆಯಂತೂ ಕಾರಣವಲ್ಲವೇ ಅಲ್ಲ. ಬದಲಿಗೆ ಅದು ಬಹಳ ದಕ್ಷತೆಯಿಂದ ಸಾಮಾನ್ಯ ಜನರಿಗೆ ದ್ರೋಹ ಬಗೆದು, ಕಾರ್ಪೊರೇಟ್ ಕಂಪನಿಗಳ ಲಾಭ ಹೆಚ್ಚಾಗುವಂತೆ ನೋಡಿಕೊಳ್ಳುತ್ತಿದೆ. ಈ ನೀತಿಯ ಮುಂದುವರಿಕೆಯಾಗಿ ಸದ್ಯದಲ್ಲೇ ಗ್ಯಾಸ್, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನೂ ಏರಿಸಲು ಸರ್ಕಾರ ಚಿಂತಿಸುತ್ತಿದೆ. ಹಾಗೆ ಮಾಡಿದರೆ ಅದರಿಂದ ಸಾಮಾನ್ಯ ಜನರಿಗೆ ನಷ್ಟ ಮತ್ತು ರಿಲೆಯನ್ಸ್ ಹಾಗು ಎಸ್ಸಾರ್ ತರಹದ ತೈಲ ಕಂಪನಿಗಳಿಗೆ ಲಾಭವಾಗುತ್ತದೆ ಎಂದು ಶಿವಸುಂದರ್ ಅವರು ತಮ್ಮ ಈ ವಾರದ ಅಂಕಣ 'ಚಾರ್ವಾಕ'ದಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಅದನ್ನು ಓದಿ.

ಹಾಗೊಮ್ಮೆ ಸರ್ಕಾರವು ಡೀಸೆಲ್ ಬೆಲೆಯನ್ನು ಹೆಚ್ಚಿಸಿದ್ದೇ ಆದರೆ ಪರಿಣಾಮವಾಗಿ ಎಲ್ಲದರ ಬೆಲೆಯೂ ಮತ್ತಷ್ಟು ಏರಿ ಜನಸಾಮಾನ್ಯರನ್ನು ಇನ್ನಷ್ಟು ಕಷ್ಟಗಳಿಗೆ ದೂಡಲಿದೆ.


ಬೆಲೆ ಏರಿಕೆಯಿಂದಾಗಿ ಒಂದೆಡೆ ರೈತರಿಗೇನು ಹೆಚ್ಚು ಹಣ ಬಂದಿಲ್ಲ, ಇನ್ನೊಂದೆಡೆ ಜನಸಾಮಾನ್ಯರಿಗೂ ಸಿಗುತ್ತಿಲ್ಲ, ಆದರೆ ಈ ಎರಡು ಸಮುದಾಯಗಳ ನಡುವೆ ಇರುವ ಮಧ್ಯವರ್ತಿಗಳಾದ ವರ್ತಕರಿಗೆ ಮತ್ತು **futures** ಕಂಪನಿಗಳಿಗೆ ಅಪಾರ ಲಾಭವಾಗುತ್ತಿದೆ. ನಾಳಿನ ಚುನಾವಣೆಯಲ್ಲಿ ಇದೇ ವರ್ತಕರು ಮತ್ತು ಕಂಪನಿಗಳು ರಾಜಕೀಯ ಪಕ್ಷಗಳಿಗೆ ಹಣದ ಹೊಳೆಯನ್ನು ಹರಿಸುತ್ತಾರೆ. ಅದೇ ಪಕ್ಷಗಳು ಮತ್ತಷ್ಟು ಬೊಗಳೆ ಆಶ್ವಾಸನೆಗಳನ್ನು ಕೊಟ್ಟು, ಹಣ ಕೊಟ್ಟು ಮತಗಳನ್ನು ಗಿಟ್ಟಿಸಿ ಅಧಿಕಾರಕ್ಕೇರುತ್ತವೆ...

ಇಲ್ಲಿ ರೈತರ ಬಗೆಗಿನ ಕಾಳಜಿಯಾಗಲೀ, ಜನಸಾಮಾನ್ಯರ ಪರವಾಗಿನ ನೀತಿ, ನಿಯಮಗಳಾಗಲಿ ಇಲ್ಲವೇ ಇಲ್ಲ. ಬದಲಾಗಿ ಎಲ್ಲರನ್ನೂ ಮುಕ್ಕಿ ತಿನ್ನುವವರೇ ಆಗಿದ್ದಾರೆ ರಾಜಕಾರಣಿಗಳು, ಉದ್ಯಮಪತಿಗಳು ಮತ್ತು ಮಾರಾಟಗಾರರು.....

ಈ ಮಧ್ಯೆ ಮಾರ್ಚ್ ತಿಂಗಳ ನಂತರ ಅಗತ್ಯ ವಸ್ತುಗಳ ಬೆಲೆ ಮತ್ತಷ್ಟು ಏರಬಹುದು ಎಂದು ಹಲವಾರು ಆರ್ಥಿಕ ತಜ್ಞರು ಎಚ್ಚರಿಸಿದ್ದಾರೆ... ಇಂತಹ ದೇಶದಲ್ಲಿ ಬಡವರ ನೋವು, ರೈತರ ಕಷ್ಟ, ಮಧ್ಯಮ ವರ್ಗದ ಚಿಂತೆ ಆಳುವವರಿಗೆ ಅರ್ಥವಾಗುವುದಾದರೂ ಹೇಗೆ? ಈ ದೇಶ ಉದ್ಧಾರವಾಗುವುದಾದರೂ ಎಂದು?

ಒಂದು ರಿಪೋರ್ಟ್ ಕಾರ್ಡ್ ಲಂಕೇಶ್ 75

ಬರುವ ಮಾರ್ಚ್ 6 ಮತ್ತು 7 ರಂದು ನಡೆಯಲಿರುವ 'ಲಂಕೇಶ್ 75' ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆಗಳು ನಡೆಯುತ್ತಿವೆ. ಆ ಕಾರ್ಯಕ್ರಮವನ್ನು ನಮ್ಮೆಲ್ಲರ ನೆಚ್ಚಿನ ಲೇಖಕಿ ವೈದೇಹಿ ಅವರು ಉದ್ಘಾಟಿಸಲಿದ್ದಾರೆ. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ದೇವನೂರು ಮಹಾದೇವ ವಹಿಸಿಕೊಳ್ಳುತ್ತಿದ್ದಾರೆ. ಹಾಗೆಯೇ ಸಮಾರೋಪ ಭಾಷಣವನ್ನು ನಮ್ಮ ಮೆಚ್ಚಿನ ಯು.ಆರ್. ಅನಂತಮೂರ್ತಿ ಅವರು ಮಾಡಲಿದ್ದಾರೆ.



ಈ ಎರಡೂ ದಿನ ಕಿ.ರಂ. ನಾಗರಾಜ್ ಮತ್ತು ಜಿ. ರಾಜಶೇಖರ ಅವರುಗಳಿಂದ ವಿಶೇಷ ಉಪನ್ಯಾಸಗಳಿರುತ್ತವೆ. ಹಾಗೆಯೇ ವಿವಿಧ ಚರ್ಚಾಗೋಷ್ಠಿಗಳಲ್ಲಿ ರಾಜ್ಯದ ಪ್ರಮುಖ ಬರಹಗಾರರು, ಚಿಂತಕರು, ಹೋರಾಟಗಾರರು ಭಾಗವಹಿಸುತ್ತಿದ್ದಾರೆ. ಅವರೆಲ್ಲ ಲಂಕೇಶರ ಸಾಹಿತ್ಯ ಪತ್ರಿಕೋದ್ಯಮ, ರಾಜಕೀಯ, ಸಾಂಸ್ಕೃತಿಕ ಕಾಳಜಿಗಳನ್ನು ಚರ್ಚಿಸಲಿದ್ದಾರಲ್ಲದೆ, ನಮ್ಮೆಲ್ಲರ ಮುಂದೆ ಈಗಿರುವ ಸವಾಲುಗಳನ್ನು ಹೇಗೆ ಎದುರಿಸಬೇಕೆಂದೂ ಚಿಂತಿಸಲಿದ್ದಾರೆ.

ಈಗಾಗಲೇ ಈ ಕಾರ್ಯಕ್ರಮದ ಬಗ್ಗೆ ಎಲ್ಲೆಡೆ ಎಂತಹ ಉತ್ಸಾಹ ಮೂಡಿದೆ ಎಂದರೆ ಅಪ್ಪನ ಅಭಿಮಾನಿಗಳು, ಪತ್ರಿಕೆಯ ಓದುಗರು, ರಾಜ್ಯದ ನೆಲ-ನುಡಿ ಬಗ್ಗೆ ಅಪಾರ ಕಾಳಜಿ ಹೊಂದಿರುವವರು ನಮ್ಮನ್ನು ಸಂಪರ್ಕಿಸಿ "ಈ ಕಾರ್ಯಕ್ರಮ ನಮ್ಮಲ್ಲಿ ಒಂದು ರೀತಿಯ ಸಂಚಲನ ಉಂಟುಮಾಡಿದೆ. ನಾವು ಬಂದೇ ಬರುತ್ತೇವೆ" ಎಂದು ಹೇಳಿದ್ದಾರೆ.

ಈ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ನಾನು ಹೇಳುವುದಕ್ಕಿಂತ ಅಪ್ಪನ ಒಡನಾಡಿ ಎಚ್.ಎಲ್. ಕೇಶವಮೂರ್ತಿ ಅವರು ಹೇಳಿದ್ದನ್ನು ಇಲ್ಲಿ ಕಾಣಿಸಿದರೆ ಸೂಕ್ತ ಎನಿಸುತ್ತದೆ. ಇಡೀ ಎರಡು ದಿನ ಗೋಷ್ಠಿಗಳ ವಿವರಗಳನ್ನು ನಾನು ಅವರಿಗೆ ಹೇಳುತ್ತಿದ್ದಂತೆ "ಇದು ಅತ್ಯಂತ ಮುಖ್ಯ ಸಮ್ಮೇಳನವಾಗುತ್ತದೆ. ಅಷ್ಟೇ ಅಲ್ಲ, ಇದು ನಮ್ಮೆಲ್ಲರ ಕಾರ್ಯಕ್ರಮದಂತಿದೆ" ಎಂದು ಸಂತೋಷಪಟ್ಟರು.

ಹಿರಿಯರಾದ ಕಿ.ರಂ. ನಾಗರಾಜ್, ಗೆಳತಿ ಡಾ. ಎಂ.ಎಸ್.ಆಶಾದೇವಿ ಮತ್ತು ನಮ್ಮ ತಂಡ ರೂಪಿಸಿರುವ ಈ ಕಾರ್ಯಕ್ರಮದ ಒಂದು ಹೈಲೈಟ್ ಮಾರ್ಚ್ ಆರರ ಸಂಜೆ ನಡೆಯಲಿರುವ ಕವಿಗೋಷ್ಠಿ! ಇದರಲ್ಲಿ ಭಾಗವಹಿಸಲು ಎಷ್ಟು ಜನ ಉತ್ಸುಕರಾಗಿದ್ದಾರೆಂದರೆ ಒಂದು ರೀತಿಯ ನೂಕುನುಗ್ಗಲು ಕಂಡುಬರುತ್ತಿದೆ. ಆದರೆ ಅದರಲ್ಲಿ ಹಿರಿಯರು, ಹೊಸ ಪ್ರತಿಭೆಗಳು, ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು ಇರುವಂತೆ ನೋಡಿಕೊಳ್ಳುತ್ತಿದ್ದೇವೆ.

ಅಪಾರ ಕಾಳಜಿ, ಆಸಕ್ತಿ ಮತ್ತು ಪ್ರೀತಿಯಿಂದ ರೂಪಿಸಿರುವ ಈ ಕಾರ್ಯಕ್ರಮ ತುಂಬಾ ಅಂದವಾಗಿ ಮೂಡಿಬರುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

ನೀವೂ ಬರುತ್ತೀರಲ್ಲಾ?!

ಸಮ್ಮೇಳನದಲ್ಲಿ ಪುಸ್ತಕ ಮಳಿಗೆ

ಗದಗದಲ್ಲಿ ನಡೆಯಲಿರುವ ಈ ಬಾರಿಯ ಅಖಿಲ ಕರ್ನಾಟಕ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲಂಕೇಶ್ ಮತ್ತು ಗೈಡ್ ಪ್ರಕಾಶನದ ಮಳಿಗೆ ತೆರೆಯಲಿದ್ದು, ಅಲ್ಲಿ ನಮ್ಮ ಪ್ರಕಾಶನದ ಎಲ್ಲ ಪುಸ್ತಕಗಳನ್ನೂ ಭಾರಿ ರಿಯಾಯ್ತಿ ದರದಲ್ಲಿ ಮಾರಾಟ ಮಾಡಲಾಗುತ್ತದೆ.

ಪುಸ್ತಕ ಪ್ರೇಮಿಗಳು ಈ ಸಂದರ್ಭವನ್ನು ಸದುಪಯೋಗ ಪಡಿಸಿಕೊಳ್ಳಿ

ಅಮೆರಿಕವೀಗ ಅಧಿಕೃತವಾಗಿ ಪೋಲೀಸ್ ರಾಜ್ಯ!

'ನಮ್ಮ ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶ' ಎಂದು ನಮ್ಮನ್ನಾಳುವವರು ವಿಶ್ವದೆದುರು ಎದೆತಟ್ಟಿ ಹೇಳಿಕೊಳ್ಳುತ್ತಾರೆ. ಅಸಲಿಗೆ ನಮ್ಮ ದೇಶದ ತಳಮಟ್ಟದಲ್ಲಿ ನಾಗರಿಕರು ಎಂಥ ಪ್ರಜಾತಂತ್ರವನ್ನು ಅನುಭವಿಸುತ್ತಿದ್ದಾರೆಂಬುದು ದೇಶದ ನಾಗರಿಕರಾಗಿರುವ ನಮಗೆಲ್ಲಾ ಗೊತ್ತೇ ಇದೆ. ಅದರಂತೆಯೇ 'ನಮ್ಮದು ವಿಶ್ವದ ಅತ್ಯಂತ ಪುರಾತನ ಪ್ರಜಾಪ್ರಭುತ್ವ' ಎಂದು ಅಮೆರಿಕ ತನ್ನ ಬೆನ್ನನ್ನು ತಟ್ಟಿಕೊಳ್ಳುತ್ತದೆ. ಅಮೆರಿಕ ತನ್ನ ವಿರುದ್ಧ ಎದೆಸೆಟೆಸಿ ನಿಲ್ಲುವ ಅಫಘಾನಿಸ್ತಾನ್, ಇರಾಕ್‌ನಂಥ ದೇಶಗಳ ಮೇಲೆ ಸರ್ವಾಧಿಕಾರಿಯಂತೆ ವರ್ತಿಸುತ್ತದೆ.



ಇತರೆ ದೇಶಗಳ ಅಮಾಯಕ ಜನರ ಮೇಲೆ ಹೇಳತೀರದ ದೌರ್ಜನ್ಯಗಳನ್ನು ನಡೆಸುತ್ತಾ ನಿರಂತರವಾಗಿ ಮಾನವ ಹಕ್ಕುಗಳ ಉಲ್ಲಂಘನೆಯಲ್ಲಿ ಅಮೆರಿಕ ತೊಡಗಿದ್ದರೂ ಅದು ನೈಜ ಪ್ರಜಾತಂತ್ರವನ್ನು ಪರಿಪಾಲಿಸುತ್ತದೆ ಎಂದೇ ಬಹಳಷ್ಟು ಜನ ನಂಬಿದ್ದಾರೆ. ಆದರೆ ವಾಸ್ತವ ಅದಕ್ಕಿಂತ ಭಿನ್ನವಾಗಿದೆ. ಯಾವುದೇ ಪ್ರಭುತ್ವ ಒಮ್ಮೆ ಸರ್ವಾಧಿಕಾರಿ ಫ್ಯಾಸಿಸ್ಟ್ ಪ್ರಭುತ್ವವಾಗಿ ಹೊರಹೊಮ್ಮಿತೆಂದರೆ ಅದಕ್ಕೆ ತನ್ನವರು, ಬೇರೆಯವರು ಎಂಬ ಭೇದವೇ ಇರುವುದಿಲ್ಲ, ಅಧಿಕಾರ, ಕೇಂದ್ರವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವವರು ಬದಿಗಿರಲಿ, ಯಾವುದೇ ಒಬ್ಬ ವ್ಯಕ್ತಿ ಅಪಾಯಕಾರಿ ಎಂಬ 'ಅನುಮಾನ' ಬಂದರೂ ಆತ/ಆಕೆ ಎಷ್ಟೇ ಅಮಾಯಕರಾಗಿದ್ದರೂ ಯಾವ ಮುಲಾಜೂ ತೋರದೆ ಅವರನ್ನು ನಿರ್ದಯವಾಗಿ ಹೊಸಕಿ ಹಾಕುತ್ತದೆ. ಅಮೆರಿಕದ ಇಂಥ ಕ್ರೂರತೆಗೆ ಇತ್ತೀಚಿನ ಬಲಿಪಶು ಎಂದರೆ ಎಂದರೆ ಡಾ.ಆಫಿಯ ಸಿದ್ಧಕಿ.


38 ವರ್ಷ ವಯಸ್ಸಿನ ಆಫಿಯ ಸಿದ್ಧಕಿ ಮೂಲತಃ ಪಾಕಿಸ್ತಾನ ಮೂಲದ ಮಹಿಳೆ. ಪಾಕಿಸ್ತಾನದ ಕುಲೀನ ಕುಟುಂಬದಲ್ಲಿ ಹುಟ್ಟಿದ ಆಕೆ ತನ್ನ ಆರಂಭಿಕ ವಿದ್ಯಾಭ್ಯಾಸವನ್ನೆಲ್ಲಾ ಪಾಕಿಸ್ತಾನದಲ್ಲೇ ಮಾಡಿ ನಂತರ 1990ರಲ್ಲಿ ಅಮೆರಿಕಕ್ಕೆ ಹೋಗಿ ಅಲ್ಲಿನ ಪ್ರಖ್ಯಾತ ವಿಶ್ವವಿದ್ಯಾಲಯಗಳಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿ ಸುಪ್ರಸಿದ್ಧ ನರತಜ್ಞೆಯಾಗಿ ಹೊರಹೊಮ್ಮಿದರು. ವಿದ್ಯಾಭ್ಯಾಸ ಮಾಡುವಾಗಲೇ ಅವರು ಮಂಡಿಸಿದ 'ಪಾಕಿಸ್ತಾನದಲ್ಲಿ ಇಸ್ಲಾಮೀಕರಣ ಹಾಗೂ ಮಹಿಳೆಯರ ಮೇಲೆ ಅದರ ಪರಿಣಾಮಗಳು' ಎಂಬ ಸಂಶೋಧನಾ ಪ್ರಬಂಧಕ್ಕೆ ಕಾರ್ರೆಲ್ ಎಲ್ ವಿಲ್ಸನ್ ಪುರಸ್ಕಾರ ದೊರಕಿತ್ತು, ಹಲವು ವರ್ಷಗಳಿಂದ ಅಮೆರಿಕದಲ್ಲೇ ನೆಲೆಸಿದ್ದರಿಂದ ಅವರು ಅಧಿಕೃತವಾಗಿ ಅಮೆರಿಕದ ಪೌರತ್ವವನ್ನೂ ಪಡೆದುಕೊಂಡರು. 1995ರಲ್ಲಿ ಪಾಕಿಸ್ತಾನದ ಅರವಳಿಕೆ ವೈದ್ಯ ಡಾ. ಅಮ್ಜಾದ್ ಮೊಹ್ಮದ್ ಖಾನ್ ಅವರೊಂದಿಗೆ ಆಫಿಯ ಅವರ ಮದುವೆಯಾಯಿತು. ಮೂವರು ಮಕ್ಕಳೂ ಆದರು. ಇಬ್ಬರೂ ಸೇರಿಕೊಂಡು ಬೋಸ್ಟನ್‌ನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಸ್ಲಾಮಿಕ್ ರಿಸರ್ಚ್ ಅಂಡ್ ಟ್ರೇನಿಂಗ್ ಎಂಬ ಸಂಸ್ಥೆಯನ್ನೂ ತೆರೆದು ನಡೆಸಲಾರಂಭಿಸಿದರು.

2001ರಲ್ಲಿ ಅಮೆರಿಕದ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಕಟ್ಟಡಗಳ ಮೇಲಿನ ಉಗ್ರರ ದಾಳಿ ಅಮೆರಿಕವನ್ನೂ ಒಳಗೊಂಡಂತೆ ಇಡೀ ವಿಶ್ವದ ಅನೇಕ ಮುಸಲ್ಮಾನರ ಬದುಕಿನ ಗತಿಯನ್ನೇ ಬದಲಿಸಿದಂತೆ ಆಫಿಯ ಅವರ ಜೀವನದಲ್ಲೂ ಬಿರುಗಾಳಿಯನ್ನೆಬ್ಬಿಸಿತು. ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ಈ ದಾಳಿಗೆ ಒಸಾಮಾ ಬಿನ್ ಲಾಡೆನ್ ಮತ್ತು ಅವನ ಅಲ್‌ಕೈದಾ ಸಂಘಟನೆಯೇ ಕಾರಣವೆಂದು ಆರೋಪಿಸಿ ಅಫಘಾನಿಸ್ತಾನದ ಮೇಲೆ ಯುದ್ಧ ಸಾರಿದರೆ ಅಮೆರಿಕದ ಕುಖ್ಯಾತ ತನಿಖಾ ಸಂಸ್ಥೆ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಶನ್ (ಎಫ್‌ಬಿಐ) ಇಡೀ ಅಮೆರಿಕದಾದ್ಯಂತ ಮುಸಲ್ಮಾನರನ್ನು ಹುಡುಕಿ ಹುಡುಕಿ ಚಿತ್ರಹಿಂಸೆ ಕೊಡಲಾರಂಭಿಸಿತು. ಆಫಿಯಾ ಹತ್ತು ಸಾವಿರ ಡಾಲರ್ ಮೌಲ್ಯದ ಕತ್ತಲಲ್ಲೂ ನೋಡಬಲ್ಲ ಕನ್ನಡಕವನ್ನು ಖರೀದಿಸಿದ್ದನ್ನೇ ನೆಪ ಮಾಡಿಕೊಂಡು ಆಕೆಯನ್ನು ಬಂಧಿಸಿ ವಿಚಾರಣೆ ನಡೆಸಲಾರಂಭಿಸಿತು. ಕೊನೆಗೆ ಎಫ್‌ಬಿಐ ಪೊಲೀಸರ ಕಾಟ ತಾಳಲಾರದೆ ಆಕೆ ಅಮೆರಿಕವನ್ನೇ ತೊರೆದು ಪಾಕಿಸ್ತಾನಕ್ಕೆ ಬರಬೇಕಾಯಿತು. ಆದರೂ ಎಫ್‌ಬಿಐಗೆ ಆಕೆಯ ಮೇಲಿದ್ದ ಅನುಮಾನ ಮಾತ್ರ ಹೋಗಿರಲಿಲ್ಲ.

2003ರ ಮಾರ್ಚ್‌ನಲ್ಲಿ ಆಫಿಯಾ ಇದ್ದಕ್ಕಿದ್ದಂತೆ ಕಾಣೆಯಾದಳು. 2008ರ ತನಕ ಆಕೆ ಎಲ್ಲಿದ್ದಾಳೆಂಬುದೇ ಪತ್ತೆಯಾಗಿರಲಿಲ್ಲ, ಅಸಲೀಯತ್ತೇನೆಂದರೆ ಅಮೆರಿಕದ ಗೂಢಚರ್ಯೆ ಸಂಸ್ಥೆಯವರು ಆಕೆಯನ್ನು ಅಪಹರಿಸಿ ಅಫಘಾನಿಸ್ತಾನದ ಬಗ್ರಾಮ್ ಎಂಬ ಭಯಾನಕ ಕಾರಾಗೃಹದಲ್ಲಿ ಏಕಾಂತ ಸೆರೆವಾಸದಲ್ಲಿ ಬಂಧಿಸಿಟ್ಟಿದ್ದರು.

ಆಕೆಯನ್ನು ಬಂಧಿಸುವಾಗ ಎಂಟು ತಿಂಗಳ ಮಗುವನ್ನೂ ಒಳಗೊಂಡಂತೆ ಆಕೆಯ ಮೂವರು ಮಕ್ಕಳು ಕೂಡ ಆಕೆಯ ಜೊತೆಗಿದ್ದರು. 2008ರಲ್ಲಿ ಅಮೆರಿಕನ್ ಗುಪ್ತಚರ ಅಧಿಕಾರಿಗಳು ಆಕೆಯ ಮೇಲೆ ಚಿತ್ರಹಿಂಸೆ ನಡೆಸುತ್ತಿದ್ದಾಗ, ಅದನ್ನು ತಾಳಲಾರದೇ ಆಕೆ ಪ್ರಾಣಸಂಕಟದಿಂದ ಕಿರುಚಾಡುತ್ತಿರುವುದನ್ನು ಬ್ರಿಟಿಷ್ ಪತ್ರಕರ್ತರೊಬ್ಬರು ಆಕಸ್ಮಾತ್ತಾಗಿ ಕೇಳಿಸಿಕೊಂಡು ಹೊರಜಗತ್ತಿಗೆ ತಿಳಿಸಿದ ಮೇಲಷ್ಟೇ ಆಫಿಯಾ ಅಮೆರಿಕದ ವಶದಲ್ಲಿದ್ದಾಳೆಂಬುದು ಗೊತ್ತಾಗಿದ್ದು, ಅಲ್ಲಿಯ ತನಕ 'ಸಿದ್ಧಕಿಗಾಗಿ ಹುಡುಕಾಟ ನಡೆಸುತ್ತಿದ್ದೇವೆ, ಆದರೆ ಆಕೆಯಿನ್ನೂ ಸಿಕ್ಕಿಲ್ಲ' ಎಂದು ವಾದಿಸುತ್ತಿದ್ದ ಅಮೆರಿಕದ ರಕ್ಷಣಾ ಅಧಿಕಾರಿಗಳು ಈಗ ಅನಿವಾರ್ಯವಾಗಿ ಆಕೆ ತಮ್ಮ ವಶದಲ್ಲಿರುವುದನ್ನು ಒಪ್ಪಿಕೊಳ್ಳಲೇಬೇಕಾಯಿತು.

ವಿಶೇಷ ಎಂದರೆ, ಅಲ್ಲಿಯತನಕ ಆಫಿಯಾಳ ಮೇಲೆ ಯಾವುದೇ ಭಯೋತ್ಪಾದನೆಯ ಪ್ರಕರಣವನ್ನು ದಾಖಲಿಸಿರಲಿಲ್ಲ; ಆದರೆ ನಿತ್ಯ ಚಿತ್ರಹಿಂಸೆಯನ್ನು ಮಾತ್ರ ಕೊಡುತ್ತಲೇ ಇದ್ದರು; ಹಲವಾರು ಬಾರಿ ಆಕೆಯ ಮೇಲೆ ಅತ್ಯಾಚಾರವನ್ನೂ ನಡೆಸಿದರು. ಈಗ ದಿಢೀರನೇ ಆಕೆ ತಮ್ಮ ವಶದಲ್ಲಿರುವುದು ಹೊರಜಗತ್ತಿಗೆ ಗೊತ್ತಾದ ತಕ್ಷಣವೇ ತಮ್ಮ ಅಪರಾಧವನ್ನು ಮುಚ್ಚಿಡುವ ಸಲುವಾಗಿ ಆಕೆಯ ಮೇಲೆ ಕೊಲೆ ಪ್ರಯತ್ನದ ಆರೋಪ ಹೊರಿಸಿ ಪ್ರಕರಣ ದಾಖಲಿಸಿದರು. ಅಮೆರಿಕದ ಸೈನಿಕನೊಬ್ಬನಿಂದ ರೈಫಲ್ ಕಿತ್ತುಕೊಂಡು ಆತನ ಮೇಲೆಯೇ ಎರಡು ಸುತ್ತು ಗುಂಡು ಹಾರಿಸಿ ಕೊಲ್ಲುವುದಕ್ಕೆ ಪ್ರಯತ್ನಿಸಿದಳು ಎಂಬುದು ಆಕೆಯ ಮೇಲೆ ಹೊರಿಸಲಾದ ಆರೋಪ! ಆಕೆಯ ಗುಂಡಿನ ದಾಳಿಗೆ ಪ್ರತಿಯಾಗಿ ಇನ್ನೊಬ್ಬ ಸೈನಿಕ ಆಕೆಯ ಮೇಲೆ ಎರಡು ಸುತ್ತು




ಸುತ್ತ-ಮುತ್ತ

ಕುಮಾರ್ ಬುರಡಿಕಟ್ಟಿ

ಗುಂಡು ಹಾರಿಸಿದ್ದರಿಂದ ಆಕೆಯ ಎದೆಯ ಮೇಲೆ ಗಾಯವಾಯಿತು ಎಂಬ ಸಮಜಾಯಿಷಿ ಬೇರೆ. ವಿಶ್ವದ ಅತ್ಯಂತ ಪುರಾತನ ಪ್ರಜಾಪ್ರಭುತ್ವ ರಾಷ್ಟ್ರಕ್ಕೀಗ ತನ್ನ ಮುಖ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದ್ದರಿಂದ ಆಕೆಯ ಮೇಲಿನ ಆರೋಪದ ಸತ್ಯಾಸತ್ಯವನ್ನು ಅರಿಯುವುದಕ್ಕಾಗಿ ಅಮೆರಿಕದ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲು ತೀರ್ಮಾನಿಸಿತು.

ಆಕೆಯ ಮೇಲಿದ್ದ ಆರೋಪವನ್ನು ವಿಚಾರಣೆ ನಡೆಸಿದ ನ್ಯೂಯಾರ್ಕ್ ನ್ಯಾಯಾಲಯ ಮೊನ್ನೆ ಫೆಬ್ರವರಿ 4ರಂದು ತೀರ್ಪಿತ್ತಿದೆ. ಆಕೆಯ ಮೇಲಿದ್ದ ಕೊಲೆಯತ್ನದ ಆರೋಪ ಸಾಬೀತಾಗಿದೆಯೆಂದು ಹೇಳಿರುವ ನ್ಯಾಯಾಲಯ ಆಕೆಗೆ ಬರುವ ಮೇ ಆರರಂದು ಶಿಕ್ಷೆಯನ್ನೂ ಪ್ರಕಟಿಸುವುದಾಗಿ ಹೇಳಿದೆ. ಎಂ-4 ರೈಫಲ್‌ನಿಂದ ಗುಂಡುಹಾರಿಸಿದ್ದಕ್ಕೆ 30 ವರ್ಷ, ಕೊಲೆಯತ್ನಕ್ಕೆ 20 ವರ್ಷ ಹಾಗೂ ಇತರ ಆರೋಪಗಳಿಗೆ ಒಟ್ಟು ಎಂಟು ವರ್ಷ ಶಿಕ್ಷೆ ನೀಡುವ ಸಾಧ್ಯತೆಯಿದೆ. ಇಲ್ಲೊಂದು ವಿಶೇಷ ಗಮನಿಸಿ. ಆಫಿಯಾ ಮೇಲಿದ್ದ ಆರೋಪವನ್ನು ಸಾಬೀತು ಪಡಿಸುವುದಕ್ಕೆ ಒಂದೇ ಒಂದು ಸಾಕ್ಷಾಧಾರ ಇಲ್ಲ, ಕನಿಷ್ಠ ಆಕೆ ಗುಂಡು ಹಾರಿಸಿದ್ದಳೆನ್ನಲಾದ ರೈಫಲ್ ಮೇಲಿದ್ದ ಫಿಂಗರ್ ಪ್ರಿಂಟ್ಸ್‌ಗೂ, ಆಕೆಯ ಫಿಂಗರ್ ಪ್ರಿಂಟ್ಸ್‌ಗೂ ತಾಳೆಯಾಗುವುದಿಲ್ಲ, ಗುಂಡು ಹಾರಿಸಿದ್ದಕ್ಕೂ ಯಾವುದೇ ಪುರಾವೆಯಿಲ್ಲ, ಆಕೆ ಅಲ್‌ಕೈದ ಜೊತೆ ನಂಟು ಹೊಂದಿದ್ದಾಳೆಂಬುದಕ್ಕೂ ಒಂದೇ ಒಂದು ಚಿಕ್ಕ ಸಾಕ್ಷಿ ಪೊಲೀಸರ ಬಳಿಯಿಲ್ಲ.

ನ್ಯಾಯಾಧೀಶನ ಬಳಿಯಿರುವುದು ಪೊಲೀಸರು ಮಾಡಿದ ಆರೋಪ ಮಾತ್ರ. ಕೇವಲ ಆರೋಪ ಮಾತ್ರ. ಆರೋಪವನ್ನೇ ಸಾಕ್ಷಿಯನ್ನಾಗಿ, ಪುರಾವೆಯನ್ನಾಗಿ, ಆಧಾರವನ್ನಾಗಿ ಪರಿವರ್ತಿಸಿಕೊಂಡ ನ್ಯಾಯಾಧೀಶ ಆಕೆಯನ್ನು ತಪ್ಪಿತಸ್ಥೆ ಎಂದು ಘೋಷಿಸಿದ್ದಾನೆ! ಅಸಲಿಗೆ ಆಫಿಯಾಳನ್ನು ಆಕೆಯ ಪುಟ್ಟ ಕಂದಮ್ಮಗಳೊಂದಿಗೆ ಅನ್ಯಾಯವಾಗಿ ಅಪಹರಿಸಿ, ದೇಶದಿಂದ ದೇಶಕ್ಕೆ ಬಲಾತ್ಕಾರದಿಂದ ಕರೆದುಕೊಂಡು ಹೋಗಿ, ಭಯಾನಕ ಚಿತ್ರಹಿಂಸಾ ಶಿಬಿರದಲ್ಲಿ ವರ್ಷಗಟ್ಟಲೆ ಚಿತ್ರಹಿಂಸೆ ಕೊಟ್ಟು, ಬೇಕಾದಾಗಲೆಲ್ಲಾ ಆಕೆಯನ್ನು ರೇಪ್ ಮಾಡಿ, ಆಕೆಯ ಹೊಟ್ಟೆಗೆ ಗುಂಡಿಟ್ಟು ಕೊಲ್ಲುವ ಯತ್ನ ನಡೆಸಿ, ಮಾನಸಿಕವಾಗಿ-ದೈಹಿಕವಾಗಿ ಹಿಂಸಿಸಿದ ಅಧಿಕಾರಿಗಳನ್ನು ವಿಚಾರಣೆಗೊಳಪಡಿಸಬೇಕಿತ್ತು. ಅವರ ಅಪರಾಧ ಸಾಬೀತಾದರೆ ಅವರನ್ನು ಜೈಲಿಗೆ ತಳ್ಳಬೇಕಿತ್ತು, ಆದರೆ ಆಗಿದ್ದೇನು? ಚಿತ್ರಹಿಂಸೆಗೊಳಗಾದವರು ಮತ್ತೆ ಅಧಿಕೃತವಾಗಿ ಜೈಲು ಸೇರಬೇಕಾಗಿ ಬಂದಿದೆ, ಚಿತ್ರಹಿಂಸೆ ಕೊಟ್ಟವರು ಮತ್ತಷ್ಟು ಉತ್ಸಾಹದಿಂದ ತಮ್ಮ 'ಕರ್ತವ್ಯ'ವನ್ನು ಮುಂದುವರೆಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. 'ವಿಶ್ವದ ಪುರಾತನ ಪ್ರಜಾಪ್ರಭುತ್ವ'ವು ತನ್ನ ನಾಗರಿಕರಿಗೆ ನ್ಯಾಯ ಕೊಡುತ್ತಿರುವ ಪರಿಯಿದು. ಈ ಪ್ರಕರಣವನ್ನು ನೋಡಿದರೆ ನಮ್ಮ ದೇಶದ ದೆಹಲಿ ಹೈಕೋರ್ಟ್ ಅಫಜಲ್ ಗುರುಗೆ ಮರಣದಂಡನೆ ವಿಧಿಸಿದ್ದು ನೆನಪಾಗುತ್ತದೆ. ಪಾರ್ಲಿಮೆಂಟಿನ ಮೇಲೆ ನಡೆದ ಉಗ್ರರ ದಾಳಿಗೂ ಅಫಜಲ್ ಗುರುವಿಗೂ ಸಂಬಂಧ ಕಲ್ಪಿಸುವುದಕ್ಕೆ, ದಾಳಿಯಲ್ಲಿ ಆತನೂ ಪರೋಕ್ಷವಾಗಿ ಭಾಗಿಯಾಗಿದ್ದ ಎಂಬುದನ್ನು ಸಾಬೀತುಪಡಿಸಲಿಕ್ಕೆ ಪೊಲೀಸರ ಬಳಿ ಒಂದೇ ಒಂದು ಚಿಕ್ಕ ಸಾಕ್ಷಾಧಾರವೂ ಇರಲಿಲ್ಲ, ಆದರೂ ಆತನಿಗೆ ಮರಣದಂಡನೆ ವಿಧಿಸಲಾಯಿತು. ಇದು 'ವಿಶ್ವದ ಅತಿದೊಡ್ಡ ಪ್ರಜಾತಂತ್ರ'ವು ತನ್ನ ನಾಗರಿಕರಿಗೆ ನ್ಯಾಯ ಒದಗಿಸುತ್ತಿರುವ ಪರಿ.




ಇದೇ ವೇಳೆಯಲ್ಲಿ ಅಮೆರಿಕದಲ್ಲಿ ನಡೆದ ಇನ್ನೊಂದು ಬೆಳವಣಿಗೆ ಆ ದೇಶ ಎತ್ತ ಸಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಆಫಿಯಾಳನ್ನು ತಪ್ಪಿತಸ್ಥೆ ಎಂದು ನ್ಯಾಯಾಲಯ ಘೋಷಣೆ ಮಾಡುವ ಒಂದು ದಿನ ಮುಂಚೆಯಷ್ಟೇ, ಅಂದರೆ ಫೆಬ್ರುವರಿ 3ರಂದು ರಾಷ್ಟ್ರೀಯ ಗುಪ್ತಚರ ಇಲಾಖೆಯ ನಿರ್ದೇಶಕ ಡೆನ್ನಿಸ್ ಬ್ಲೇರ್ ಹೌಸ್ ಇಂಟಲಿಜೆನ್ಸ್ ಕಮಿಟಿಗೆ "ದೇಶಕ್ಕೆ ಅಪಾಯಕಾರಿ ಅನ್ನಿಸಿದರೆ ಸರ್ಕಾರವು ತನ್ನದೇ ನಾಗರಿಕರನ್ನು ಯಾವುದೇ ಬಂಧನ, ವಿಚಾರಣೆಯಿಲ್ಲದೇ ಕೊಂದು ಹಾಕಬಹುದು" ಎಂದು ಸ್ಪಷ್ಟಪಡಿಸಿದ್ದಾನೆ! ಅಂದರೆ, ಒಬ್ಬ ನಾಗರಿಕ ಆ ದೇಶಕ್ಕೆ ಅಪಾಯಕಾರಿ ಅಂತ ಅನ್ನಿಸಿದರೆ ಸಾಕು, ಅನುಮಾನ ಬಂದರೆ ಸಾಕು ಭದ್ರತಾ ಅಧಿಕಾರಿಗಳು ಆತನನ್ನು ಬಂಧಿಸುವ ಅವಶ್ಯಕತೆಯೂ ಇಲ್ಲ, ಆತ ನಿಜಕ್ಕೂ ಅಪಾಯಕಾರಿಯೇ ಎಂದು ವಿಚಾರಿಸಿ ಸತ್ಯವನ್ನು ಅರಿಯುವ ಅವಶ್ಯಕತೆಯೂ ಇಲ್ಲ. ಪಾಯಿಂಟ್ ಬ್ಲಾಂಕ್ ರೇಂಜಿನಲ್ಲಿ ಕೊಂದು ಹಾಕಬಹುದು! ಅಸಲಿಗೆ ಇದು ಅಮೆರಿಕಕ್ಕೆ ಹೊಸತೇನಲ್ಲ, ಅಪಾಯಕಾರಿ ಅನ್ನಿಸಿದ ತನ್ನದೇ ನಾಗರಿಕರನ್ನು ಅದು ಈ ಹಿಂದೆಯೂ ಕೊಂದಿದೆ, ಈಗಲೂ ಕೊಲ್ಲುತ್ತಿದೆ, ಮುಂದೆಯೂ ಕೊಲ್ಲಲಿದೆ. ಆದರೆ, ಡೆನ್ನಿಸ್ ಬ್ಲೇರ್‌ನ ಹೇಳಿಕೆ ಈ ಪ್ರಭುತ್ವ ಕೊಲೆಗಳನ್ನು ಅಧಿಕೃತಗೊಳಿಸುತ್ತಿದೆಯಷ್ಟೆ. ಇದು 'ವಿಶ್ವದ ಪುರಾತನ ಪ್ರಜಾಪ್ರಭುತ್ವ'ದ ಅಸಲೀ ಚಿತ್ರಣ.

ನಮ್ಮಲ್ಲೂ ಒಂದು ಕಾನೂನಿದೆ. ಸಶಸ್ತ್ರಪಡೆಗಳ ವಿಶೇಷಾಧಿಕಾರ ಕಾಯ್ದೆ ಅಂತ. ಅದರ ಪ್ರಕಾರ ಒಬ್ಬ ವ್ಯಕ್ತಿ ಒಂದು ಅಪರಾಧ ಮಾಡಲು ಹೊರಟಿದ್ದಾನೆ ಎಂಬ ಅನುಮಾನ ಬಂದರೆ ಸಾಕು ಒಬ್ಬ ಹೆಡ್ ಕಾನ್‌ಸ್ಟೇಬಲ್ ಕೂಡ ಆತನ ಮೇಲೆ ಗುಂಡುಹಾರಿಸಿ ಕೊಲ್ಲಬಹುದು. ಕೇವಲ ಅನುಮಾನ ಬಂದರೆ ಸಾಕು. ಯಾವುದೇ ಬಂಧನ, ವಿಚಾರಣೆ ಏನೂ ಅವಶ್ಯಕತೆಯಿಲ್ಲ. ಇನ್ನೂ ದುರಂತ ಎಂದರೆ ಹೀಗೆ ಗುಂಡು ಹಾರಿಸಿದ ಅಧಿಕಾರಿಯ ವಿರುದ್ಧ ಕೋರ್ಟಿನಲ್ಲಿ ದಾವೆಯನ್ನೂ ಹೂಡುವಂತಿಲ್ಲ! 'ಇದು ವಿಶ್ವದ ಅತಿದೊಡ್ಡ ಪ್ರಜಾತಂತ್ರ' ಅಸಲೀ ಚಿತ್ರಣ.

ವಿ.ಕ.ದ ಬಣ್ಣ ಬಯಲು ಮಾಡಿದ ಬಿಟಿ ಬದನೆ

ಬಿಟಿ ಬದನೆಗೆ ಕೇಂದ್ರ ಸರ್ಕಾರ ಬ್ರೇಕ್ ಹಾಕಿದೆ. ಆದರೆ ಈ ಬದನೆ ಬೆಳೆಯಲು ಅನುಮತಿ ನೀಡಬೇಕೇ, ಬೇಡವೇ ಎಂಬ ಕುರಿತು ನಡೆದ ಚರ್ಚೆ ಮಾತ್ರ ಕೆಲವರ ಮುಖವಾಡ ಬಯಲು ಮಾಡಿದೆ.

ರಾಜ್ಯದ ಮಟ್ಟಿಗೆ ಹೇಳಬೇಕೆಂದರೆ ಈ ಹಿಂದಿನಿಂದಲೂ ಬಿಟಿ ಬದನೆಯ ಪರವಾಗಿ ಪ್ರಚಾರ ಮಾಡಿದ್ದು ನಂ.1 ಚೆಡ್ಡಿ ಪತ್ರಿಕೆ 'ವಿಜಯ ಕರ್ನಾಟಕ'. ಮಾನ್ಸಾಂಟೋ ಕಂಪನಿಯ ವಿಜ್ಞಾನಿಗಳಾದ ಡಾ. ಎಸ್. ಶಾಂತರಾಮ್ ಮತ್ತು ಡಾ. ಸತ್ಯನಾರಾಯಣ ಎಂಬ ಇಬ್ಬರು ತಲೆತಿರುಕರು ಈ ಪತ್ರಿಕೆಗೆ ಸಂದರ್ಶನಗಳನ್ನು ನೀಡಿದ್ದೇನು, ಲೇಖನ ಬರೆದಿದ್ದೇನು. ಇದನ್ನೆಲ್ಲಾ ಚೆಡ್ಡಿ ಸಂಪಾದಕ ವಿಶ್ವೇಶ್ವರ ಭಟ್ಟರು ಒಂದಿಷ್ಟೂ ಕತ್ತರಿ ಹಾಕದೆ ಪ್ರಿಂಟ್ ಹಾಕಿ 'ರೈತ ದ್ರೋಹಿ' ಕೆಲಸ ಮಾಡಿದ್ದರು.




ಈ 'ವಿಜ್ಞಾನಿ'ಗಳು ಹೇಗೆ ಸುಳ್ಳು ಹೇಳುತ್ತಿದ್ದಾರೆ, ನಿಜವಾಗಿಯೂ ಬಿಟಿ ಬದನೆಯಿಂದ ಏನೆಲ್ಲಾ ಅಪಾಯ ಸಂಭವಿಸಬಹುದು ಎಂಬುದನ್ನು ವಿವರಿಸಿ ಬೇರೆ ವಿಜ್ಞಾನಿಗಳು, ಪಂಡಿತರು ಪ್ರತಿಕ್ರಿಯೆ ಕಳುಹಿಸಿದರೆ ಅದನ್ನು ಭಟ್ಟರು ಕಸದಬುಟ್ಟಿಗೆ ಎಸೆದಿದ್ದರು.

ಭಟ್ಟರ ಶಿಷ್ಯ ಪ್ರತಾಪ ಸಿಂಹ ಎಂಬ ಮಹಾಶಯನಂತೂ ಬಿಟಿ ಬದನೆಯ ಪ್ರಯೋಗ ನಡೆಸುತ್ತಿರುವ ಮಹಿಕೊ ಕಂಪನಿಯ ವಕ್ತಾರನಂತೆ ಕೆಲಸ ಮಾಡುತ್ತಿದ್ದ. ಪತ್ರಿಕೆಯಲ್ಲಿ ಬಿಟಿ ಬದನೆ ವಿರುದ್ಧವಾಗಿ ಒಂದೇ ಒಂದು ವಾಕ್ಯವೂ ಬರಕೂಡದು ಎಂದು ಹಠ ಹಿಡಿದು ಕುಳಿತಿದ್ದನಂತೆ. ಸಮಾಜದಲ್ಲಿ ಬಿಟಿ ಬದನೆ ಬೇಕೇ, ಬೇಡವೇ ಎಂದು ಚರ್ಚೆ ನಡೆಯುತ್ತಿದ್ದಾಗ, ಈ ರೀತಿ ಪತ್ರಿಕೆಯೊಂದು ಕಂಪನಿಯೊಂದರ ಕರಪತ್ರದಂತೆ ಕೆಲಸ ಮಾಡಿದ್ದು ಅದ್ಯಾವ ಸೀಮೆಯ ಪತ್ರಿಕೋದ್ಯಮ ಎಂದು 'ಮೀಡಿಯಾ ಮಿರ್ಚಿ'ಯ ಜಿ.ಎನ್. ಮೋಹನ್ ಮಹಾಶಯರೇ ಹೇಳಬೇಕು.

ಅದಿರಲಿ, ಮೊನ್ನೆ ಕೇಂದ್ರ ಪರಿಸರ ಸಚಿವ ಜೈರಾಮ್ ರಮೇಶ್ ನೇತೃತ್ವದಲ್ಲಿ ಸಮಾಲೋಚನಾ ಸಭೆ ನಡೆಯಿತಲ್ಲ, ಅದರಲ್ಲಿ ಜ್ಞಾನಪೀಠ ಪುರಸ್ಕೃತ ಸಾಹಿತಿ, ಹಿರಿಯರಾದ ಯು.ಆರ್. ಅನಂತಮೂರ್ತಿ ಭಾಗವಹಿಸಿ, ಬಿಟಿ ಬದನೆಯ ವಿರುದ್ಧ ಮನವಿಯೊಂದನ್ನು ಸಲ್ಲಿಸಿದ್ದರು. ಇದನ್ನು ನೋಡಿದ ವಿ.ಕ.ದ ಸಂಪಾದಕೀಯ ಪುಟ ನೋಡಿಕೊಳ್ಳುವ ಪ್ರತಾಪ ಸಿಂಹನಿಗೆ ಎಲ್ಲೆಲ್ಲಿ ತುರಿಸಿತೋ ಗೊತ್ತಿಲ್ಲ, ಅನಂತಮೂರ್ತಿಗೆ ಬಿಟಿ ಬದನೆಯ ವಿರುದ್ಧ ಮಾತನಾಡುವ ಹಕ್ಕೇನಿದೆ, ಜ್ಞಾನವೇನಿದೆ ಎಂದೆಲ್ಲಾ ಬರೆದು ಪತ್ರಿಕೆಯ ಓದುಗರ ಪತ್ರದ ಕಾಲಂನಲ್ಲಿ ಅನಂತಮೂರ್ತಿ ಫೋಟೋ ಸಹಿತ ಪ್ರಕಟಿಸಿದ. ಅಲ್ಲದೆ, ಈ ಪತ್ರವನ್ನು ಅಮೆರಿಕದಿಂದ ವಿಜ್ಞಾನಿ ಶಾಂತರಾಮ್ ಬರೆದಂತೆ ಅವರ ಹೆಸರು ಹಾಕಿದ.

ಇದಕ್ಕೆ ಹಿರಿಯ ಪತ್ರಕರ್ತರಾದ ನಾಗೇಶ್ ಹೆಗಡೆ ಕೂಡಲೇ ಸರಿಯಾಗಿ ಉತ್ತರ ನೀಡಿದರು. ಅನಂತಮೂರ್ತಿ ಟೀಕಿಸಿದ ಪ್ರತಾಪ ಸಿಂಹನಿಗೆ ಚಾಟಿ ಏಟೇ ನೀಡಿದರು. ಪಾಪ ಈ ಜಗಳದಲ್ಲಿ ಮರ್ಯಾದೆ ಕಳೆದುಕೊಂಡಿದ್ದು ಮಾತ್ರ ತಲೆತಿರುಕ ವಿಜ್ಞಾನಿ ಶಾಂತರಾಮ್! ಮಾನ್ಸಾಂಟೋ ಕಂಪನಿಯ ದುಡ್ಡಲ್ಲಿ ಅಮೆರಿಕದಲ್ಲಿ ಹಾಯಾಗಿದ್ದ ಶಾಂತರಾಮ್‌ಗೆ ಈ ಬೆಳವಣಿಗೆ ಗೊತ್ತಾಗಿದ್ದೇ ತಡ ಎರಡು ಪೆಗ್ ಜಾಸ್ತಿ ಕುಡಿದರೆಂಬ ಸುದ್ದಿ ಇದೆ. ಹೀಗೆ ತನ್ನ ಅನಿಸಿಕೆಯನ್ನೆಲ್ಲಾ



ಭಾಳ ಠಾಕ್ರೆಯ ಮೈಪರಚಾಟ!


ಶಿವಸೇನೆಯ ಅಧಿನೇತ ಭಾಳ ಠಾಕ್ರೆಗೆ ಆಗಾಗ ಇದ್ದಕ್ಕಿದ್ದಂತೆ ತುರಿಕೆ ಶುರುವಾಗಿ ಬಿಡುತ್ತೆ. ಆದರ ಕಿರಿಕಿರಿಯನ್ನು ಶಮನ ಮಾಡಿಕೊಳ್ಳುವುದಕ್ಕೋಸ್ಕರ ವಿಪರೀತವಾಗಿ ಕೆರೆದುಕೊಳ್ಳಲಾರಂಭಿಸಿಬಿಡುತ್ತಾರೆ. ತನ್ನ ಸುತ್ತಮುತ್ತಲಿನವರೂ ಒಂದಿಷ್ಟು ಕೆರೆಯಲಿ ಅಂತ ಹೆಣಗಾಡುತ್ತಾರೆ. ಯಾರೂ ಸೊಪ್ಪು ಹಾಕದಿದ್ದಾಗ ತಾವೇ ಒಂದಿಷ್ಟು ಹೊತ್ತು ಕೆರಕೊಂಡು ಸುಮ್ಮನಾಗುತ್ತಾರೆ. ಮತ್ತೆ ನವೆ ಶುರುವಾಗುವ ತನಕ!

ಈಗ್ಗೆ ಕೆಲವು ತಿಂಗಳುಗಳ ಹಿಂದಷ್ಟೇ ಭಾರತ ಕ್ರಿಕೆಟ್‌ನ ಧ್ರುವತಾರೆ, ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟು ಇಪ್ಪತ್ತು ವರ್ಷ ತುಂಬಿದ ಸಂದರ್ಭದಲ್ಲಿ ಆಚಾನಕ್ಕಾಗಿ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ "ನಾನು ಮರಾಠಿಗನೆಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಎನಿಸುತ್ತದೆ. ಆದರೆ, ಮೊದಲು ನಾನೊಬ್ಬ ಭಾರತೀಯ. ಮುಂಬೈ ಭಾರತಕ್ಕೆ ಸೇರಿದ್ದು ಎಲ್ಲಾ ಭಾರತೀಯರಿಗೆ" ಎಂದು ಹೇಳಿದ್ದರು. ಮರುದಿನವೇ ಕೆಂಡಾಮಂಡಲವಾದ ಮುದಿ ಠಾಕ್ರೆ ಶಿವಸೇನೆಯ ಮುಖವಾಣಿಯಾಗಿರುವ 'ಸಾಮ್ನಾ' ಪತ್ರಿಕೆಯಲ್ಲಿ "ತೆಂಡೂಲ್ಕರ್ ಕ್ರಿಕೆಟ್ ಆಡುವುದಕ್ಕೆ ಮಾತ್ರ ಸೀಮಿತವಾಗಿರಲಿ. ಅದನ್ನು ಬಿಟ್ಟು ರಾಜಕೀಯದಲ್ಲಿ ಮೂಗು ತೂರಿಸಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ" ಎಂದು ಘರ್ಜಿಸಿದ್ದರು. ಮೂಲತಃ ಮರಾಠಿಗನೇ ಆದ ಸಚಿನ್ ಮರಾಠಿ ವಿರೋಧಿಯಾಗಿದ್ದಾನೆಂದು ತೀರ್ಮ ಕೊಟ್ಟಿದ್ದರು. ಮುಂಬೈ ಮರಾಠಿಗರಿಗೆ ಮಾತ್ರ ಸೇರಿದ್ದು ಎಂದು ವಾದಿಸುತ್ತಾ ಅಲ್ಲಿ ನೆಲೆಸಿರುವ ಹೊರ ರಾಜ್ಯದವರ ಮೇಲೆ, ಅದರಲ್ಲೂ ವಿಶೇಷವಾಗಿ ಉತ್ತರ ಪ್ರದೇಶ ಮತ್ತು ಬಿಹಾರದಿಂದ ವಲಸೆ ಬಂದು ಕೂಲಿನಾಲಿ ಮಾಡಿಕೊಂಡು ಬದುಕುತ್ತಿರುವ ಅಮಾಯಕರ ಮೇಲೆ ಆಗಾಗ ಮಾರಣಾಂತಿಕ ದಾಳಿ ನಡೆಸುವ ಶಿವಸೇನೆ ಮತ್ತು ಅದರ ಅಧಿನೇತ ಭಾಳ ಠಾಕ್ರೆಯ ಘರ್ಜನೆಗೆ ಬೆದರಿದ ಸಚಿನ್ ಮರುಮಾತನಾಡದೇ ಬಾಯ್ಮುಚ್ಚಿಕೊಂಡು ಬೆಚ್ಚಗೆ ಮಲಗಿದರು. ಇಂಥರಾ ಪುಣ್ಯಕೋಟಿ ಗೋವಿನಂತಿರುವ ಸಚಿನ್ ಬೆದರಿದ್ದನ್ನು ಕಂಡು ತನ್ನ ಘರ್ಜನೆಗೆ ಇನ್ನೂ ಜನ ಬೆದರುತ್ತಾರೆ ಎಂಬ ವಿಶ್ವಾಸ ಠಾಕ್ರೆಗೂ ಬಂದಿತ್ತು.

ಈಗ ಅದರ ಮುಂದುವರಿದ ಭಾಗ ಪ್ರಾರಂಭವಾಗಿದೆ. ಮೊನ್ನೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ತಂಡಗಳಿಗಾಗಿ ವಿಶ್ವದ ಕ್ರಿಕೆಟ್ ತಾರೆಗಳನ್ನು ಖರೀದಿಸುವ ಹರಾಜಿನಲ್ಲಿ ತಂಡಗಳ ಮಾಲಿಕರು ಒಬ್ಬನೇ ಒಬ್ಬ ಪಾಕಿಸ್ತಾನಿ ಆಟಗಾರನನ್ನು ಖರೀದಿಸಲಿಲ್ಲ. ಕೊಲ್ಕೋತ್ತಾ ನೈಟ್ ರೈಡರ್ಸ್ ತಂಡದ ಒಡೆಯನಾಗಿರುವ ಶಾರುಖ್ ಖಾನ್ ಪಾಕಿಸ್ತಾನಿ ಆಟಗಾರರನ್ನು ಹೊರಗಿಡುವಂತೆ ತಂಡಗಳ ಮಾಲಿಕರ ಮೇಲೆ ಬಂದಿದ್ದ ಒತ್ತಡಗಳ ಬಗ್ಗೆ ಮನಬಿಚ್ಚಿ ಮಾತನಾಡಿದರು. ಬೇರೆ ಬೇರೆ ರಾಜಕೀಯವನ್ನು ಆಟದಲ್ಲಿ ಬೆರೆಸಬಾರದಿತ್ತು, ಉತ್ತಮ ಪ್ರದರ್ಶನ ತೋರುವ ಪಾಕಿಸ್ತಾನಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು ಎಂದರು. ಅವರನ್ನು ಆಯ್ಕೆ ಮಾಡದಂತೆ ಒತ್ತಡ ಬಂದಿದ್ದು ವಿಷಾದನೀಯ ಮಾತ್ರವಲ್ಲ ಒಂದು ರೀತಿಯಲ್ಲಿ ಮನನೋಯಿಸುವ ವಿಚಾರ ಅಂದರು.

ಮೊದಲೇ ಮುಸ್ಲಿಂ ವಿರೋಧಿಯಾಗಿರುವ ಶಿವಸೇನೆಯ ಠಾಕ್ರೆಗೆ ಇಷ್ಟು ಸಾಕಿತ್ತು, ಮತ್ತೆ ಘರ್ಜಿಸಲಾರಂಭಿಸಿದರು. ಶಾರುಖ್ ಖಾನ್ ಕೂಡ ಒಬ್ಬ ಮುಸ್ಲಿಂ ಆಗಿರುವುದನ್ನು ಅವರ ಹೇಳಿಕೆಯೊಂದಿಗೆ ತಳಕು ಹಾಕಿ "ಶಾರುಖ್ ಬೇಕಿದ್ದರೆ ಹೋಗಿ ಪಾಕಿಸ್ತಾನದಲ್ಲಿ ನೆಲೆಸಲಿ" ಎಂಬ ಅಪ್ಪಣೆಯನ್ನೂ, "ಶಾರುಖ್ ಖಾನ್ ದೇಶದ್ರೋಹಿ" ಎಂಬ ತೀರ್ಪನ್ನೂ ಕೊಟ್ಟರು. ಆತ ಕ್ಷಮೆಯಾಚಿಸಬೇಕೆಂದು ಫರ್ಮಾನನ್ನೂ ಹೊರಡಿಸಿದರು. ಇಲ್ಲದಿದ್ದರೆ ಆತನ 'ಮೈ ನೇಮ್ ಈಸ್ ಖಾನ್' ಚಲನಚಿತ್ರ ಪ್ರದರ್ಶನಕ್ಕೆ ಅಡ್ಡಿಪಡಿಸುವುದಾಗಿ ಬೆದರಿಕೆಯೊಡ್ಡಿದರು. ಪ್ರಾಯಶಃ ಸಚಿನ್ ತೆಂಡೂಲ್ಕರ್‌ನಂತೆಯೇ ಶಾರುಖ್ ಖಾನ್ ಕೂಡ ತನಗೆ ತಲೆಬಾಗುತ್ತಾರೆಂದು ಠಾಕ್ರೆ ಎಣಿಸಿದ್ದಿರಬೇಕು. ಆದರೆ, ತಾನೇನೂ ತಪ್ಪು ಮಾಡಿಲ್ಲ, ತಾನೇನೂ ದೇಶದ್ರೋಹಿಯಲ್ಲ ಎಂದ ಶಾರುಖ್ ಯಾವ ಕಾರಣಕ್ಕೂ ಕ್ಷಮೆಯಾಚಿಸುವುದಿಲ್ಲ ಎಂದು ಕಡ್ಡಿ ತುಂಡು ಮಾಡುವಂತೆ ಹೇಳಿದರು. ಪ್ರಾಯಶಃ ಈ ಬಾರಿ ಠಾಕ್ರೆಗೆ ಆದ ಮುಖಭಂಗ ಅವರ ರಾಜಕೀಯ ಜೀವನದಲ್ಲಿ ಹಿಂದೆಂದೂ ಆಗಿರಲಿಲ್ಲವೇನೋ? ಏಕೆಂದರೆ, ಈ ಬಾರಿ ಇಡೀ ಬಾಲಿವುಡ್ ತಾರೆಯರು, ಚಲನಚಿತ್ರ ಕಲಾವಿದರು, ಕಾಂಗ್ರೆಸ್‌ನ ರಾಜಕಾರಣಿಗಳು, ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು - ಹೀಗೆ ಪ್ರತಿಯೊಬ್ಬರೂ ಭಾಳ ಠಾಕ್ರೆಯ ವಿರುದ್ಧ ಸೆಟೆದು ನಿಂತರು. ಪಾಕಿಸ್ತಾನ ಕ್ರಿಕೆಟಿಗರನ್ನು ಖರೀದಿಸಬೇಕಿತ್ತೋ ಅಥವ ಬಿಡಬೇಕಿತ್ತೋ ಎಂಬ ವಿಚಾರ ತೆರೆಮರೆಗೆ ಸರಿದು 'ಮುಂಬೈ ಯಾರಿಗೆ ಸೇರಿದ್ದು' ಎಂಬ ವಿಚಾರ ಮತ್ತೆ ಮುನ್ನೆಲೆಗೆ ಬಂತು. ಎಲ್ಲರೂ ಒಕ್ಕೊರಲಿನಿಂದ ಮುಂಬೈ ಭಾರತಕ್ಕೆ ಸೇರಿದ್ದು, ಎಲ್ಲಾ ಭಾರತೀಯರಿಗೂ ಅಲ್ಲಿ ನೆಲೆಸುವುದಕ್ಕೆ ಮರಾಠಿಗರಷ್ಟೇ ಹಕ್ಕು ಇದೆ ಎಂದು ಪ್ರತಿಪಾದಿಸಲಾರಂಭಿಸಿದರು.









ಎಷ್ಟರಮಟ್ಟಿಗೆ ಎಂದರೆ ಹತ್ತಾರು ವರ್ಷಗಳಿಂದ ಶಿವಸೇನೆಯೊಂದಿಗೆ, ಭಾಳಠಾಕ್ರೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ, ಮೈತ್ರಿಕೂಟಗಳಲ್ಲಿ ಸಹಭಾಗಿಯಾಗಿರುವ ಬಿಜೆಪಿ ಕೂಡ ಠಾಕ್ರೆಯ ವಿರುದ್ಧ ಸೆಟೆದುಕೊಂಡಿತು. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿ ಮೂಲತಃ ಮರಾಠಿಗನೇ ಆದರೂ 'ಮುಂಬೈ ಭಾರತಕ್ಕೆ ಸೇರಿದ್ದು' ಎಂದು ಹೇಳುತ್ತಾ ಶಿವಸೇನೆ ಸ್ಥಳೀಯವಾದವನ್ನು ಕೈಬಿಡಬೇಕೆಂದು ಖಾರವಾಗಿ ಹೇಳಿದರು.

ಇದೇ ಸಮಯದಲ್ಲಿ ಮುಂಬೈಗೆ ಭೇಟಿ ನೀಡಿದ ಕಾಂಗ್ರೆಸ್‌ನ ಯುವ ನಾಯಕ ರಾಹುಲ್ ಗಾಂಧಿ ಕೂಡ 'ಮುಂಬೈ ಭಾರತಕ್ಕೆ ಸೇರಿದ್ದು' ಎಂದು ಹೇಳುವ ಮೂಲಕ ಆಗಲೇ ತುರಿಕೆ ಹತ್ತಿಸಿಕೊಂಡಿದ್ದ ಶಿವಸೇನೆಗೆ ಮತ್ತಷ್ಟು ನವೆಯುಂಟು ಮಾಡಿಬಿಟ್ಟರು.



ಇದು ಒಂದು ಕಾಲದಲ್ಲಿ ಮಹಾರಾಷ್ಟ್ರದ ಪ್ರಶ್ನಾತೀತ ನಾಯಕನಾಗಿ, ಸರ್ವಾಧಿಕಾರಿಯಾಗಿ ಮೆರೆದ ಭಾಳ ಠಾಕ್ರೆಗೆ ಮತ್ತವನ ಶಿವಸೈನ್ಯಕ್ಕೆ ಬಂದಿರುವ ದುಸ್ಥಿತಿ. ಮುಂಬೈಯಲ್ಲಿ, ಮಹಾರಾಷ್ಟ್ರದಲ್ಲಿ ಘರ್ಜನೆಯಂತಿರುತ್ತಿದ್ದ ಭಾಳ ಠಾಕ್ರೆಯ ಧ್ವನಿಯೀಗ 'ಮ್ಯಾಂವ್ ಮ್ಯಾಂವ್' ಶಬ್ದದಂತೆ ಕೇಳಿಸುತ್ತಿದೆ. ಅದಕ್ಕೀಗ ಸೊಪ್ಪು ಹಾಕುವುದಕ್ಕೆ ಯಾರೂ ಸಿದ್ಧರಿಲ್ಲ.

ಒಂದು ಕಾಲದಲ್ಲಿ ಶಿವಸೇನೆಯೆಂದರೆ, ಭಾಳಠಾಕ್ರೆ ಎಂದರೆ ಕಾಂಗ್ರೆಸ್‌ನಂಥ ಕಾಂಗ್ರೆಸ್ ಪಕ್ಷವೇ ಹೆದರುತ್ತಿತ್ತು, ಏಕೆಂದರೆ ಭಾಳ ಠಾಕ್ರೆಯ ಹಿಂದೆ ಇಡೀ ರಾಜ್ಯದಾದ್ಯಂತ ಮರಾಠಿ ಜನಸಾಗರವೇ ಹರಿದುಬರುತ್ತಿತ್ತು. ಅಸಲಿಗೆ ಶಿವಸೇನೆ ಮತ್ತು ಮರಾಠಿ ರಾಜಕಾರಣದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದೇ ಮರಾಠಿ ದುರಭಿಮಾನವನ್ನು ಬಿತ್ತಿ ಬೆಳೆಸುವ ಮೂಲಕ; ಅನ್ಯ ಭಾಷಿಕರನ್ನು ಮರಾಠಿ ವಿರೋಧಿಗಳೆಂದು ಚಿತ್ರಿಸುವ ಮೂಲಕ. ಮರಾಠಿಗರಲ್ಲಿ ಛತ್ರಪತಿ ಶಿವಾಜಿಯ ಬಗ್ಗೆ ಬಹಳಷ್ಟು ಹೆಮ್ಮೆಯಿದೆ. ಅಸಲಿಗೆ ಶಿವಾಜಿ ಎಂದರೆ ಮರಾಠಿ ಸಮುದಾಯದ ಹೆಮ್ಮೆಯ ಸಂಕೇತವಾಗಿದ್ದಾನೆ. ಇದನ್ನು ಬಳಸಿಕೊಳ್ಳುವ ದೃಷ್ಟಿಯಿಂದಲೇ ತಮ್ಮ ಸಂಘಟನೆಗೆ ಶಿವಸೇನೆ (ಇಲ್ಲಿ ಶಿವ ಎಂದರೆ ಶಿವಾಜಿ) ಎಂದು ಹೆಸರಿಟ್ಟರು. ಆರಂಭದಲ್ಲಿ ಈ ಶಿವಾಜಿ ಹೆಸರಿನ ಕಾರಣದಿಂದಾಗಿ ಸಂಘಟನೆಗೆ ಬಹಳಷ್ಟು ಜನಬೆಂಬಲ ದೊರಕಿದ್ದು ನಿಜ. ಜನರನ್ನು ತನ್ನೆಡೆ ಆಕರ್ಷಿಸಿಕೊಳ್ಳುವುದಕ್ಕಾಗಿ ಆರಂಭದಲ್ಲಿ ಕೇವಲ ಮರಾಠಿ ಅಭಿಮಾನ, ನಂತರದಲ್ಲಿ ದುರಭಿಮಾನಗಳನ್ನು ಬಳಸಿಕೊಳ್ಳುತ್ತಿದ್ದ ಶಿವಸೇನೆ ತದನಂತರದಲ್ಲಿ ಮುಸ್ಲಿಂ ವಿರೋಧಿ ದ್ವೇಷವನ್ನು ಬಿತ್ತಲಾರಂಭಿಸಿತು. ಅದಕ್ಕಾಗಿ ಮರಾಠ ರಾಜ ಶಿವಾಜಿಯನ್ನು ಮುಸ್ಲಿಂ ವಿರೋಧಿಯೆಂಬಂತೆ ಚಿತ್ರಿಸಿ ತಾನೂ ಮುಸ್ಲಿಂ ದ್ವೇಷಿಯಾಗಿ ಬದಲಾಯಿತು. 1992ರಲ್ಲಿ ಬಾಬ್ರಿ ಮಸೀದಿ ಧ್ವಂಸವಾದ ಮೇಲೆ ಮುಂಬೈ ಮತ್ತು ಸೂರತ್‌ನಲ್ಲಿ ನಡೆದ ಭೀಕರ ಕೋಮು ಗಲಭೆಯಲ್ಲಿ ಇದೇ ಶಿವಸೈನಿಕರು ಮುಸಲ್ಮಾನರನ್ನು ಹಾದಿಬೀದಿಯಲ್ಲಿ ಕೊಚ್ಚಿ ರಕ್ತಪಾತ ನಡೆಸಿದ್ದರು.

ವಾಸ್ತವದಲ್ಲಿ ಶಿವಾಜಿ ಇದ್ದುದರಲ್ಲಿ ಜಾತ್ಯತೀತ ಮನಸ್ಸುಳ್ಳ ರಾಜನಾಗಿದ್ದ ಎಂಬುದನ್ನು ಎಲ್ಲಾ ಚರಿತ್ರೆಕಾರರೂ ದಾಖಲೆ ಸಮೇತ ಸಾಬೀತು ಮಾಡಿದ್ದಾರೆ. ಶಿವಾಜಿ ಹಿಂದೂ, ಮುಸ್ಲಿಮರೆನ್ನದೇ ಎಲ್ಲಾ ಬಡ ರೈತರ ಮೇಲಿನ ತೆರಿಗೆಯನ್ನು ಗಣನೀಯವಾಗಿ ಕಡಿಮೆ ಮಾಡಿದ್ದ, ತನ್ನ ಸೇನೆಗೆ ಸೇರಿಸಿಕೊಳ್ಳುವಾಗಲೂ ಧರ್ಮ ಅವನಿಗೊಂದು ಮಾನದಂಡವೇ ಆಗಿರಲಿಲ್ಲ, ಶಿವಾಜಿ ಸೇನೆಯ ಮೂರನೇ ಒಂದು ಭಾಗದಷ್ಟು ಸೈನಿಕರು ಮುಸ್ಲಿಮರೇ ಆಗಿದ್ದರು ಎಂಬ ಸತ್ಯ ಇದನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ.

ಪ್ರಾಯಶಃ ಈ ಸತ್ಯಗಳೆಲ್ಲವೂ ಈಗ ಮರಾಠಿಗರಿಗೆ ಅರ್ಥವಾಗಿರಬೇಕು. ಜೊತೆಗೆ ಭಾಳ ಠಾಕ್ರೆ ತಾನೇ ಖುದ್ದು ಮುಖ್ಯಮಂತ್ರಿಯಾಗಿದ್ದಾಗಲೂ ಮರಾಠಿಗರಿಗೆ ಅನುಕೂಲವಾಗುವಂಥ ವಿಶೇಷ ಕೆಲಸವನ್ನೇನೂ ಮಾಡದಿರುವುದು, ಇಡೀ ಶಿವಸೇನೆಯ ಒಂದು ರೀತಿಯಲ್ಲಿ ಗೂಂಡಾ ಪಡೆಯಾಗಿ ಬದಲಾಗಿ ಸಾಮಾನ್ಯ ಮರಾಠಿಗರನ್ನೇ ಹಿಂಸಿಸುತ್ತಿರುವುದು, ಹಫ್ತಾ ವಸೂಲಿ, ರಿಯಲ್ ಎಸ್ಟೇಟ್ ಮಾಫಿಯಾದಲ್ಲಿ ತೊಡಗಿರುವುದು ನಿಧಾನಕ್ಕೆ ಮರಾಠಿಗರಿಗೆ ಅರ್ಥವಾದಂತಿದೆ. ಈ ಕಾರಣಕ್ಕೆ ಬಹುತೇಕ ಮರಾಠಿಗರು ಶಿವಸೇನೆಯನ್ನು ಮೂಲೆಗೆ ತಳ್ಳಿದ್ದಾರೆ. ಭಾಳ ಠಾಕ್ರೆ ನಂತರ ಉತ್ತರಾಧಿಕಾರಿ ಯಾರಾಗಬೇಕೆಂಬ ವಿಚಾರದಲ್ಲಿ ಮಗ ಉದ್ಧವ್ ಠಾಕ್ರೆ ಹಾಗೂ ಅಳಿಯ ರಾಜ್ ನಡುವೆ ಭೀಕರ ಕಿತ್ತಾಟ ನಡೆದು ಕೊನೆಗೆ ರಾಜ್ ಠಾಕ್ರೆ ಶಿವಸೇನೆಯಿಂದ ಹೊರನಡೆದು ತನ್ನದೇ ಮಹಾರಾಷ್ಟ್ರ ನವನಿರ್ಮಾಣ ಸೇನೆ ರಚಿಸಿಕೊಂಡಿರುವುದು ಶಿವಸೇನೆಯನ್ನು ಮತ್ತು ದುರ್ಬಲಗೊಳಿಸಿದೆ.

ಇನ್ನೊಂದೆಡೆ ಶಿವಾಜಿಯನ್ನು ಕೋಮುವಾದೀಕರಣಗೊಳಿಸಿದ್ದರ ವಿರುದ್ಧವೂ ನೈಜ ಶಿವಾಜಿ ಅಭಿಮಾನಿಗಳು ಸಿಡಿದೆದ್ದು ತಮ್ಮದೇ ಆದ ಸಾಂಭಾಜಿ ಬ್ರಿಗೇಡ್ ಎಂಬ ಸಂಘಟನೆಯನ್ನು ಕಟ್ಟಿಕೊಂಡಿದ್ದಾರೆ. ಅಸಲಿಗೆ ಇದು ಹುಟ್ಟಿಕೊಂಡಿದ್ದೇ ಶಿವಸೇನೆಯ ಕಬ್ಜಾದಿಂದ ಶಿವಾಜಿಯನ್ನು ವಿಮೋಚನೆಗೊಳಿಸುವ ಪ್ರಧಾನ ಉದ್ದೇಶದಿಂದ. ಹೀಗಾಗಿ, ದಿನೇದಿನೇ ಶಿವಸೇನೆ ಅವಸಾನದತ್ತ ಹೋಗುತ್ತಿದ್ದಂತೆಯೇ ಸಾಂಭಾಜಿ ಬ್ರಿಗೇಡ್ ಹುಲುಸಾಗಿ ಬೆಳೆಯಲಾರಂಭಿಸಿದೆ.

ಇನ್ನೊಂದು ವಿಚಾರವನ್ನಿಲ್ಲಿ ಹೇಳಬೇಕು. ಪ್ರಾರಂಭದ ಹಂತದಲ್ಲಿ ಶಿವಸೇನೆ ಮಹಾರಾಷ್ಟ್ರದಲ್ಲಿ ಗಟ್ಟಿಯಾಗಿ ಬೇರುಬಿಡುವುದಕ್ಕೆ ದೊಡ್ಡ ದೊಡ್ಡ ಉದ್ಯಮಪತಿಗಳು, ಬಂಡವಾಳಿಗರು ಸಾಕಷ್ಟು ನೀರು ಹೊಯ್ದಿದ್ದರು. ಆಗಿನ ಕಾಲದಲ್ಲಿ ಮುಂಬೈನ ಕಾರ್ಮಿಕರು ತಮಗೆ ಸಿಗಬೇಕಿದ್ದ ನ್ಯಾಯಯುತ ಹಕ್ಕು ಪಡೆಯುವುದಕ್ಕಾಗಿ ಟ್ರೇಡ್ ಯೂನಿಯನ್‌ಗಳಲ್ಲಿ ಸಂಘಟಿತರಾಗಿ ಈ ಬಂಡವಾಳಿಗರ, ಮಾಲಿಕರ ವಿರುದ್ಧ ಮಿಲಿಟೆಂಟಾಗಿ ಹೋರಾಡುತ್ತಿದ್ದರು. ಈ ಕಾರ್ಮಿಕ ಹೋರಾಟಗಳನ್ನು ಬಗ್ಗುಬಡಿಯುವುದಕ್ಕೆ ಮಾಲೀಕರಿಗೆ ಒಂದು ಗೂಂಡಾ ಪಡೆಯ ಅವಶ್ಯಕತೆಯಿತ್ತು, ಅಷ್ಟು ಹೊತ್ತಿಗಾಗಲೇ ಅಕ್ಷರಶಃ ಗೂಂಡಾಗಳಂತೆಯೇ ವರ್ತಿಸುತ್ತಿದ್ದ ಶಿವಸೈನಿಕರು ಆ ಸ್ಥಾನವನ್ನು ತುಂಬಿದರು. ಮಾಲಿಕರ ಸಂಪೂರ್ಣ ಬೆಂಬಲದೊಂದಿಗೆ ಕಾರ್ಮಿಕ ಹೋರಾಟಗಳನ್ನು ದಮನಿಸುವುದಕ್ಕೆ ಯತ್ನಿಸಿದರು. ಮಾಲಿಕರ ಬೆಂಬಲದೊಂದಿಗೆ ಮರಾಠಿ ಸಂಕುಚಿತವಾದವನ್ನು ತನ್ನ ಸಿದ್ಧಾಂತವನ್ನಾಗಿ ಪರಿವರ್ತಿಸಿಕೊಂಡ ಶಿವಸೇನೆ ತದನಂತರದ ವರ್ಷಗಳಲ್ಲಿ ಆ ಉದ್ಯಮಪತಿಗಳ ವಿರುದ್ಧವೇ ತನ್ನ ಕತ್ತಿ ಬೀಸಲಾರಂಭಿಸಿತು. ಯಾಕೆಂದರೆ, ಜಾಗತೀಕರಣ ಪ್ರಕ್ರಿಯೆ ಬಿರುಸಾಗಿ ವಿದೇಶಿ ಬಂಡವಾಳ ಮುಂಬೈಗೆ ಹರಿದುಬಂದಂತೆ, ದೇಶ ವಿದೇಶಗಳ ಕಂಪೆನಿಗಳು ಮುಂಬೈಯನ್ನು ಕೇಂದ್ರ ಮಾಡಿಕೊಂಡಂತೆ ಮುಂಬೈ ನಿಜಾರ್ಥದಲ್ಲಿ ಒಂದು ಕಾಸ್ಮೋಪಾಲಿಟನ್ ನಗರವಾಗಿ ಪರಿವರ್ತನೆಗೊಳ್ಳಲಾರಂಭಿಸಿತು. ವಾಸ್ತವದಲ್ಲಿ ಅದು ಶಿವಸೇನೆಯ ಮರಾಠಿ ಸಂಕುಚಿತವಾದಕ್ಕೆ ಕೊಡಲಿಪೆಟ್ಟು ಕೊಟ್ಟಿತು. ಹೀಗಾಗಿ, ಒಂದು ಹಂತದಲ್ಲಿ ಕಾರ್ಮಿಕ ಹೋರಾಟಗಳನ್ನು ದಮನಿಸುವುದಕ್ಕೆ ಜೊತೆಗೂಡಿದ್ದ ಉದ್ಯಮಪತಿಗಳು ಹಾಗೂ ಶಿವಸೇನೆ ಪರಸ್ಪರ ವಿರುದ್ಧ ಧ್ರುವಗಳಲ್ಲಿ ನಿಲ್ಲಬೇಕಾಯಿತು. ಅಂದರೆ, ಈಗ ಶಿವಸೇನೆಗೆ ಮೊದಲಿದ್ದಂತೆ ಉದ್ಯಮಪತಿಗಳ ಬೆಂಬಲವೂ ಇಲ್ಲದಂತಾಯಿತು.

ಸಾರಾಂಶದಲ್ಲಿ ಹೇಳುವುದಾದರೆ, ಭಾಳಠಾಕ್ರೆಗೆ ಈಗ ಜನಬೆಂಬಲವೂ ಇಲ್ಲ, ಉದ್ಯಮಪತಿಗಳ ಬೆಂಬಲವೂ ಇಲ್ಲ, ಜೊತೆಗೆ ಸಂಘಟನೆಯೂ ಗಟ್ಟಿಯಾಗಿಲ್ಲ. ಭಾಳಠಾಕ್ರೆಯಂತೆಯೂ ಶಿವಸೇನೆಯೂ ಮುದಿಯಾಗಿ ಇಂದೋ ನಾಳೆಯೋ ಅನ್ನುತ್ತಿದೆ. ಅಸಲಿಗೆ ಅವರ ಮೇಲೆ ಆಳಿಗೊಂದು ಕಲ್ಲು ಎಸೆಯುವುದಕ್ಕೂ ಅವರ ವಿರೋಧಿಗಳಿಗೆ ಇದು ಒಂದು ಅವಕಾಶವನ್ನು ಒದಗಿಸಿದೆ.

ಅಲ್ಲಿಗೆ, ಭಾಳಠಾಕ್ರೆಗೆ ಈಗ ಮೈಪರಚಿಕೊಳ್ಳುವುದನ್ನು ಬಿಟ್ಟು ಬೇರೆ ದಾರಿ ಉಳಿದಿಲ್ಲ.

ಬೇರೆಯವರ ಹೆಸರಿನಲ್ಲಿ ಬರೆದು, ಓದುಗರ ಪತ್ರದ ಕಾಲಂನಲ್ಲಿ ಪ್ರಕಟಿಸುವ ಪ್ರತಾಪಸಿಂಹನದು ಯಾವ ರೀತಿಯ ಪತ್ರಿಕೋದ್ಯಮ ಎಂದು ಮತ್ತೆ 'ಮೀಡಿಯಾ ಮಿರ್ಚಿ'ಯ ಮೋಹನ್ ಮಹಾಶಯರೇ ಹೇಳಬೇಕು!

ಬಿಟಿ ಬದನೆಗೆ ಅನುಮತಿ ನೀಡಿದ ಕೇಂದ್ರ ಪರಾಮರ್ಶನಾ ಸಮಿತಿಯಲ್ಲಿದ್ದ ವಿಜ್ಞಾನಿಗಳಾದ ಕೆ.ಕೆ. ತ್ರಿಪಾಠಿ, ಮಥುರಾ ರೈ, ವಸಂತ್ ಮುತ್ತುಸ್ವಾಮಿ, ಪಿ. ಆನಂದ್ ಕುಮಾರ್, ದಿಲಿಪ್ ಕುಮಾರ್ ಹೇಗೆಲ್ಲಾ ಮಹಿಕೋ ಕಂಪನಿಯ ಜೇಬಿನಲ್ಲಿ ಬಿದ್ದಿದ್ದರು ಎಂಬುದನ್ನು ಈಗಾಗಲೇ 'ಡೌನ್ ಟು ಅರ್ಥ್' ನಿಯತಕಾಲಿಕೆ ಬಹಿರಂಗಪಡಿಸಿದೆ. ಇದರ ಬೆನ್ನಲ್ಲೇ, ಅಮೆರಿಕದ usaid (ಇದರ ಮುಖ್ಯಸ್ಥರು ಭಾರತೀಯ ಮೂಲದ ರಾಜೇಂದ್ರ ಶಾ) ಹೇಗೆಲ್ಲಾ ಭಾರತೀಯ ಸಂಶೋಧನಾ ಮಂಡಳಿಯ ಮೇಲೆ ಒತ್ತಡ ಹೇರುತ್ತಿದೆ ಎಂಬುದೂ ಬೆಳಕಿಗೆ ಬಂದಿದೆ. ಅಮೆರಿಕದ ವಿಜ್ಞಾನ-ತಂತ್ರಜ್ಞಾನ ಸಲಹೆಗಾರ್ತಿ ನೀನಾ ಫೆಡರಾಫ್ ಭಾರತಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಬಿಟಿ ಬದನೆಗೆ ಅನುಮತಿ ನೀಡುವ ನಿರ್ಧಾರಕ್ಕೆ ಬರಲಾಗಿತ್ತು ಎಂಬುದನ್ನು ರಾಷ್ಟ್ರೀಯ ಪತ್ರಿಕೆಗಳು ಬಹಿರಂಗಪಡಿಸಿವೆ. ವಿಜಯ ಕರ್ನಾಟಕದ ಸಂಪಾದಕರಿಗೆ ಮಾತ್ರ ಈ ವಿಷಯವೆಲ್ಲಾ ಗೊತ್ತಿಲ್ಲ ಪಾಪ! ಅದಕ್ಕೇ ಬಿಟಿ ಬದನೆಗೆ ಕೇಂದ್ರ ಅನುಮತಿ ನಿರಾಕರಿಸಿದ ನಂತರವೂ ಅವರು ಶಾಂತರಾಮ್‌ನ ಸಂದರ್ಶನ ಹಾಕಿಕೊಂಡು ಪೇಜು ತುಂಬಿಸುತ್ತಿದ್ದಾರೆ! ವಿ.ಕ.ಕ್ಕೆ ರೈತರೇ ಬುದ್ಧಿ ಕಲಿಸಬೇಕು.


● ನೀರದ ಬೆಂಗಳೂರು

ಮಂತ್ರಿ ಕಟ್ಟಾ ಮಗ ಜಗ್ಗನೇ ಗಾಡ್‌ಫಾದರ್ ಸೈಲೆಂಟ್ ಸುನೀಲನ ಎನ್‌ಕೌಂಟರ್ ಮಿಸ್?


ಸುನೀಲ ಅಂಡ್ ಗ್ಯಾಂಗ್....

ಯಲಹಂಕದ ಜಿಮ್ಮೊಂದರಲ್ಲಿ ಬುಲೆಟ್ ರವಿಯ ಹತ್ಯೆಯಾದ ನಂತರದಿಂದ ಸುನೀಲ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿಕೊಂಡೇ ಬಂದಿದ್ದ. ಸತತ ಆರು ತಿಂಗಳ ಕಾಲ ಸಿಸಿಬಿಯ ಅಶೋಕನ್ ಮತ್ತು ಬಾಳೇಗೌಡರ ತಂಡ ಆತನಿಗಾಗಿ ತಡಕಾಡಿದ್ದೇ ರೋಚಕ ವೃತ್ತಾಂತದಂತಿತ್ತು. ಅಂಥ ಸುನೀಲನನ್ನು ಮೊನ್ನೆ ಅಂದರೆ 2010ರ ಫೆಬ್ರವರಿ 4ರ ಗುರುವಾರ ರಾತ್ರಿ ಕೊಡಿಗೇ ಹಳ್ಳಿಯ ರಾಮ್ ಆಶ್ರಯ್ ಅಪಾರ್ಟ್‌ಮೆಂಟಿನ ಆತನ ಫ್ಲ್ಯಾಟಿನಲ್ಲೇ ಸೆರೆಹಿಡಿದ ಸಿಸಿಬಿ ತಂಡಕ್ಕೆ ಎಂಥಾ ಆಘಾತ ಕಾದಿತ್ತೆಂದರೆ;

ಸುನೀಲನ ಆಯುಸ್ಸಿನ್ನೂ ಗಟ್ಟಿಯಿತ್ತೇನೊ. 'ಈ ಸಾರಿ ಆತನ್ನ ಫಿನಿಷ್ ಮಾಡ್ದೇ ಹೋದ್ರೆ ನನ್ನ ಹೆಸರು ..... ಅಲ್ಲವೇ ಅಲ್ಲ....' ಎಂದು ಕಿಡಿಕಾರುತ್ತಿದ್ದ ಜಂಟಿ ಪೊಲೀಸ್ ಕಮಿಷನರ್ ಅಲೋಕ್‌ಕುಮಾರ್ ಪತ್ರಕರ್ತರನ್ನು ಕಂಡಿದ್ದೇ ತಡ ಸಿಡಿಸಿಡಿ ಉರಿದುಬೀಳುತ್ತಾರೆ.


ಅಲೋಕ್‌ಕುಮಾರ್

ಹೌದು, ಟೀವಿ ಚಾನಲ್ಲುಗಳ ಸುದ್ದಿ ರಭಸಕ್ಕೆ ಸೈಲೆಂಟ್ ಸುನೀಲನ ಎನ್‌ಕೌಂಟರ್ ತಪ್ಪಿಹೋಗಿದೆ. ಅಥವಾ ಪೊಲೀಸರು ತಮ್ಮ ನಿಸ್ಸಹಾಯಕತೆಯನ್ನು ಟೀವಿ ವರದಿಗಾರರ ಮೂತಿಗೆ ಬಳಿದು ಬಿಜೆಪಿ ಸರ್ಕಾರದ ಋಣವನ್ನು ಸದ್ದಿಲ್ಲದೇ ಪೂರೈಸಿದ್ದಾರೆ. ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಪುತ್ರ ಕಟ್ಟಾ ಜಗದೀಶ್ ಮತ್ತು ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್ ಸೇರಿಕೊಂಡು ಕಮೀಷನರ್ ಬದರಿ ಮೇಲೆ ಒತ್ತಡ ತಂದು ಸುನೀಲನನ್ನು ಬಚಾವು ಮಾಡಿದರೆಂಬುದು ಒಂದು ಸುದ್ದಿ. ಗಾಂಧಿನಗರದ ಶಾಸಕ ದಿನೇಶ್ ಗುಂಡೂರಾವ್ ತಮ್ಮ ದೇವನಹಳ್ಳಿಯ ಫಾರ್ಮ್ ಹೌಸಿನಲ್ಲಿ ಸುನೀಲನಿಗೆ ಆಶ್ರಯ ಕೊಟ್ಟಿದ್ದರೆಂಬುದು ಮತ್ತೊಂದು ಸುದ್ದಿ. ಕೆಲವು ಟೀವಿ ಚಾನಲ್ ವರದಿಗಾರರನ್ನು ಬಳಸಿಕೊಂಡು ತನ್ನ ಎನ್‌ಕೌಂಟರ್ ಆಗದ ಹಾಗೇ ಸುನೀಲನೇ ತಂತ್ರ ರೂಪಿಸಿದನೆಂಬುದು ಸಿಸಿಬಿಯ ಕೆಲ ಪೊಲೀಸರ ವಾದವಾದರೆ ತನ್ನ ಪ್ರಾಣ ಉಳಿಸಿಕೊಳ್ಳಲು ಸುನೀಲನಿಗೆ ಐವತ್ತು ಲಕ್ಷ ಕೈಬಿಟ್ಟಿದೆಯೆಂಬುದು ಅಂಡರ್‌ವರ್ಲ್ಡ್ ಮೂಲಗಳು ಹಬ್ಬಿಸುತ್ತಿರುವ ಸುದ್ದಿ.


ಬದರಿ

ಇಂಥ ಸುದ್ದಿಗಳ ಪೈಕಿ ಸತ್ಯಕ್ಕೆ ಹತ್ತಿರವಿರುವುದು ಕಟ್ಟಾ ಮಗ ಜಗ್ಗ ಮತ್ತು ಯಲಹಂಕದ ಶಾಸಕ ವಿಶ್ವನಾಥ್ ಜೊತೆಗಿದ್ದ ಸುನೀಲನ ನಂಟೇ!

2009 ರ ಜುಲೈ 27 ರಂದು ಯಲಹಂಕದ ಜಿಮ್ಮೊಂದರಲ್ಲಿ ಬುಲೆಟ್ ರವಿಯ ಹತ್ಯೆಯಾದ ನಂತರದಿಂದ ಸುನೀಲ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿಕೊಂಡೇ ಬಂದಿದ್ದ. ಸತತ ಆರು ತಿಂಗಳ ಕಾಲ ಸಿಸಿಬಿಯ ಅಶೋಕನ್ ಮತ್ತು ಬಾಳೇಗೌಡರ ತಂಡ ಆತನಿಗಾಗಿ ತಡಕಾಡಿದ್ದೇ ರೋಚಕ ವೃತ್ತಾಂತದಂತಿತ್ತು. ಅಂಥ ಸುನೀಲನನ್ನು ಮೊನ್ನೆ ಅಂದರೆ 2010 ರ ಫೆಬ್ರವರಿ 4 ರ ಗುರುವಾರ ರಾತ್ರಿ ಕೊಡಿಗೇ ಹಳ್ಳಿಯ ರಾಮ್ ಆಶ್ರಯ್ ಅಪಾರ್ಟ್‌ಮೆಂಟಿನ ಆತನ ಫ್ಲ್ಯಾಟಿನಲ್ಲೇ ಸೆರೆಹಿಡಿದ ಸಿಸಿಬಿ ತಂಡಕ್ಕೆ ಎಂಥಾ ಆಘಾತ ಕಾದಿತ್ತೆಂದರೆ; ಮರುದಿನ ಅಂದರೆ ಶುಕ್ರವಾರ ಮಧ್ಯಾಹ್ನಕ್ಕೆಲ್ಲ ನ್ಯೂಸ್ ಚಾನೆಲ್ಲೊಂದರಲ್ಲಿ ಸುನೀಲ ಆರೆಸ್ಟಾದ ಸುದ್ದಿಯ ಸಾಲುಗಳು ಮೇಲಿಂದ ಮೇಲೆ ಹರಿದಾಡುತ್ತಿದ್ದವು.

ಬಹುಶಃ ಅದು ಸುದ್ದಿಯಾಗದೇ ಹೋಗಿದ್ದರೆ ಜಂಟಿ ಕಮಿಷನರ್ ಅಲೋಕ್‌ಕುಮಾರ್ ಆ ರಾತ್ರಿ ಸುನೀಲನ ಎನ್‌ಕೌಂಟರ್ ನೆರವೇರಿಸುತ್ತಿದ್ದರೋ ಏನೊ!

ಸುನೀಲ ಆರೆಸ್ಟಾದ ಸುದ್ದಿ ಹಿಡಿದು ಅದರ ಸತ್ಯಾಸತ್ಯತೆಗಾಗಿ ಜಂಟಿ ಪೊಲೀಸ್ ಕಮಿಷನರ್ ಅಲೋಕ್ ಕುಮಾರ್‌ರಿಂದ ಸ್ಪಷ್ಟನೆ ಬಯಸಿದ ವರದಿಗಾರರ ಹಿಂಡೊಂದು ಫೆ. 5 ರ ಶುಕ್ರವಾರ ಸಂಜೆ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ನೆರೆದಿತ್ತು. ಆ ಹೊತ್ತಿಗಾಗಲೇ ಮೂರ್‍ನಾಲ್ಕು ಮಂದಿ ಇನ್ಸ್‌ಪೆಕ್ಟರ್‌ಗಳ ಜೊತೆ ತಮ್ಮ ಛೇಂಬರಿನಲ್ಲಿ ಗುಪ್ತ ಸಮಾಲೋಚನೆಯಲ್ಲಿದ್ದ ಅಲೋಕ್ ಕುಮಾರ್‌ಗೆ ಸುವರ್ಣ ವಾಹಿನಿಯಲ್ಲಿ ಸುನೀಲ್ ಆರೆಸ್ಟಾದ ಸ್ಕ್ರಾಲ್ ಬರುತ್ತಿರುವ ಮಾಹಿತಿ ಸಿಕ್ಕಿದೆ. ಏಕಾಏಕಿ ಪಿತ್ಥ ಕೆರಳಿದಂತೆ ವರದಿಗಾರರಿದ್ದಲ್ಲಿಗೇ ಬಂದು 'ಏನಿದೆಲ್ಲಾ ನಾನ್ಸೆನ್ಸ್. ಯಾರು ಹೇಳಿದ್ದು ನಿಮಗೆ ಸುನೀಲ ಆರೆಸ್ಟಾಗಿದ್ದಾನೆ ಅಂತ? ಅಂಥಾದ್ದೇನೂ ಇಲ್ಲ, ಗೆಟ್‌ಲಾಸ್ಟ್....' ಎಂದು ವರದಿಗಾರರ ಮೇಲೇ ಹರಿಹಾಯ್ದರು.


ಜಗ್ಗ

ಅಲ್ಲಿಗೆ ಹಕೀಕತ್ತು ಬೇರೆಯೇ ಇದೆಯೆಂದು ನಿರ್ಧರಿಸಿದ ಈ ವರದಿಗಾರರ ಹಿಂಡು ಕಮಿಷನರ್ ಬದರಿ ಛೇಂಬರಿನ ಮುಂದೆ ಕಲೆತಿದೆ. ಇನ್ನೇನು ಬದರಿಯವರ ಛೇಂಬರಿಗೆ ಆ ವರದಿಗಾರರೆಲ್ಲ ನುಗ್ಗಬೇಕೆನ್ನುವಷ್ಟರಲ್ಲಿ ಅಲ್ಲಿಗೂ ಬಂದ ಅಲೋಕ್‌ಕುಮಾರ್ ಅವರನ್ನು ಅಡ್ಡಗಟ್ಟಿದ್ದೇ 'ಎಷ್ಟು ಸಲ ಹೇಳ್ಬೇಕು ನಿಮ್ಗೆ? ಸುನೀಲನನ್ನು ನಾವ್ಯಾರೂ ಆರೆಸ್ಟ್ ಮಾಡಿಲ್ಲ, ಮಾಡಿಲ್ಲ, ಮಾಡಿಲ್ಲ, ನೀವು ಜರ್ನಲಿಸ್ಟ್‌ಗಳೆಲ್ಲ ಕ್ರಿಮಿನಲ್ಸ್ ಜೊತೆ ಕೈಜೋಡಿಸಿದ್ದೀರಾ. ಹೋಗಿ ಹೋಗಿ ಬೇರೆ ಕೆಲಸ ನೋಡಿ....' ಎಂದಿದ್ದೇ ಅಲ್ಲಿಂದಲೂ ಪತ್ರಕರ್ತರನ್ನು ಸಾಗಹಾಕಿಬಿಟ್ಟರು.

ಅಲೋಕ್‌ಕುಮಾರ್ ನಿಷ್ಠುರಿ ಪೊಲೀಸ್ ಅಧಿಕಾರಿ. ಯಾವತ್ತೂ ಪತ್ರಕರ್ತರ ವಿರುದ್ಧ ಈ ರೀತಿ ಹರಿಹಾಯ್ದವರಲ್ಲ. ಯಾವತ್ತು ಸೈಲೆಂಟ್ ಸುನೀಲನ ಬಂಧನದ ಸುದ್ದಿ ಲೀಕ್ ಆಯಿತೋ ಅದರ ವಿರುದ್ಧ ಕೆಂಡಾಮಂಡಲರಾದ ಅಲೋಕ್‌ಕುಮಾರ್ ವರ್ತನೆಗೂ ಕಾರಣವಿತ್ತು. ಆ ಹೊತ್ತಿಗಾಗಲೇ ಸುನೀಲನನ್ನು ಎನ್‌ಕೌಂಟರ್ ಮಾಡಿ ಖತಮ್ ಮಾಡುವ ನಿರ್ಧಾರಕ್ಕವರು ಬಂದಾಗಿತ್ತು. ಫೆಬ್ರವರಿ 5 ರ ಶುಕ್ರವಾರ ರಾತ್ರಿ ಅಥವಾ ಮರುದಿನ ಶನಿವಾರದ ರಾತ್ರಿ ಸುನೀಲನ ಎನ್‌ಕೌಂಟರ್‌ಗೆ ಮುಹೂರ್ತ ಕೂಡ ನಿಗದಿಯಾಗಿತ್ತು!


ಕಟ್ಟಾ

ಅಲೋಕ್‌ಕುಮಾರ್ ಸಿಟ್ಟು ವರದಿಗಾರರಿಗೂ ಅರ್ಥವಾಗಿತ್ತು. ಎನ್‌ಕೌಂಟರ್ ಆಗುವುದಾದರೆ ಆಗಿಬಿಡಲಿ ಎಂದೇ ಸುನೀಲ ಆರೆಸ್ಟಾದ ಸುದ್ದಿಯನ್ನು ವರದಿಗಾರರು ಕೂಡ ಪ್ರಕಟಿಸದೇ ರಹಸ್ಯವಾಗಿಟ್ಟಿದ್ದರು. ಟೀವಿ ಚಾನಲ್ಲುಗಳು ಕೂಡ ತಮ್ಮ ತಪ್ಪು ತಿದ್ದಿಕೊಂಡು ಪ್ರಕಟಿಸುತ್ತಿದ್ದ ಸುನೀಲ್ ಬಂಧನದ ಸ್ಕ್ರಾಲ್ ಅನ್ನು ನಿಲ್ಲಿಸಿದ್ದರು. ಇನ್ನೇನು ಶನಿವಾರದ ರಾತ್ರಿ ಸುನೀಲನ ಎನ್‌ಕೌಂಟರ್ ಸುದ್ದಿ ಬಂದೇಬರುತ್ತದೆ ಎಂದು ಕಾದುಕುಂತಿದ್ದ ಪತ್ರಕರ್ತರಿಗೆಲ್ಲ ಭಾನುವಾರದ ಹೊತ್ತಿಗೆ ನಿರಾಶೆ ಕಾದಿತ್ತು.

ಸುನೀಲ ಮತ್ತು ಆತನ ಐವರು ಸಹಚರರನ್ನು ಪೊಲೀಸರು ಬಂಧಿಸಿ ನ್ಯಾಯಾಧೀಶರ ಮನೆಗೊಯ್ದು ಮತ್ತೆ ಪೊಲೀಸ್ ಕಸ್ಟಡಿಗೊಪ್ಪಿಸಿದ ಪತ್ರಿಕಾ ಹೇಳಿಕೆ ಭಾನುವಾರದ ಸಂಜೆಯೇ ಎಲ್ಲಾ ಪತ್ರಿಕಾ ಕಚೇರಿಗಳಿಗೂ ತಲುಪಿತ್ತು.

ಎನ್‌ಕೌಂಟರ್‌ನ ನಿರೀಕ್ಷೆಯಲ್ಲಿದ್ದ ಕ್ರೈಮ್ ವರದಿಗಾರರಿಗೇ ಅಚ್ಚರಿಯಾಗಿತ್ತು. ಪತ್ರಕರ್ತರ ವಿರುದ್ಧ ಆ ಪಾಟಿ ಹರಿಹಾಯ್ದ ಅಲೋಕ್‌ಕುಮಾರ್ ಎನ್‌ಕೌಂಟರ್ ಮಾಡದೇ ಸುನೀಲನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾದರೂ ಏಕೆ?

ಯಾರಿಗೂ ಅರ್ಥವಾಗದ ಸುನೀಲನ ಎನ್‌ಕೌಂಟರ್ ರದ್ದಾದ ಪ್ರಸಂಗದ ಕುರಿತು ಸಿಸಿಬಿಯ ಸಬ್‌ಇನ್ಸ್‌ಪೆಕ್ಟರ್ ನಾಗಣ್ಣಗೌಡ ತಮ್ಮದೇ ರೀತಿಯಲ್ಲಿ ಸತ್ಯ ಬಿಚ್ಚಿಟ್ಟಿದ್ದರು. 'ಏನ್ ಸಾರ್ ಮಾಡೋದು....? ಅಲೋಕ್‌ಕುಮಾರ್ ಸಾಹೇಬ್ರು ಆರು ತಿಂಗಳು ಕಷ್ಟಪಟ್ಟು ಆ ನನ್ ಮಗನ್ನ ಹಿಡಿದು ಹಾಕುದ್ರೆ ಅವನನ್ನ ಎನ್‌ಕೌಂಟರ್ ಮಾಡ್ಬೇಡಿ ಎಂದು ಎಮ್ಮೆಲ್ಲೇ ಮಂತ್ರಿಗಳು ಫೋನ್ ಮಾಡ್ತಾರೆ....'

ಇದು ಸಿಸಿಬಿಯ ಅನುಭವಿ ಎಸ್.ಐ. ನಾಗಣ್ಣಗೌಡರ ಗೋಣಗಾಟ. ನಾಗಣ್ಣಗೌಡರ ಬೆನ್ನಿಗೆ ಬಿದ್ದ ಒಂದಿಬ್ಬರು ವರದಿಗಾರರು ನಾನಾ ವಿದ್ಯೆ ಬಳಸಿ ಬಾಯಿಬಿಡಿಸಿದರೆ ಬಂದದ್ದು ಮಂತ್ರಿ ಕಟ್ಟಾ ಸುಬ್ರಹ್ಮಣ್ಯನಾಯ್ಡು ಪುತ್ರ ಕಟ್ಟಾ ಜಗದೀಶ್ ಮತ್ತು ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್ ಹೆಸರು!

ಫೆಬ್ರವರಿ 6 ರ ಶನಿವಾರ ರಾತ್ರಿಯೇ ಸುನೀಲನ ಎನ್‌ಕೌಂಟರ್‌ಗೆ ಅಲೋಕ್ ಕುಮಾರ್ ಮುಹೂರ್ತ ವಿಟ್ಟಾಗಿತ್ತು. ಸಿಸಿಬಿಯ ಇನ್ಸ್‌ಪೆಕ್ಟರ್‌ಗಳಾದ ಬಾಳೇಗೌಡ ಮತ್ತು ಅಶೋಕನ್ ಅದಕ್ಕೆ ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಂಡಾಗಿತ್ತು. ಆದರೆ ಶನಿವಾರದ ಸಂಜೆಯ ಹೊತ್ತಿಗೆ ಕಮಿಷನರ್ ಬದರಿಯವರಿಗೆ ಮಂತ್ರಿ ಕಟ್ಟಾರಿಂದ ಫೋನು ಬಂದಿತ್ತು. ಮಗ ಜಗ್ಗ ಮತ್ತು ಶಾಸಕ ವಿಶ್ವನಾಥ್ ಅಕ್ಕಪಕ್ಕ ಕೂತು ಸುನೀಲನ ಎನ್‌ಕೌಂಟರ್ ಮಾಡದಂತೆ ಮಂತ್ರಿ ಕಟ್ಟಾ ಮೂಲಕ ಫೋನಾಯಿಸಿದ್ದರು!

ಆ ಕ್ಷಣದ ತನಕ ಸುನೀಲನ ಎನ್‌ಕೌಂಟರ್‌ನ ತವಕದಲ್ಲಿದ್ದ ಬದರಿ ಮತ್ತು ಅಲೋಕ್‌ಕುಮಾರ್ ಸಿಟ್ಟೆಲ್ಲ ಕಟ್ಟಾನ ಒಂದೇ ಒಂದು ಫೋನ್‌ಕಾಲ್ ಮೂಲಕ ಠುಸ್ಸೆಂದಿತ್ತು. ಇಷ್ಟಾಗಿದ್ದೇ ಕ್ರೈಮ್ ವರದಿಗಾರರೆಲ್ಲ ಮಂತ್ರಿ ಕಟ್ಟಾ ಮತ್ತು ಮಗ ಜಗ್ಗನ ಹೆಸರೆತ್ತಿ ಹಿಡಿಶಾಪ ಹಾಕುತ್ತಿದ್ದರು. ಸುನೀಲ ಮತ್ತಾತನ ಹಂತಕ ಪಡೆ ಸೇಫಾಗಿ ಲಾಕಪ್ಪು ಸೇರಿಕೊಂಡಿತ್ತು.


ಒಬ್ಬ ಮಂತ್ರಿ ಮತ್ತಾತನ ಕೇಡಿಪುತ್ರನಿಗೆ ಪೊಲೀಸರು ಸೈಲೆಂಟ್ ಸುನೀಲನನ್ನು ಹಿಡಿಯಲು ಪಟ್ಟ ಪಾಡೆಲ್ಲಿ ಅರ್ಥವಾಗಬೇಕು?

ಸುನೀಲನಿಗಾಗಿ 2009ರ ಜುಲೈ ತಿಂಗಳಿನಿಂದ ಸಿಸಿಬಿ ಪೊಲೀಸರು ಹೆಣಗಾಡಿದ್ದು ಅಷ್ಟಿಷ್ಟಲ್ಲ. ಬುಲೆಟ್ ರವಿ ಹತ್ಯೆ ನಡೆದ ಮರುಗಳಿಗೆಯಿಂದಲೇ ಬೆಂಗಳೂರನ್ನು ಬಿಟ್ಟ ಸುನೀಲ ಈ ಬಾರಿ ಅತ್ಯಂತ ಎಚ್ಚರಿಕೆ ವಹಿಸಿಯೇ ಪೊಲೀಸರನ್ನು ಯಾಮಾರಿಸಿದ್ದ. ಕಮೀಷನರ್ ಬದರಿಯವರ

ಯಲಹಂಕದ ರೌಡಿ ಎಮ್ಮೆಲ್ಲೇ ವಿಶ್ವನಾಥ್


ಬುಲೆಟ್‌ರವಿ

ಸೈಲೆಂಟ್ ಸುನೀಲನಿಗೂ ಕಟ್ಟಾ ಜಗದೀಶನಿಗೂ ನೆಂಟಸ್ತಿಕೆ ಕುದುರಿಸಿದ್ದು ಯಲಹಂಕ ಶಾಸಕ ವಿಶ್ವನಾಥ್. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸುನೀಲ ಮತ್ತು ಒಂಟೆ ಗ್ಯಾಂಗ್ ಕೇವಲ ವಿಶ್ವನಾಥ್ ಪರವಾಗಿಯಷ್ಟೇ ಹೆಣಗಿಲ್ಲ, ಜೊತೆಗೆ ಹೆಬ್ಬಾಳದಲ್ಲಿ ಕಟ್ಟಾ ಗೆಲ್ಲಿಸುವುದಕ್ಕೂ ಸಾಕಷ್ಟು ಓಡಾಡಿತ್ತು. ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬಂಡಿಕೆಲಾಡಿಗೆ ಹಳ್ಳಿಯಲ್ಲಿ ಕಟ್ಟಾ ಶುರುವಿಟ್ಟ ಭೂಕಬಳಿಕೆಗೆ ಬೀಕೆ ಮಂಜ ಎಂಬ ಪುಡಿರೌಡಿಯ ಜೊತೆ ಬೆಂಗಾವಲಾಗಿ ನಿಂತಿದ್ದು ಸುನೀಲನ ಗ್ಯಾಂಗು.


ವಿಶ್ವನಾಥ್

ಕಟ್ಟಾ ಜಗ್ಗ ಮತ್ತು ಯಲಹಂಕ ಶಾಸಕ ವಿಶ್ವನಾಥ್‌ರ ಜಂಟಿ ನೆರವಿನಿಂದಲೇ ಸುನೀಲ ಯಲಹಂಕ ಸಮೀಪದ ಕೊಡಿಗೇಹಳ್ಳಿಯಲ್ಲಿ ಮನೆ ಮಾಡಿದ. ಬುಲೆಟ್ ರವಿಯ ಹತ್ಯೆಯಾಗುವುದಕ್ಕೂ ಹದಿನೈದು ದಿನದ ಹಿಂದೆ ಶಾಸಕ ವಿಶ್ವನಾಥ್ ಹುಟ್ಟುಹಬ್ಬಕ್ಕೆಂದು ಸುನೀಲನೂ ಬಂದಿದ್ದ. ಅವತ್ತು ಸುನೀಲನ ಜೊತೆಗಿದ್ದ ಒಂಟೆ ಮತ್ತು ಗೆಡ್ಡನಾಗರ ಜೊತೆ ಶಾಸಕ ವಿಶ್ವನಾಥ್ ಕೂತು ವಿಸ್ಕಿ ಕುಡಿದಿದ್ದ. ಅಲ್ಲೇ ಬುಲೆಟ್ ರವಿಯ ಕೊಲೆಗೆ ಸ್ಕೆಚ್ಚು ಹಾಕಿದ್ದೆಂದು ಆನಂತರ ಸೆರೆಸಿಕ್ಕ ಗೆಡ್ಡ ನಾಗರಾಜ ಸಿಸಿಬಿ ಪೊಲೀಸರ ಮುಂದೆ ಎಮ್ಮೆಲ್ಲೇ ವಿಶ್ವನಾಥ್ ವಿರುದ್ಧ ಹೇಳಿಕೆ ಕೊಟ್ಟಿದ್ದ.

ಎಷ್ಟೆಂದರೂ ಬಿಜೆಪಿ ಶಾಸಕ ತಾನೆ? ಕ್ರಿಮಿನಲ್ ಶಾಸಕ ವಿಶ್ವನಾಥ್‌ನನ್ನು ಬಂಧಿಸುವುದು ಹಾಳಾಗಲಿ ಕನಿಷ್ಠ ಆತನ ವಿರುದ್ಧ ಪೊಲೀಸರು ಎಫ್‌ಐಆರ್ ಕೂಡ ದಾಖಲಿಸಲಿಲ್ಲ. ಹತ ಬುಲೆಟ್ ರವಿಯ ಅಣ್ಣ ರಾಜು ಲಿಖಿತವಾಗಿ ಶಾಸಕ ವಿಶ್ವನಾಥ್ ವಿರುದ್ಧ ಯಲಹಂಕ ಪೊಲೀಸರಿಗೆ ದೂರು ಕೊಟ್ಟಾಗಲೂ ಪೊಲೀಸ್ ಇಲಾಖೆಗೆ ಎಮ್ಮೆಲ್ಲೇ ವಿಶ್ವನಾಥ್ ಕರೆಸಿ ವಿಚಾರಣೆ ನಡೆಸುವುದಕ್ಕೂ ಧೈರ್ಯ ಸಾಲಲಿಲ್ಲ.

ಇನ್ನು ಕಟ್ಟಾ ಮಗ ಜಗ್ಗನನ್ನು ಪೊಲೀಸರು ಮುಟ್ಟುವುದುಂಟಾ? ತನ್ನೆಲ್ಲಾ ಲ್ಯಾಂಡ್ ರಾಬರಿಗೆ, ಬಡ ರೈತರನ್ನು ಹೆದರಿಸಲಿಕ್ಕೆ, ಕಾಂಪೌಂಡ್ ಹಾಕಿಸಲಿಕ್ಕೆ ಜಗ್ಗನಿಗೆ ಪೊಲೀಸರಿಗಿಂತಲೂ ಸುನೀಲನೇ ಪರಿಣಾಮಕಾರಿ ಅಸ್ತ್ರ.

ಕಾರ್ಯಶೈಲಿಯ ಬಗ್ಗೆ ಆತನಿಗೆ ವಿಪರೀತ ಭೀತಿಯಿತ್ತು. ಜೊತೆಗೆ ಅಲೋಕ್‌ಕುಮಾರ್‌ರಂಥ ನಿಷ್ಠುರಿಯೂ ಸೇರಿಬಿಟ್ಟರೆ ತನಗೆ ಉಳಿಗಾಲವಿಲ್ಲ ಎಂಬುದು ಆತನಿಗೆ ಮನದಟ್ಟಾಗಿತ್ತು. ಅದಕ್ಕೆಂದು ಒಂದಷ್ಟು ದಿನಗಳ ಕಾಲ ಕೇರಳದ ಕೊಚ್ಚಿನ್ ಮತ್ತು ಪಾಂಡಿಚೇರಿಯಲ್ಲಿ ಸುತ್ತಾಡಿ ಬಂದಿದ್ದ. ಈ ಮಧ್ಯೆ ಸಿಸಿಬಿ ತಂಡ ಕೇರಳಕ್ಕೆ ಬಂದ ಸುದ್ದಿ ಹೇಗೋ ಆತನ ಕಿವಿ ಮುಟ್ಟಿದೆ.

ಇನ್ನೆಲ್ಲಿ ತನ್ನನ್ನು ಎನ್‌ಕೌಂಟರ್ ಮಾಡುತ್ತಾರೋ ಎಂದು ತನ್ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆಂದು ಟೀವಿ ಚಾನಲ್ಲುಗಳಿಗೆ ಸುಳ್ಳು ಸುದ್ದಿ ಮುಟ್ಟಿಸಿದ್ದಾನೆ. ಇದರಿಂದ ಮತ್ತಷ್ಟು ಕೆರಳಿದ ಅಲೋಕ್‌ಕುಮಾರ್ ಸುನೀಲನ ಬೇಟೆಯನ್ನು ಮತ್ತಷ್ಟು ತೀವ್ರ ಗೊಳಿಸಿದ್ದಾರೆ. ಆದರೆ ಸುನೀಲ ಇನ್ನೂ ಕಿಲಾಡಿ. ತನ್ನ ತಂಡವನ್ನು ಇಬ್ಭಾಗ ಮಾಡಿ ಒಂಟೆ, ವೇಡಿ, ಲಕ್ಕಸಂದ್ರ ವಿಜಿ ಮತ್ತು ಮಾಗಡಿ ರೋಡ್ ಸೆಂಥಿಲ್ ಪೊಲೀಸರಿಗೆ ಸಿಕ್ಕಿಬಿದ್ದಂತೆ ತಂತ್ರ ರೂಪಿಸಿ ತಾನು ಹೊಸ ಹುಡುಗರ ಜೊತೆ ನಾಪತ್ತೆಯಾಗಿದ್ದಾನೆ. ಹಾಗೇ ಪೊಲೀಸರಿಗೆ ಸೆರೆಸಿಕ್ಕ ಒಂಟೆ ಮತ್ತು ವೇಡಿ ಮೊದಲೇ ನಿರ್ಧರಿಸಿದಂತೆ ಸುನೀಲನ ಸೀಕ್ರೆಟ್ ಮೊಬೈಲ್ ನಂಬರೆಂದು ಸಂಖ್ಯೆಯೊಂದನ್ನು ಸಿಸಿಬಿ ಎಸಿಪಿ ಹಾದಿಮನಿಯವರೆದುರು ಬಾಯಿಬಿಟ್ಟಿದ್ದಾರೆ.

ಅದು ಸುನೀಲನೇ ಹೆಣೆದ ತಂತ್ರವೆಂಬುದನ್ನು ಅರಿಯದ ಪೊಲೀಸರು ಸಿಕ್ಕ ಮೊಬೈಲ್ ನಂಬರನ್ನು ಟ್ರ್ಯಾಪ್ ಮಾಡಿದ್ದೇ ಮಾಡಿದ್ದು. ಕೆಲವೊಮ್ಮೆ ತಮಿಳುನಾಡಿನ ಕೊಚ್ಚಿನ್‌ಗೆ ಹೋಗಿ ತನ್ನ ಮೊಬೈಲನ್ನು ಆನ್ ಮಾಡಿ ತನ್ನ ಪತ್ನಿಯ ಜೊತೆ ಮಾತಾಡುತ್ತಿದ್ದ. ಆನಂತರ ಅದನ್ನು ಸ್ವಿಚ್ ಆಫ್ ಮಾಡುತ್ತಿದ್ದ. ಇದಾಗಿ ಒಂದು ವಾರದ ನಂತರ ತಮಿಳುನಾಡಿನ ತಿರುವಣ್ಣಾಮಲೈನಲ್ಲಿ ಮತ್ತೆ ಅದೇ ಮೊಬೈಲ್ ಆನ್ ಆಗುತ್ತಿತ್ತು. ಅಲ್ಲಿಂದ ಮೊದಲೇ ನಿರ್ಧರಿಸಿದ ತನ್ನ ಒಂದಿಬ್ಬರು ಸಹಚರರೊಂದಿಗೆ ಮಾತಾಡಿ ಸ್ವಿಚ್ ಆಫ್ ಮಾಡುತ್ತಿದ್ದ. ದಿಕ್ಕುತಪ್ಪಿದ ಪೊಲೀಸರು ಕೊಚ್ಚಿನ್‌ಗೋ ತಿರುವಣ್ಣಾಮಲೈನಲ್ಲೋ ಸುನೀಲನಿಗಾಗಿ ಹುಡುಕಾಡುತ್ತಿದ್ದರೆ; ಇದಾಗಿ ಎಷ್ಟೋ ದಿನಗಳ ನಂತರ ಅದೇ ಮೊಬೈಲ್ ಪಾಂಡಿಚೇರಿಯಲ್ಲಿ ಆನ್ ಆಗುತ್ತಿತ್ತು. ಬಿದ್ದೂಬಿದ್ದು ಪೊಲೀಸರು ಪಾಂಡಿಚೇರಿಗೆ ಬಂದರೆ ಅದೇ ಹೊತ್ತಿಗೆ ತಮಿಳುನಾಡಿನ ಧರ್ಮಪುರಿಯಲ್ಲಿ ಮೊಬೈಲ್ ಆನಾಗುತ್ತಿತ್ತು!

ಇದು ಸುನೀಲನ ತಂತ್ರ. ಹಕೀಕತ್ತೆಂದರೆ ಈ ರೀತಿ ತಿಂಗಳಿಗೋ ಹದಿನೈದು ದಿನಕ್ಕೋ ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿಗಳಿಗೆ ಹೋಗಿ ತನ್ನ ಮೊಬೈಲ್ ಆನ್ ಮಾಡಿ ಪತ್ನಿ ಮತ್ತು ಸಹಚರರ ಜೊತೆ ಮಾತಾಡುತ್ತಿದ್ದ ಸುನೀಲ ಬೆಂಗಳೂರಿನ ತನ್ನ ಕೊಡಿಗೇಹಳ್ಳಿಯ ಫ್ಲಾಟಿನಲ್ಲೇ ವಾಸವಾಗಿದ್ದ. ಪೊಲೀಸರನ್ನು ದಿಕ್ಕು ತಪ್ಪಿಸಲೆಂದೇ ನಡುನಡುವೆ ತಮಿಳುನಾಡು, ಕೇರಳಕ್ಕೆ ಹೋಗಿಬರುತ್ತಿದ್ದನೇ ಹೊರತು ಆತ ತನ್ನ ಪತ್ನಿಯ ಜೊತೆ ಮನೆಯಲ್ಲೇ ಅವಿತು ಕುಳಿತಿದ್ದ. ಹಿಂದಿನಂತೆ ಹಿಂಡುಗಟ್ಟಲೇ ಹುಡುಗರನ್ನು ಕಟ್ಟಿಕೊಂಡು ಸುತ್ತುವುದನ್ನು ನಿಲ್ಲಿಸಿಬಿಟ್ಟ. ಈ ಬಾರಿ ತನ್ನ ಯಾವೊಂದು ಕಾರನ್ನೂ ಬಳಸದೇ ಏಕಾಂಗಿಯಾಗಿ ಹೆಲ್ಮೆಟ್ ಧರಿಸಿಕೊಂಡು ಬೈಕಿನಲ್ಲಿ ಓಡಾಡುತ್ತಿದ್ದ. ಹೆಲ್ಮೆಟ್ ಹಾಕಿಕೊಂಡೇ ತನ್ನ ಅಪಾರ್ಟ್‌ಮೆಂಟ್‌ನ್ನು ಸೇರಿಕೊಂಡವನು ವಾರಗಟ್ಟಲೇ ಹೊರಬರುತ್ತಿರಲಿಲ್ಲ. ನಡುನಡುವೆ ಕೇರಳ, ಪಾಂಡಿಚೇರಿಗಳಿಗೆ ಹೋಗಿ ತನ್ನ ಮೊಬೈಲ್ ಆನ್ ಮಾಡಿ ಮಾತಾಡಿ ಪೊಲೀಸರನ್ನು ಯಾಮಾರಿಸುತ್ತಿದ್ದ ಸುನೀಲನ ಆಟವನ್ನು ಉಪಾಯವಾಗಿ ಗ್ರಹಿಸಿದ್ದು ಅಲೋಕ್‌ಕುಮಾರ್.

ಅತ್ತ ಸಿಸಿಬಿ ಪೊಲೀಸರು ಪಾಂಡಿಚೇರಿ, ಕೇರಳಗಳಲ್ಲಿ ಹೊತ್ತು ಗೊತ್ತಿಲ್ಲದೇ ಅಲೆದಾಡುತ್ತಿದ್ದಾಗಲೂ ಅಲೋಕ್ ಕುಮಾರ್ ಸುನೀಲನ ಪತ್ನಿ ಸೌಮ್ಯಳ ಮೇಲೊಂದು ಕಣ್ಣಿಟ್ಟಿದ್ದರು. ಹೆಬ್ಬಾಳ-ಯಲಹಂಕ ರಸ್ತೆಯಲ್ಲಿ ಕೊಡಿಗೇಹಳ್ಳಿಯ ರಾಮ್-ಆಶ್ರಯ ಅಪಾರ್ಟ್‌ಮೆಂಟಿನಲ್ಲಿ ಕಳೆದ ಒಂದೂವರೆ ವರ್ಷದಿಂದ ಸುನೀಲ್ ಮನೆ ಮಾಡಿದ್ದ. ವಿಧಾನಸೌಧದ ಸಚಿವಾಲಯದ ಅಧಿಕಾರಿಯೊಬ್ಬರ ಮಗಳು ಸೌಮ್ಯ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗಿದ್ದ ಸುನೀಲ ಆಕೆಯ ಜೊತೆ ರಹಸ್ಯವಾಗಿ ನೆಲೆಸಿದ್ದ. ಆಕೆ ಕೂಡ ವಾರಗಟ್ಟಲೇ ಮನೆಯಿಂದ ಹೊರಬರುತ್ತಿರಲಿಲ್ಲ. ಆಕೆಯ ಆಪ್ತರೂ ಪರಿಚಿತರ ಜೊತೆಗಿನ ಮಾತುಕತೆಯಲ್ಲಿ ಎಲ್ಲೂ ಸುನೀಲನ ಪ್ರಸ್ತಾಪವಿರುತ್ತಿರಲಿಲ್ಲ.

ಯಾವತ್ತು ವಾರಗಟ್ಟಲೇ ಆಕೆ ಮನೆಯಿಂದ ಹೊರಬರುತ್ತಿಲ್ಲವೆಂಬ ಮಾಹಿತಿ ಸಿಕ್ಕಿತೋ ಅಲೋಕ್ ಕುಮಾರ್ ಅಲರ್ಟ್ ಆಗಿದ್ದಾರೆ. ಗುರುವಾರ ಸಂಜೆಯಾಗುತ್ತಿದ್ದಂತೆ ಎರಡು ಕಾರುಗಳಲ್ಲಿ ರಾಮ್‌ಆಶ್ರಯ ಅಪಾರ್ಟ್‌ಮೆಂಟಿನ ಸೆಲ್ಲಾರ್‌ನಲ್ಲಿದ್ದ ಪಾರ್ಕಿಂಗ್‌ನಲ್ಲಿ ಪೊಲೀಸರು ಹೊಂಚಿ ಕೂತಿದ್ದಾರೆ. ಇದರ ಸುಳಿವಿಲ್ಲದೇ ಬೈಕನ್ನೇರಿ ಏಕಾಂಗಿಯಾಗಿ ಬಂದ ಸುನೀಲ ಸಲೀಸಾಗಿ ಸಿಕ್ಕುಬಿದ್ದ. ಪತ್ನಿ ಸೌಮ್ಯ ಇದನ್ನು ಕಟ್ಟಾ ಮಗ ಜಗ್ಗನಿಗೆ ಮುಟ್ಟಿಸಿದ್ದಾಳೆ. ಎಮ್ಮೆಲ್ಲೆ ವಿಶ್ವನಾಥ್ ಜೊತೆ ಅಪ್ಪನಿಗೆ ದುಂಬಾಲು ಬಿದ್ದ ಜಗ್ಗನಿಗೆ ಬೆಂಗಳೂರು ಎಕ್ಕುಟ್ಟಿದರೇನು? ಎಷ್ಟು ಜನ ಬಿದ್ದರೇನು?

ಆತನಿಗೆ ಸುನೀಲನ ಎನ್‌ಕೌಂಟರ್ ತಪ್ಪಿದರೆ ಸಾಕು!

ರಾ. ಸೋಮನಾಥ್

ಭದ್ರಾವತಿ ಎಮ್ಮೆಲ್ಲೆ ಬೈಗಳ ಗೊತ್ತ!

ಎಡೂರಪ್ಪನ ಕೈಗೆ ಅನಾಯಾಸವಾಗಿ ಸಿಕ್ಕಿಬಿದ್ದ ಸೋಮಣ್ಣ ಎಂಬ ಸೋಗಲಾಡಿ ರಾಜಕಾರಣಿಯನ್ನು ಮೇಲ್ಮನೆಗೆ ನೂಕಲು ರಾಜ್ಯಪಾಲ ನಿರಾಕರಿಸಿದರಂತಲ್ಲಾ, ಇದನ್ನು ಕೇಳಿದ ಕಾಂಗೈಗಳು ಕುಣಿದಾಡಿಕೊಂಡು "ಪಾಪಿ ಸಮುದ್ರಕ್ಕೋದರೂ ಮೊಳಕಾಲುದ್ದ ನೀರಂತೆ. ಕಾಂಗ್ರೆಸ್‌ಗೆ ಹೇಳಿಮಾಡಿಸಿದಂತಿದ್ದ ಸೋಮಣ್ಣನಿಗೆ ಅಗೇ ಆಗಬೇಕು" ಎಂದವಲ್ಲಾ, ಅದನ್ನು ತಿದ್ದುಪಡಿ ಮಾಡಿದ ವಿಚಾರವಾದಿ ಕಾಂಗೈಗಳು "ಸೋಮಣ್ಣ ಹೋಗಿದ್ದು ಸಮುದ್ರಕ್ಕಲ್ಲ, ಕೊಚ್ಚೆಗುಂಡಿಗೆ. ಮೊಸಳೆಗಳ ಹೊಂಡಕ್ಕೆ, ಹಂದಿಗಳ ಗುಂಡಿಗೆ. ಅದ್ದರಿಂದ ಅವರಿಗೆ ತಕ್ಕ ಶಾಸ್ತಿಯಾಗಿದೆ" ಎಂದು ಆಡಿಕೊಂಡವಂತಲ್ಲಾ. ಈ ನಡುವೆ ಸೋಮಣ್ಣ ಶಾಸ್ತ್ರ ಕೇಳಲಾಗಿ ಸೋಮಣ್ಣನ ಕ್ಷೇತ್ರದ ದಕ್ಷಿಣ ದಿಕ್ಕಿಗಿರುವ ಗ್ರಹವೊಂದು ಈ ಹಿಂದಿನಂತೆ ಈಗಲೂ ಕಾಡುತ್ತ ಅದರ ಕೈವಾಡವೂ ಈ ನಿರಾಕರಣೆಯಲ್ಲಿರಬಹುದೆಂಬ ಗುಮಾನಿ ತರುವ ವಾಕ್ಯಗಳು ಉದ್ಭವಿಸಿದವಂತಲ್ಲಾ, ಥೂತ್ತೇರಿ!

******

ಇನ್ನು ವಿಧಾನಪರಿಷತ್ತಿಗೆ ನಾಮಕರಣಗೊಂಡಿರುವವರ ಪೈಕಿ ಪಿ.ವಿ. ಕೆಟ್ಟ ಭಟ್ಟ ಎಂಬ ಹಳೆ ಚೆಡ್ಡಿಯೊಂದರ ನೇಮಕ ಚೆಡ್ಡಿಗಳ ಪಾಲಿಗೆ ಸೂಕ್ತವಾದ ಆಯ್ಕೆಯಾಗಿದೆಯಂತಲ್ಲಾ, ಸದಾ ಪುರೋಹಿತರ ಏಳ್ಗೆಯ ಬಗ್ಗೆ ಯೋಚಿಸುತ್ತ, ಗೋಳವಲ್ಕರ್ ಬಗ್ಗೆ ಧ್ಯಾನಿಸುತ್ತ, ಮುಂದೊಮ್ಮೆ ಇಡೀ ಭಾರತ ಮನುಧರ್ಮಮಯವಾಗಿ ಕಂಗೊಳಿಸುವುದನ್ನೇ ಕಾಣುತ್ತ ಕಾಲ ಹಾಕುವ ಈ ಭಟ್ಟನ ವೃತ್ತಾಂತ ಕೆದಕಿದರೆ ಹಳಸು ಗಾಳಿಯ ದುರ್ಗಂಧವೇ ಬೀರುವುದಂತಲ್ಲಾ, ಸದ್ಯ ವಿಧಾನ ಪರಿಷತ್‌ಗೆ ನೇಮಕಗೊಂಡಿರುವ ಭಟ್ಟನ ಮೊದಲ ಕಿತಾಪತಿಯೆಂದರೆ ಶಿಕ್ಷಣ ಸಚಿವರನ್ನು ಹಿಡಿದುಕೊಂಡು ಇಡೀ ಶಿಕ್ಷಣ ಇಲಾಖೆಗೆ ಹೇಗೆ ಬಡಿಗೆ ಕೊಡುವುದು ಮತ್ತು ಹೇಗೆ ಚೆಡ್ಡಿ ತೊಡಿಸುವುದು ಎಂಬ ಆಲೋಚನೆಯೇ ಆಗಿದೆಯಂತಲ್ಲಾ, ಅಕ್ಷರ ಮನುಷ್ಯನ ಬುದ್ಧಿಯ ಸಂಕೇತ. ಜ್ಞಾನದ ಸಂಕೇತ. ಅಕ್ಷರದ ಮುಖಾಂತರ ಮನುಷ್ಯನನ್ನು ಜ್ಞಾನದೆಡೆಗೆ ಕೊಂಡೊಯ್ಯುವ ಬದಲು ತನ್ನ ಇಡೀ ಬದುಕಿನಲ್ಲಿ ಅಜ್ಞಾನ ಅಧರ್ಮವನ್ನೇ ಬೋಧಿಸುತ್ತ ಬಂದ ಈ ಪುರೋಹಿತ ಪಿಂಡವೂ ಕೂಡ ವಿಧಾನ ಪರಿಷತ್‌ನಂತಹ ಶ್ರೇಷ್ಠ ಸ್ಥಾನ ಅಲಂಕರಿಸುವಂತಾಯ್ತಲ್ಲಾ, ಥೂತ್ತೇರಿ!

******

ಕರ್ನಾಟಕದ ರಾಜಕಾರಣದ ಇತಿಹಾಸದಲ್ಲಿ ಒಂದು ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರ ಹೆಂಡತಿಯರೆಲ್ಲಾ ಸೇರಿ ಪೊಲೀಸ್ ಅಧಿಕಾರಿಯನ್ನು ಭೇಟಿಯಾಗಿ "ದಯವಿಟ್ಟು ಶಾಸಕನಿಂದ ನಮ್ಮ ಗಂಡಂದಿರಿಗೆ ಬಂದಿರುವ ಗಂಡಾಂತರವನ್ನು ದೂರ ಮಾಡಿ, ಇಲ್ಲ ಅವನ ಬೈಗುಳಕ್ಕೆ ಕಡಿವಾಣ ಹಾಕಿ. ಇಲ್ಲವಾದರೆ ಸಾಮೂಹಿಕವಾಗಿ ವರ್ಗಾವಣೆ ಮಾಡಿ" ಎಂಬ ಅಹವಾಲನ್ನು ನೀಡಿದ್ದು ಇದೇ ಮೊದಲಂತಲ್ಲಾ, ಭದ್ರಾವತಿಯ ಶಾಸಕ ಸಂಗಮೇಶ ಎಂಬ ಅನಾಗರಿಕನ ಬೈಗುಳಕ್ಕೆ ಹೆದರಿದ ಪೊಲೀಸರೆಲ್ಲಾ ತಮ್ಮ ಹೆಂಡತಿಯರ ಎದುರು ಕಣ್ಣೀರು ಹಾಕುತ್ತ "ನಾನು ನಿನ್ನನ್ನ ಕೆಟ್ಟದಾಗಿ ಬೈದರೆ, ಹಲ್ಲೆ ಮಾಡಿದರೆ ನೀನು ನನ್ನನ್ನು ದೂರ ಕೂಡದು. ಅದಕ್ಕೆ ನಮ್ಮನ್ನು ಹೀನಾಯವಾಗಿ ನಿಂದಿಸುವ ಶಾಸಕನೇ ಕಾರಣ" ಎಂದು ಗೋಳಾಡಿದವಂತಲ್ಲಾ, ಇದರ ಪರಿಣಾಮವೇ ಪೊಲೀಸರ ಹೆಂಡತಿಯರು ರಕ್ಷಣಾಧಿಕಾರಿಯ ಮೊರೆ ಹೋಗಲು ಕಾರಣವಂತಲ್ಲಾ, ಥೂತ್ತೇರಿ!!

ಥೂತ್ತೇರಿ

******



ಇಂತಹ ಅಪರೂಪದ ಶಾಸಕರನ್ನು ನಾವು ಮಾತನಾಡಿಸಬೇಡವೇ. ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು,

ರಿಂಗ್ ಟೋನ್: "ನಿನ್ನಾ ಪೂಜೆಗೆ ಬಂದೇ ಮಾದೇಶ್ವರಾ...."

"ಹಲೋ ಯಾರು?"

"ನಾನು ಯಾಹೂ ಅಂತ ಸಾರ್, ಪತ್ರಕರ್ತ."

"ಪತ್ರಕರ್ತರೇನ್ರೀ?"

"ಯಾಕ್ ಸಾರ್ ರಾಗ ಯಳಿತಿರಿ. ಪತ್ರಕರ್ತರು ಅಂದ್ರೆ ತಾತ್ಸಾರನ?"

"ತಾತ್ಸಾರ ಅಲ್ಲ ಕಂಡ್ರೀ, ಅವುರು ನಮ್ಮಂಗೆಯಾ ಅಂತ ಅಂಗಂದೆ. ಏನೇಳ್ರೀ?"

"ನಿಮ್ಮ ದನಿಲಿ ನನ್ನ ದೈನೇಶಿ ಬೇಡಿಕೆ ಪೂರೈಸೊ ಮನಸಿದ್ದಂಗಿದಿಯಲ್ಲಾ ಸಾರ್."

"ಪಾಪ ಪತ್ರಕರ್ತರು ನ್ಯಟ್ಟಗಿದ್ರೆ ಇವತ್ತಿನ ದಿವಸದಲ್ಲಿ ಕಾಲ ಮಾಡಕ್ಕಾಯ್ತದೇನ್ರಿ? ಸೈಟ್ ತಗಳಕ್ಕಾಯ್ತದಾ? ಮನೆ ಕಟ್ಟಕ್ಕಾಯ್ತದಾ? ಯಲ್ಲಾರು ಬದ್ಲಾಗಲೇಬೇಕು ಇಲ್ಲ ಅಂದ್ರೆ ಕಾಲ ಮಾಡದು ಕಷ್ಟ."

"ಬದಲಾಗ್ಲೆಬೇಕು ಅಂತ ಹೇಳಬೇಡಿ ಸಾರ್. ಕೆಟ್ಟೋಗ್ಲೆಬೇಕು ಅಂತ ಹೇಳಿ."

"ಅದೂ ಅದೇ ಅಲವೇನ್ರಿ. ನಿಮಗೇನಾಗಬೇಕು ಹೇಳಿ?"

"ಸಾರ್, ನಿಮ್ಮ ಏರಿಯಾದ ಪತ್ರಕರ್ತರನ್ನ ದೃಷ್ಟಿಯಲಿಟ್ಟುಕೊಂಡು ಮಾತಾಡಬೇಡಿ. ಕೇಳಿದ್ದಕ್ಕೆ ಉತ್ತರ ಹೇಳಿ."

"ಕೇಳ್ರೀ."

"ಭದ್ರಾವತಿ ಪೊಲೀಸರನ್ನ ಯಾಕೆ ಅಷ್ಟು ಕೆಟ್ಟ ಮಾತಲಿ ಮಾತಾಡುಸ್ತಿರಂತೆ?"

"ಅಲ್ರೀ, ಪೊಲೀಸ್‌ನೋರ ಇನ್ಯಾವ ಮಾತಲಿ ಮಾತಾಡುಸ್‌ಬೇಕು ನೀವೆ ಹೇಳ್ರಿ. ಅವುರನ್ನ ಸಾರ್ ಅನ್ನಕಾಯ್ತದಾ? ಅಣ್ಣಾ ಅನ್ನಕ್ಕಾಯ್ತದಾ? ಬೋಳಿಮಗನೆ, ಸೂಳೆಮಗನೆ ಅಂದ್ರೇ ಅವುರು ಮಾತಕೇಳದು. ಅವು ಕೆಟ್ಟ ಮಾತಾ? ಅವುರು ಜನಗಳಿಗೆ ಅನ್ನದಿಲವಾ? ಅದ್ಕೆ ನಾವು ಅವುರಿಗಂದ್ರೆ ಯಾಕ್ರಿ ಬೇಜಾರಾಗಬೇಕು?"

"ನೀವೇಳದು ಸರೀನೆ. ಜನಗಳನ್ನ ಹಲ್ಕ ಮಾತಲ್ಲಿ ಬೈಯ್ಯೋ ಜನಗಳನ್ನ ಹಲ್ಕ ಮಾತಲ್ಲೇ ಬೈಯಬೇಕು ಅನ್ನದು ನಿಮ್ಮ ಧರ್ಮ. ಆದ್ರೆ ಶಿಕ್ಷಣ ಇಲಾಖೆ ಜನಗಳನ್ನ ಅದರಲ್ಲೂ ಪ್ರಿನ್ಸಿಪಾಲರನ್ನ ಬೈಯೋದು ಸರಿನಾ ಸಾರ್?"

"ಪ್ರಿನ್ಸಿಪಾಲಾಗ್ಲಿ ಯಾರೆ ಆಗ್ಲಿ ನಮ್ಮ ಕೆಲಸ ಮಾಡಿ ಕೊಡ್ಡಿಲ್ಲ ಅಂದ್ರೆ ನಾನಂಗೆ ಬೈಯ್ಯದು. ನನ್ನ ಮಗನಿಗೇ ಸೀಟ್ ಕೊಡ್ಡಿಲ್ಲ ಅಂದ್ರೆ ಬೈಯಬಾರದಾ?"

"ಆ ತರ ಬೈಯ್ಯೋ ಹಕ್ಕು ನಿಮಗಿಲ್ಲ ಕಂಡ್ರಿ. ಲೇಡಿ ಪ್ರಿನ್ಸಿಪಾಲ್ ತಾರಾ ಅವರನ್ನ ಸೀರೆ ಬಿಚ್ಚತಿನಿ ಅಂದಿದ್ದೀರಲ್ರಿ ಇದು ಸರಿನಾ?"


"ರಿ ಅಂಗಲ್ಲ ಕಂಡ್ರಿ ಅಂದಿದ್ದು. ಗಂಡಸಾಗಿದ್ರೆ ನಿಮ್ಮ ಬಟ್ಟೆ ಬಿಚ್ಚ ಹ್ಯಡಿತಿದ್ದೆ, ಹೆಂಗೂಸಾಗಿರೊವತ್ತಿಗೆ ಬಿಟ್ಟಿದ್ದಿನಿ ಅಂದೆ."

"ನಿನ್ನೆಂಡತಿನೊ ನಿಮ್ಮವ್ವನೊ ಭದ್ರಾವತಿ ಕಾಲೇಜಲ್ಲಿ ಪ್ರಿನ್ಸಿಪಾಲಾಗಿದ್ರೆ, ಅಂತ ಮಾತಾಡ್ತಿದ್ದ? ಮುಂಡೆ ಮಗನೆ, ಮೊದಲು ಒಳ್ಳೆ ಭಾಷೆ ಕಲಿ."


ಥೂತ್ತೇರಿ!!!

● ಯಾಹೂ

ಕಾರ್ಟೂನ್ ಕಾರ್ನರ್



ಸೋಮಣ್ಣನ ಕರ್ಮ



ಪಾಪಿ ಸಮುದ್ರಕ್ಕೆ ಹೋದರೂ ನೀರು ಮೊಣಕಾಲ ಮಟ್ಟಕ್ಕಂತೆ. ಅಧಿಕಾರಸ್ಥ ಬಿಜೆಪಿಗೆ ಬಂದರೂ ಮಂತ್ರಿಗಿರಿಯಿಂದ ಜಾರಿಬಿದ್ದ ವಿಜಯನಗರದ 'ವೀರ ಕುವರ' ಸೋಮಣ್ಣನಿಗೆ ಕನಿಷ್ಠ ಎಮ್ಮೆಲ್ಸಿಗಿರಿಯೂ ಕೈಕೊಡುತ್ತಿದೆಯೆಂದರೆ ಏನೆನ್ನಬೇಕು?

ಯಾಕೋ ಸೋಮಣ್ಣನ ಟೈಮೇ ಸರಿಯಿದ್ದಂತಿಲ್ಲ. ಬದುಕಿನ ಕಡೇ ಕಾಲದಲ್ಲಿ ಬಿಜೆಪಿಗೆ ಬಂದು ಮಂತ್ರಿಯೂ ಆಗಿ ಇನ್ನೇನು ಯಡ್ಡಿಯ ಉತ್ತರಾಧಿಕಾರಿ ಆಗೇ ಬಿಟ್ಟರೆಂದು ಜನ ಹುಬ್ಬೇರಿಸುವ ಮೊದಲೇ ಸೋಲು ವಕ್ಕರಿಸಿತ್ತು. ಪ್ರಿಯಕೃಷ್ಣನೆಂಬ ಹುಡುಗನ ಮುಂದೆ ಹೀನಾಯವಾಗಿ ಸೋತ ಸೋಮಣ್ಣನ ಪಾಲಿಗೆ ಬಿಜೆಪಿಗಿದ್ದ ಅಧಿಕಾರ ಬಲ, ತಾನೇ ಮಾಡಿದ ಕೆಲಸ ಕಾರ್ಯ, ಸಂಪಾದಿಸಿದ್ದ ಶಿಷ್ಯ ಕೂಟ, ಕೂಡಿಟ್ಟ ದುಡ್ಡು ಯಾವುದೂ ಬರಕತ್ತಾಗಲಿಲ್ಲ.

ಅದು ಸೋಮಣ್ಣನ ವಿರುದ್ಧ ಜನಕ್ಕಿದ್ದ ಆಕ್ರೋಶದ ಮತ್ತೊಂದು ರೂಪವಷ್ಟೇ. ಸತತ ಹತ್ತಾರು ವರ್ಷಗಳಿಂದ ತನ್ನ ವಿಜಯನಗರ ಸಾಮ್ರಾಜ್ಯವನ್ನು ಆಳಿಕೊಂಡೇ ಬಂದ ಸೋಮಣ್ಣ ಬೆಳೆಸಿದ್ದು, ಪೋಷಿಸಿದ್ದು; ರವೀಂದ್ರ, ಪುಟ್ಟರಾಜು, ವಿಶ್ವನಾಥಗೌಡ, ರಾಗಿಮಿಷಿನ್ ಕಿಟ್ಟಿ, ಶಾಂತಕುಮಾರಿ, ಕೃಷ್ಣಪ್ಪರಂಥ ಅದೇ ರೌಡಿ ಎಲಿಮೆಂಟುಗಳನ್ನೇ. ಸಜ್ಜನರು, ವಿಚಾರವಂತರ್‍ಯಾರೂ ವಿಜಯನಗರದಲ್ಲಿ ತಲೆ ಎತ್ತಲಿಲ್ಲ. ಅತ್ತ ಪೊಲೀಸರನ್ನು ಇತ್ತ ಪುಂಡರನ್ನೂ ಒಟ್ಟೊಟ್ಟಿಗೆ ಸಂಭಾಳಿಸುವುದನ್ನೇ ರಾಜಕೀಯವೆಂದು ಭಾವಿಸಿದ ಸೋಮಣ್ಣನ ವಿರುದ್ಧ ಜನಕ್ಕಿದ್ದ ಸಿಟ್ಟು ಪ್ರಿಯಕೃಷ್ಣನಂಥ ರಾಜಕೀಯದ ಯುವಕನಿಗೆ ನೆರವಾಯಿತು. ವಾಸ್ತವವಾಗಿ ಸೋಮಣ್ಣನ ತಾಕತ್ತಿನ ಮುಂದೆ ಪ್ರಿಯಕೃಷ್ಣ ಆಗಲಿ ಆತನ ತಂದೆ ಲೇಔಟ್ ಕೃಷ್ಣಪ್ಪ ಆಗಲಿ ಸಮಕ್ಕೆ ತೂಗುವವರಲ್ಲ.

ಮಂತ್ರಿಗಿರಿಯಿದ್ದೂ, ಬಿಜೆಪಿ ಅಧಿಕಾರದಲ್ಲಿದ್ದೂ ಸೋಮಣ್ಣ ಸೋಲುತ್ತಾನೆಂದರೆ ಅದು ತನ್ನ ದುರಾಚಾರದ ವಿರುದ್ಧ ಜನಕ್ಕಿದ್ದ ಆಕ್ರೋಶವೆಂಬುದನ್ನು ಸೋಮಣ್ಣ ಅರ್ಥಮಾಡಿಕೊಳ್ಳಲಿಲ್ಲ. ಹೇಗೂ ಮುಖ್ಯಮಂತ್ರಿ ಯಡ್ಡಿ ತನ್ನನ್ನು ಎಮ್ಮೆಲ್ಸಿ ಮಾಡಿಯಾದರೂ ಮಂತ್ರಿ ಮಾಡುತ್ತಾರೆಂದೇ ಲೆಕ್ಕ ಹಾಕಿದ್ದ. ಅದಾಗದೇ ಹೋದರೆ ತನ್ನನ್ನು ಬಿಡಿಎ ಛೇರ್ಮನ್ ಮಾಡಿ ಯಡ್ಡಿ ಕೈಹಿಡಿಯುತ್ತಾರೆಂಬುದು ಆತನ ನಿರೀಕ್ಷೆಯಾಗಿತ್ತು. ತನಗಾಗಿ ಬೆಂಗಳೂರಿನ ಮೇಯರ್‌ಗಿರಿಯನ್ನು ಅಪ್‌ಗ್ರೇಡ್ ಮಾಡಿ ಬಿಜೆಪಿ ಕೈಹಿಡಿಯುತ್ತದೆಯೆಂಬ ದೂರದ ಆಸೆಯೊಂದು ಸೋಮಣ್ಣನಿಗಿತ್ತು. ಆದರೆ ವಿಧಿ ಬೇರೆಯದನ್ನೇ ಬಗೆದಿತ್ತು.

ಚಿತ್ರನಟ ಜಗ್ಗೇಶ್ ಮತ್ತು ಆರೆಸ್ಸೆಸ್ ಕ್ರಿಮಿ ಕೃಷ್ಣಭಟ್ಟರ ಜೊತೆ ಎಮ್ಮೆಲ್ಸಿಗಿರಿಗೆಂದು ಕಳಿಸಿದ್ದ ಯಡ್ಡಿಯ ಪ್ರಸ್ತಾವನೆಯಲ್ಲಿದ್ದ ಸೋಮಣ್ಣನ ಹೆಸರನ್ನು ರಾಜ್ಯಪಾಲರು ತಿರಸ್ಕರಿಸಿಬಿಟ್ಟರು. ಹೇಳಿಕೇಳಿ ಸೋಮಣ್ಣನ ಹೆಸರಿದ್ದ ಎಂಎಲ್‌ಸಿ ಹುದ್ದೆಗೆ ಸಮಾಜ ಸೇವಕರಷ್ಟೇ ಬರಬೇಕು. ಸೋಮಣ್ಣನಂಥ ಚುನಾವಣೆ ಸೋತ, ಪಕ್ಷ ಬದಲಿಸಿದ, ಮಾಜಿ ಮಂತ್ರಿಯಾಗಿದ್ದೂ ಮತ್ತೆ ಅಧಿಕಾರದ ಕದ ತಟ್ಟುವ ಪುಢಾರಿಯನ್ನು ಓರ್ವ ನಿಸ್ವಾರ್ಥಿ ಸಮಾಜಸೇವಕನೆಂದು ರಾಜ್ಯಪಾಲರಾದರೂ ಹೇಗೆ ಒಪ್ಪಲು ಸಾಧ್ಯ.


ಹಾಗಿದ್ದೂ ರಾಜ್ಯಪಾಲರು ತಿರಸ್ಕರಿಸಿದ್ದ ಸರ್ಕಾರಿ ಶಿಫಾರಸ್ಸನ್ನು ಯಡ್ಡಿ ಸರ್ಕಾರ ಎರಡನೇ ಬಾರಿಗೆ ಕಳಿಸಬಹುದಿತ್ತು. ಕಳಿಸಿದ್ದರೆ ರಾಜ್ಯಪಾಲರು ಒಪ್ಪುತ್ತಿದ್ದರೋ ಏನೋ. ಆದರೆ ಬಿಜೆಪಿಯ ಹೊಸ ಅಧ್ಯಕ್ಷ ಈಶ್ವರಪ್ಪನಿಗೆ ಸೋಮಣ್ಣನ ಹೆಸರೆಂದರೇನೇ ಅಲರ್ಜಿಯಾಗಿತ್ತು. ಒಮ್ಮೆ ರಾಜ್ಯಪಾಲರು ತಿರಸ್ಕರಿಸಿದ ಮೇಲೆ ಮತ್ತಾಕೆ ಅದೇ ಹೆಸರನ್ನು ಕಳಿಸೋದು? ಬಿಜೆಪಿಯಲ್ಲಿ ಬೇರೆ ಯಾರೂ ಗತಿ ಇಲ್ಲವೆ? ಎಂದು ಸೋಮಣ್ಣನ ಎಮ್ಮೆಲ್ಸಿ ಕನಸನ್ನು ಈಶ್ವರಪ್ಪ ಝಾಡಿಸಿಬಿಟ್ಟರು. ಅದೇ ಹೊತ್ತಿಗೆ ಆರೆಸ್ಸೆಸ್ ಬೇರೆಯದೇ ಬೇಡಿಕೆಯಿಟ್ಟಿತ್ತು. ಅದು ಸೋಮಣ್ಣನ ಬದಲಿಗೆ ಹಿಂದೊಮ್ಮೆ ಬಿಜೆಪಿಗೆ ಅಧ್ಯಕ್ಷರಾಗಿದ್ದ ಬಸವರಾಜ ಪಾಟೀಲ್ ಸೇಡಂರನ್ನು ಎಮ್ಮೆಲ್ಸಿ ಮಾಡುವುದು!


ಸೇಡಂ ಕೂಡ ಸೋಮಣ್ಣನಂತೆ ಮತ್ತೊಬ್ಬ ಪುಢಾರಿಯೇ ಹೊರತು ಸಮಾಜ ಸೇವಕರಲ್ಲ. ಸಮಾಜ ಸೇವಕನ ಪಾಲಿನ ಎಮ್ಮೆಲ್ಸಿಗಿರಿಗೆ ಸೋಮಣ್ಣ ಅರ್ಹರಲ್ಲವೆಂದರೆ ಸೇಡಂ ತಾನೇ ಹೇಗೆ ಲಾಯಕ್ಕಾಗಲು ಸಾಧ್ಯ?


ಸೋಮಣ್ಣ ಎಮ್ಮೆಲ್ಸಿಯಾದರೆ ಯಡ್ಡಿಯ ಸೊಕ್ಕೂ ಹೆಚ್ಚುತ್ತದೆಯೆಂದೆ ಅಳುಕಿದ ಈಶ್ವರಪ್ಪ ಒಳಗೊಳಗೇ ಆರೆಸ್ಸೆಸ್ ಚೆಡ್ಡಿಗಳನ್ನು ಛೂಬಿಟ್ಟಿದ್ದರು. ಮತ್ತೆ ಎಮ್ಮೆಲ್ಸಿಯಾಗಬೇಕೆಂದರೆ ಸೋಮಣ್ಣ ಜೂನ್ ತನಕ ಕಾಯಬೇಕು. ಆಗಲೂ ಅದನ್ನು ಕೋರ್ ಕಮಿಟಿ ಸಮ್ಮತಿಸಬೇಕು. ಹಾಗೊಮ್ಮೆ ಯಡ್ಡಿಯೇ ನಿಂತು ಸೋಮಣ್ಣನನ್ನು ಎಮ್ಮೆಲ್ಸಿ ಮಾಡುತ್ತೇನೆಂದರೂ ಅದಕ್ಕೆ ಬಿಜೆಪಿಯ ಎಮ್ಮೆಲ್ಲೇಗಳು ಓಟು ಕೊಡಬೇಕು. ಎಮ್ಮೆಲ್ಸಿಯಾಗಿ ಮಂತ್ರಿಗಿರಿಗೆ ವಕ್ಕರಿಸುವ ಸೋಮಣ್ಣನನ್ನು ಈಗಾಗಲೇ ತಮಗೂ ಮಂತ್ರಿಗಿರಿ ಬೇಕೆಂದು ಹಠಕ್ಕೆ ಬಿದ್ದ ಯಾವ ಬಿಜೆಪಿ ಶಾಸಕ ತಾನೇ ಓಟು ಹಾಕುತ್ತಾನೆ?

ಇಂಥ ಅಪಾಯದ ವಾಸನೆ ಹಿಡಿದೇ ಸೋಮಣ್ಣ ತನ್ನನ್ನು ಬಿಡಿಎ ಛೇರ್ಮನ್ ಮಾಡುವಂತೆ ಯಡ್ಡಿಯ ಬಳಿ ಮಗದೊಂದು ಡಿಮ್ಯಾಂಡಿಟ್ಟಿದ್ದರು. ಬಿಡಿಎ ಛೇರ್ಮನ್‌ಗಿರಿಗೆ ಸೋಮಣ್ಣನೇ ಸೂಕ್ತ ಘಟವೆಂದು ನಿರ್ಧರಿಸಿದ್ದ ಯಡ್ಡಿ ಒಂದು ಹಂತದಲ್ಲಿ 'ಆತನೇ ಬಿಡಿಎ ಛೇರ್ಮನ್ನಾಗುತ್ತಾನೆ' ಎಂದು ಘೋಷಿಸಿದ್ದೂ ಆಗಿತ್ತು. ಅದನ್ನು ಸಾರಿಗೆ ಮಂತ್ರಿ ಅಶೋಕ್ ಸಹಿಸಬೇಕಲ್ಲ, ಒಳಗೊಳಗೇ ಸದಾನಂದಗೌಡರನ್ನು ಎತ್ತಿಕಟ್ಟಿದ್ದಾರೆ. 'ಬಿಜೆಪಿ ಅಧ್ಯಕ್ಷರಾದವರಿಗೆ ಕನಿಷ್ಠ ಬಿಡಿಎ ಅಧ್ಯಕ್ಷಗಿರಿಯಾದರೂ ಬೇಡವೇ?' ಎಂಬುದು ಅಶೋಕ್ ವಾದ.

ಬಹುಶಃ ಸೋಮಶೇಖರ ರೆಡ್ಡಿ ಕೆಎಂಎಫ್ ಅಧ್ಯಕ್ಷ ಗಾದಿಯನ್ನು ತೆರವುಗೊಳಿಸಿದ್ದರೆ ಈಗಾಗಲೇ ಸದಾನಂದ ಗೌಡರು ಕೆಎಂಎಫ್ ಅಧ್ಯಕ್ಷರಾಗಿರುತ್ತಿದ್ದರು. ಇಲ್ಲೂ ಸೋಮಣ್ಣನ ನಸೀಬು ಕೆಟ್ಟಿತ್ತೇನೋ. ಕೆಎಂಎಫ್ ಬದಲಿಗೆ ಬಿಡಿಎ ಕೊಡಿ ಎಂದು ಸದಾನಂದಗೌಡ ಹಠಕ್ಕೆ ಬಿದ್ದಿದ್ದಾರೆ. ಅಲ್ಲಿಗೆ ಸೋಮಣ್ಣನ ಬಿಡಿಎ ಕನಸಿಗೂ ಬೆಂಕಿ ಬಿದ್ದಂತಾಯ್ತು. ನಂಬಿದ ಕ್ಷೇತ್ರದ ಜನ ಕೈ ಹಿಡಿಯಲಿಲ್ಲ. ಬಯಸದೇ ಬಂದ ಮಂತ್ರಿಗಿರಿಯೂ ದಕ್ಕಲಿಲ್ಲ. ಹೋಗಲಿ ಎಮ್ಮೆಲ್ಸಿಯಾಗಾದರೂ ಮಂತ್ರಿಯಾಗುತ್ತೇನೆಂದರೆ ದೌರ್ಭಾಗ್ಯವೆಂಬುದು ರಾಜ್ಯಪಾಲರ ರೂಪದಲ್ಲಿತ್ತು. ಎರಡನೇ ಬಾರಿಗೂ ಸೋಮಣ್ಣ ಹೆಸರನ್ನೇ ರಾಜ್ಯಪಾಲರಿಗೆ ಕಳಿಸಲು ಯಡ್ಡಿ ಮುಂದಾದರೆ ಅದಕ್ಕೆ ಈಶ್ವರಪ್ಪ ಅಡ್ಡಗಾಲಿಟ್ಟರು. ಇದ್ಯಾವುದೂ ಬೇಡ ಬಿಡಿಎ ಛೇರ್ಮನ್‌ಗಿರಿಯಾದರೂ ಕೊಡಿ ಎಂದರೆ ಅದಕ್ಕೆ ಅಶೋಕ್-ಸದಾನಂದಗೌಡರ ಒಕ್ಕಲಿಗ ಲಾಬಿ ಕಲ್ಲು ಹಾಕಿತ್ತು.







ಸೋಮಣ್ಣನ ದುರಂತಕ್ಕೆ ಕೆಲ ನಿದರ್ಶನಗಳಷ್ಟೆ. ಯಾರ ಶಾಪವೋ ಯಾವ ಪಾಪವೋ ಗೊತ್ತಿಲ್ಲ. ಸೋಮಣ್ಣ ಎಲ್ಲಿಗೆ ಕೈಯಿಟ್ಟರೂ ಅಲ್ಲೊಂದು ಯಡವಟ್ಟು ಸೃಷ್ಟಿಯಾಗುತ್ತದೆ. ಇದೆಲ್ಲ ಲೆಕ್ಕ ಹಾಕಿಯೇ ಸೋಮಣ್ಣ ಆರೆಸ್ಸೆಸ್ ವರಿಷ್ಠ ಮೈ.ಚ. ಜಯದೇವರನ್ನು ಬುಟ್ಟಿಗೆ ಹಾಕಿಕೊಳ್ಳಲು ಹೊಸ ವರಸೆಯೊಂದಕ್ಕೆ ಕೈಯಿಟ್ಟರು. ಇಲ್ಲಿಗೆ ವಾರದ ಹಿಂದಷ್ಟೇ ಕೇಶವ ಶಿಲ್ಪಕ್ಕೆ ಬಂದರು. "ನಾನೂ ಲಿಂಗಾಯತ. ನೀವೂ ಲಿಂಗಾಯತರೆ. ಯಡ್ಡಿ ನಂತರ ಬಿಜೆಪಿಗೆ ಲಿಂಗಾಯತರ ಉತ್ತರಾಧಿಕಾರಿ ಅಂತ ಇರೋದು ನಾನೇ ಎಂದು ಸಿದ್ಧಗಂಗೆ ಸ್ವಾಮಿಗಳು ಹೇಳವ್ರೆ. ಯಾಕೋ ಆರೆಸ್ಸೆಸ್‌ನವ್ರಿಗೆ ನನ್ನನ್ನು ಕಂಡರೆ ಸಿಟ್ಟಂತೆ. ನೀವು ನನಗೆ ತಂದೆಯಿದ್ದಂತೆ. ನನಗೆ ನೀವೇ ದಾರಿ ತೋರಿಸ್ಬೇಕು..." ಎಂದು ಓತಪ್ರೋತ ಭಜನೆ ಶುರು ಹಚ್ಚಿಕೊಂಡ ಸೋಮಣ್ಣನಿಗೆ ಮೈ.ಚ. ಜಯದೇವರ ಆರೆಸ್ಸೆಸ್ ಉತ್ತರ ಮೊದಲೇ ತಯಾರಾಗಿತ್ತು.

"ಸೋಮಣ್ಣಾ... ಯಾಕೆ ಇಷ್ಟೊಂದು ಅರ್ಜೆಂಟ್ ಮಾಡ್ತಿದ್ದೀರಿ? ನಾಲ್ಕು ದಿನ ಕಾಯೋಕ್ಕಾಗಲ್ವಾ? ಯಾವ ಗೌರವಪೂರ್ವಕವಾಗಿ ನೀವು ಬಿಜೆಪಿಗೆ ಬಂದಿದ್ದೀರೋ ಅಷ್ಟೇ ಗೌರವದಿಂದ ನಿಮ್ಮನ್ನು ಬಿಜೆಪಿಯೂ ಬೆಳೆಸಬೇಕು ಅಂದ್ರೆ ನಾಲ್ಕು ದಿನ ಕಾಯಬೇಕಲ್ವೇ?

ಮೈ.ಚ. ಜಯದೇವರ ಇಂಥ ಮಾತು ಕೇಳುತ್ತಿದ್ದಂತೆ ಸೋಮಣ್ಣನಿಗೆ ಜ್ಞಾನೋದಯವಾಗಿತ್ತು. ಅದರರ್ಥ ಬಿಡಿಎ ಛೇರ್ಮನ್‌ಗಿರಿಯೂ ಇಲ್ಲ, ಸದ್ಯಕ್ಕೆ ಎಮ್ಮೆಲ್ಸಿಗಿರಿಯೂ ಇಲ್ಲ ಎಂಬುದು ಆರೆಸ್ಸೆಸ್ ನಿರ್ಧಾರವಾಗಿತ್ತು. ಇನ್ನೇನಿದ್ದರೂ ಜೂನ್ ತನಕ ಕಾಯುವುದೊಂದೇ ಸೋಮಣ್ಣನಿಗುಳಿದ ಏಕೈಕ ಮಾರ್ಗ. ಆಗ ಎಮ್ಮೆಲ್ಸಿಯಾದರೆ ಉಂಟು. ಇಲ್ಲದೇ ಹೋದರೆ ಮಂತ್ರಿಯಾಗುವ ಕನಸು ಮಣ್ಣುಪಾಲಾದಂತೆಯೇ. ಕಾಯೋಣ ಅಂದರೆ ಆ ಹೊತ್ತಿಗೆ ಇನ್ನೇನು ಯಡವಟ್ಟಾಗುತ್ತೋ?

ಒಂದೆಡೆ ಬಿಜೆಪಿಯ ಒಕ್ಕಲಿಗ ಲಾಬಿಯ ಆರ್. ಅಶೋಕ್ ಹಾವಳಿ. ಮತ್ತೊಂದೆಡೆ ಕಟ್ಟಾ ಕಾಟ. ಮಗದೊಂದೆಡೆ ರಾಮಚಂದ್ರಗೌಡರ ಕಿರಿಕ್ಕು. ಇದೆಲ್ಲವನ್ನೂ ಜಯಿಸಿ ಇನ್ನೇನು ಬಚಾವಾದೆನೆನ್ನುತ್ತಿದ್ದಂತೆ ಪಕ್ಷಾಧ್ಯಕ್ಷ ಈಶ್ವರಪ್ಪನವರ ಅಡ್ಡಗಾಲು. ಹಾಳಾಗಲಿ ವಿಜಯನಗರವನ್ನಾದರೂ ಭದ್ರವಾಗಿಟ್ಟುಕೊಳ್ಳೋಣವೆಂದರೆ ಅಲ್ಲಿ ಬೆಂಬಲಿಗರೇ ತಿರುಗಿಬಿದ್ದಿದ್ದಾರೆ. ಆವತ್ತಿನಿಂದ ಬಲಗೈ ಬಂಟನಂತಿದ್ದ ಲಕ್ಷ್ಮೀನಾರಾಯಣ ಸದ್ಯ ಜೆಡಿಎಸ್‌ನತ್ತ ಮುಖ ಮಾಡಿರುವುದು, ಲಕ್ಷ್ಮಿನಾರಾಯಣರ ಜೊತೆ ಬಾಪೂಜಿ ನಗರದ ಮಾಜಿ ಕೌನ್ಸಿಲರ್ ವೆಂಕಟಸ್ವಾಮಿ ಕೂಡ ಬಂಡೆದ್ದಿರುವುದು ಸೋಮಣ್ಣನ ಕೇಡುಗಾಲವಲ್ಲದೇ ಮತ್ತೇನು?

ಪಾಪಿ ಬಿಜೆಪಿಗೆ ಬಂದರೂ ಪೀಡೆ ತಪ್ಪಲಿಲ್ಲ!


-ರಾ. ಸೋಮನಾಥ್

ಚಿತ್ರದುರ್ಗ: ಹಳ್ಳಿಹಳ್ಳಿಗಳಲ್ಲಿ ಖೈರ್ಲಾಂಜಿ!

ಭಾಗ್ಯಮ್ಮ ಎಂಬ ಇಪ್ಪತ್ತೈದು ವರ್ಷದ ವಿವಾಹಿತ ಮಹಿಳೆಯನ್ನು ಬೆತ್ತಲೆಗೊಳಿಸಿ ಊರಮಧ್ಯೆ 'ಮೆರವಣಿಗೆ' ಮಾಡಲಾಗಿದೆ. ಈ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗದಂತೆ ತಡೆಯಲಾಗಿದೆ. ಇದಕ್ಕೆ ಚಿತ್ರದುರ್ಗದ ಜಿಲ್ಲಾಡಳಿತ ಬೆಂಗಾವಲಾಗಿ ನಿಂತಿದೆ.

ಭಾಗ್ಯಮ್ಮ ಮಾದಿಗ ಸಮುದಾಯಕ್ಕೆ ಸೇರಿದವಳು. ದೌರ್ಜನ್ಯ ನಡೆಸಿದವರು ಭೂಮಾಲೀಕ 'ನಾಯಕ' ಜನಾಂಗದವರು.

ಕಳೆದ ಜನವರಿ 17ರಂದು ಚಿತ್ರದುರ್ಗ ತಾಲ್ಲೂಕಿನ ಲಕ್ಷ್ಮೀಸಾಗರ ಎಂಬ ಹಳ್ಳಿಯಲ್ಲಿ 50-60 ಜನ ನಾಯಕ ಸಮುದಾಯದ ಗೂಂಡಾ



ಭೂಮಾಲೀಕರು ಸೇರಿ ಭಾಗ್ಯಮ್ಮ ಎಂಬ ಮಹಿಳೆಯನ್ನು ಥಳಿಸಿ, ಬೆತ್ತಲೆಗೊಳಿಸಿ ಸಾರ್ವಜನಿಕ ಮೆರವಣಿಗೆ ಮಾಡಿದ್ದಾರೆ. ಘಟನೆ ನಡೆದಿದ್ದನ್ನು ಚಿತ್ರದುರ್ಗದ ಎಸ್ಪಿ, ಡಿಸಿಗಳೂ ಆರಂಭದಲ್ಲಿ ಒಪ್ಪಿರಲಿಲ್ಲ. ದಲಿತ ಸಮುದಾಯಕ್ಕೆ ಸೇರಿದ ಮಾಜಿ ಶಾಸಕ ಕಾಂಗ್ರೆಸ್ಸಿನ ಆಂಜನೇಯಪ್ಪನೇ ಈ ಪ್ರಕರಣಗಳನ್ನು ಮುಚ್ಚಿಹಾಕಲು ನೋಡುತ್ತಿದ್ದಾನೆ....

ಚಿತ್ರದುರ್ಗವೆಂಬ ಖೈರ್ಲಾಂಜಿ

ಈ ಘಟನೆಯ ಹಿನ್ನೆಲೆ ಒಂದು ಪ್ರೇಮಪ್ರಕರಣವಾಗಿದೆ. ಮಾದಿಗರ ಮಹೇಶ್ (ಹೆಸರು ಬದಲಿಸಿದೆ) ಮತ್ತು ನಾಯಕ ಜನಾಂಗದ ಲಕ್ಷ್ಮೀ (ಹೆಸರು ಬದಲಿಸಿದೆ) ಎಂಬುವವರ ಮಧ್ಯೆ ಪ್ರೇಮಾಂಕುರವಾಗುತ್ತದೆ. ಚಿತ್ರದುರ್ಗದ ಬಹುತೇಕ ಹಳ್ಳಿಗಳಲ್ಲಿ ಪ್ರಬಲರಾಗಿರುವ ಭೂಮಾಲೀಕ ನಾಯಕ ಜನಾಂಗದವರು ತಮ್ಮ ಹೊಲಗಳಲ್ಲಿ ದುಡಿಯುವ ದಲಿತರನ್ನು ನಿಕೃಷ್ಟವಾಗಿ ಕಾಣುತ್ತಲೇ ಬಂದಿದ್ದಾರೆ. ಲಕ್ಷ್ಮೀಸಾಗರದ ಮಹೇಶ್, ಲಕ್ಷ್ಮಿಯರ ಪ್ರೇಮಪ್ರಕರಣವನ್ನು ಅಲ್ಲಿನ ಫ್ಯಾಸಿಸ್ಟ್ 'ನಾಯಕ'ರಿಗೆ ಸಹಿಸಲಾಗಿಲ್ಲ. ಇದನ್ನರಿತ ಮಹೇಶ್, ಲಕ್ಷ್ಮಿ ಅಲ್ಲಿಂದ ಓಡಿಹೋಗಿ, ದಾವಣಗೆರೆಯಲ್ಲಿ ಮಹೇಶನ ಅಣ್ಣನಿರುವ ಗಾಂಧಿ ಕಾಲೋನಿಯಲ್ಲಿ ಆಶ್ರಯ ಪಡೆಯುತ್ತಾರೆ.

ಅವರು ಅಲ್ಲಿಯೇ ಮದುವೆ ಆಗುತ್ತಾರೆ. ಜಾತಿ ಪ್ರತಿಷ್ಠೆಯ ನಾಯಕ ಜನಾಂಗದ ಲಕ್ಷ್ಮೀಸಾಗರದ ಸುಮಾರು ಮುನ್ನೂರು ಹುಂಬರು ದಾವಣಗೆರೆಯ ಗಾಂಧಿ ಕಾಲೋನಿಗೆ ದಾಳಿಯಿಟ್ಟು ದಲಿತ ಮಹೇಶ್‌ನ ಕೊಲೆ ಮಾಡಲು ಯತ್ನಿಸುತ್ತಾರೆ. ಆದರೆ ಗಾಂಧಿ ಕಾಲೋನಿಯ ದಲಿತರೆಲ್ಲ ಒಟ್ಟಾಗಿ ನಿಂತು ನಾಯಕರ ದುಷ್ಟಪಡೆಯನ್ನು ಓಡಿಸುತ್ತಾರೆ.

ಇದನ್ನು ಭಾರೀ ಅವಮಾನವೆಂದು ಭ್ರಮಿಸಿದ ಲಕ್ಷ್ಮೀಸಾಗರದ ನಾಯಕ ಜನಾಂಗ, ಈ ಪ್ರೇಮಿಗಳಿಗೆ ಓಡಿಹೋಗಲು ದಲಿತೆ ಭಾಗ್ಯಮ್ಮ ನೆರವು ನೀಡಿದ್ದಾಳೆ ಎಂದು ಊಹೆ ಮಾಡುತ್ತದೆ. ಜನವರಿ 17ರ ಮುಂಜಾನೆ 8 ಗಂಟೆಗೆ ಭಾಗ್ಯಮ್ಮಳ ಮನೆಗೆ ದಾಳಿ ಇಡುವ ನಾಯಕ ಜನಾಂಗದ ಗೂಂಡಾ ಭೂಮಾಲೀಕರು ಭಾಗ್ಯಮ್ಮ ಮತ್ತು ಆಕೆಯ ಗಂಡನನ್ನು ಥಳಿಸುತ್ತಾರೆ. ಹರೆಯದ ಭಾಗ್ಯಮ್ಮಳನ್ನು ಬೆತ್ತಲೆಗೊಳಿಸಿ ಊರ ತುಂಬಾ ಎಳೆದೊಯ್ಯುತ್ತಾರೆ. ಊರಮಧ್ಯದ ಮರಕ್ಕೆ ಕಟ್ಟಿ ಅವಳನ್ನು ಇನ್ನೂ ಅವಮಾನಿಸಬೇಕೆನ್ನುವಾಗ ಮಹಿಳೆಯೋರ್ವರು ಭಾಗ್ಯಮ್ಮನಿಗೆ ಸೀರೆ ಕೊಟ್ಟು ಮಾನವೀಯತೆ ಮೆರೆಯುತ್ತಾರೆ.

ಭಯಭೀತಳಾದ ಭಾಗ್ಯಮ್ಮ ಊರನ್ನೇ ತೊರೆದು ಭರಮಸಾಗರದ ಆಸ್ಪತ್ರೆ ಸೇರುತ್ತಾರೆ. ಲಕ್ಷ್ಮಿಸಾಗರ ಒಳಪಡುವ ಭರಮಸಾಗರ ಪೊಲೀಸ್ ಠಾಣೆಗೆ ದೂರನ್ನು ನೀಡಿ, ಒಂಭತ್ತು ಆರೋಪಿಗಳ ಹೆಸರನ್ನು ದಾಖಲಿಸುತ್ತಾರೆ. ಆದರೆ ಚಿತ್ರದುರ್ಗದ ಡಿಸಿ, ಎಸ್ಪಿ ಮತ್ತು ಭರಮಸಾಗರದ ಎಸ್‌ಐಗಳೆಲ್ಲ ಬಲಿಷ್ಠ ಜಾತಿಗಳ ಪರವೇ ಇರುವುದರಿಂದ ಯಾರನ್ನೂ ಅರೆಸ್ಟ್ ಮಾಡುವುದಿಲ್ಲ. ಬದಲಾಗಿ 'ಓಡಿಹೋದ, ಪ್ರೇಮಿಗಳನ್ನು ಭರಮಸಾಗರ ಸ್ಟೇಷನ್ನಿಗೆ ಎಳೆತಂದು ವಿಚಾರಣೆ ಮಾಡಿದ್ದಾರೆ. "ಐಯ್ ಸುಮ್ನಿರಿ ಮಾರಾಯ್ರ.... ನಂಗ

ಉಡುಪಿ: ಸೆಕ್ಸ್ ಸಿಡಿಯ ಹಿಂದೆ ಬಿದ್ದ ಪೊಲೀಸ್‌ಗೆ ಕೈಕೋಳ ಬಿತ್ತು

ಉಡುಪಿಯ ಇಬ್ಬರು ಪೊಲೀಸ್ ಸಿಬ್ಬಂದಿಗಳು ವ್ಯಕ್ತಿಯೊಬ್ಬರಿಂದ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಬಲೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಇವರಿಬ್ಬರೂ ಕೇವಲ ಪೊಲೀಸ್ ಕಾನ್‌ಸ್ಟೇಬಲ್‌ಗಳಲ್ಲ, ಡಿವೈಎಸ್‌ಪಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್‌ಗಳಿಗೆ ಲಕ್ಷಾಂತರ ರೂಪಾಯಿ ತಿಂಗಳ ಮಾಮೂಲಿ ಸಂಗ್ರಹಿಸಿ ಕೊಡುವ ತಾಕತ್ತನ್ನು ಗಳಿಸಿಕೊಂಡಿರುವವರು. ಇವರ ಲೆವೆಲ್ ಸಹ ಡಿವೈಎಸ್‌ಪಿ ಮಟ್ಟದ್ದು. ಡಿವೈಎಸ್‌ಪಿಯಂತಹ ಡಿವೈಎಸ್‌ಪಿಯೇ ನಂಬುವುದು ಈ ಪಿಸಿಗಳನ್ನೇ ಎನ್ನುವುದು ಇವರ ಪವರ್ ಎಂತಹದ್ದಿರಬಹುದು ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಉಡುಪಿ ಸಬ್ ಡಿವಿಷನ್ನಿನ ಡಿವೈಎಸ್‌ಪಿ ಜಯಂತ್ ವಿ. ಶೆಟ್ಟಿಯವರ ವಿಶೇಷ ದಳ (ಸ್ಪೆಷಲ್ ಸ್ಕ್ವಾಡ್)ದ ಪಿ.ಸಿ. ರಾಘವೇಂದ್ರ ಉಪ್ಪೂರು ಹಾಗೂ ಉಡುಪಿ ನಗರ ಸರ್ಕಲ್ ಇನ್ಸ್‌ಪೆಕ್ಟರ್ ಗಿರೀಶ್‌ರವರ ವಿಶೇಷ ದಳ (ಸ್ಪೆಷಲ್ ಸ್ಕ್ವಾಡ್)ದ ಪಿ.ಸಿ. ಮೋಹನ ಕೊತ್ವಾಲ್ ಎಂಬವರೇ ಲೋಕಾಯುಕ್ತ ದಾಳಿಗೆ ಸಿಕ್ಕಿಬಿದ್ದವರು.

ಫೆಬ್ರವರಿ 6 ರಂದು ಶನಿವಾರ ಮಧ್ಯಾಹ್ನ ಉಡುಪಿ ನಗರ ಪೊಲೀಸ್ ಠಾಣೆಯ ಪಕ್ಕದಲ್ಲೇ ಇರುವ ಎಲ್.ಎಂ.ಎಚ್. ಕ್ಯಾಂಟೀನ್‌ಗೆ ಬರುವಂತೆ ಕೊತ್ವಾಲ್ ಹಾಗೂ ಉಪ್ಪೂರು ಅಕ್ರಂ ಎಂಬಾತನನ್ನು ಕರೆದಿದ್ದರು. ಅಕ್ರಂನಿಂದ 50 ಸಾವಿರ ರೂಪಾಯಿ ಪಡೆದುಕೊಳ್ಳುವುದು ಸ್ಪೆಷಲ್ ಸ್ಕ್ವಾಡ್‌ನ ಸ್ಪೆಷಲ್ ಪ್ಲಾನ್ ಆಗಿತ್ತು.

ವಾರದ ಹಿಂದೆ ಒಂದು ದಿನವಿಡೀ ಇವರದೇ ...ನಿಂದ ಪೆಟ್ಟು ತಿಂದಿದ್ದ ಅಕ್ರಂ ಮತ್ತೆ ಮೋಸ ಹೋಗಲು ಸಿದ್ಧನಿರಲಿಲ್ಲ. ಅಕ್ರಂ, ಇಮ್ರಾನ್ ಹಾಗೂ ಸೈಫುದ್ದೀನ್ ಒಟ್ಟಾಗಿ ಮಾಡಿದ ಪ್ಲಾನ್‌ನ ಫಲಶ್ರುತಿಯೇ ಲೋಕಾಯುಕ್ತ ದಾಳಿ. ಆಪರೇಷನ್ ಸ್ಪೆಷಲ್ ಸ್ಕ್ವಾಡ್ ಪ್ಲಾನ್ ಸಕ್ಸಸ್ ಆಯ್ತು. ಉಡುಪಿಯಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳು ತೆರೆಮರೆಯಲ್ಲಿ ನಡೆಸುತ್ತಿದ್ದ ಡೀಲಿಂಗ್‌ಗಳ ಮುಖವೊಂದು ಬಯಲಿಗೂ ಬಂತು.

ಮೋಹನ್ ಕೊತ್ವಾಲ್ ಹಾಗೂ ರಾಘವೇಂದ್ರ ಉಪ್ಪೂರು ಅಕ್ರಂ, ಇಮ್ರಾನ್ ಹಾಗೂ ಸೈಫುದ್ದೀನ್‌ರವರಲ್ಲಿ ...0,000 ರೂ. ಡಿಮ್ಯಾಂಡ್ ಮಾಡಿದ್ದರು. 50 ಸಾವಿರ ಕೊಟ್ಟರೆ, ಇಮ್ರಾನ್‌ನಿಂದ ವಶಪಡಿಸಿಕೊಂಡ ಪೆಂಡೆಂಟ್‌ನ್ನು ಮರಳಿಸುವುದಾಗಿಯೂ, ಸೆಕ್ಸ್ ಸಿಡಿ ಪ್ರಕರಣದ ಚಾಪ್ಟರ್‌ನ್ನು ಸಂಪೂರ್ಣವಾಗಿ ಕ್ಲೋಸ್ ಮಾಡುವುದಾಗಿಯೂ ಮಾತುಕತೆಯೂ ನಡೆದಿತ್ತು.

ಈ ಬಗ್ಗೆ ಅಕ್ರಂ ಲೋಕಾಯುಕ್ತ ಇಲಾಖಾ ಅಧಿಕಾರಿಗಳಿಗೆ ದೂರು ನೀಡಿದ್ದರು. ಲೋಕಾಯುಕ್ತ ಅಧಿಕಾರಿಗಳು ಅಕ್ರಂ ಕೈಯಲ್ಲಿ 3 ಸಾವಿರ ರೂಪಾಯಿ ನೀಡಿ ಮಾತು ಕೊಟ್ಟಂತೆ ಕ್ಯಾಂಟೀನ್‌ಗೆ ಹೋಗುವಂತೆ ಸೂಚಿಸಿದ್ದಾರೆ.

ಕ್ಯಾಂಟೀನ್‌ನಲ್ಲಿ ಮೂವರೂ ಜೊತೆಯಾಗಿದ್ದಾರೆ. ಚಾ.... ಆರ್ಡರ್ ಕೊಟ್ಟಿದ್ದಾರೆ. ಅಕ್ರಂ ನೀಡಿದ ನಗದು ಹಣವನ್ನು ಕೊತ್ವಾಲ್ ಹಾಗೂ ಉಪ್ಪೂರು ಪಡೆದು ಜೇಬಿಗಿಳಿಸುತ್ತಿದ್ದಂತೆಯೇ ಲೋಕಾಯುಕ್ತದ ಪೊಲೀಸರು ಪಿಸಿಗಳ ರಟ್ಟೆ ಹಿಡಿದಿದ್ದಾರೆ.

ಬಂಧನದ ಬೆನ್ನಿಗೆ ಎದೆನೋವು....

ಎಲ್ಲಾ ಶ್ರೀಮಂತ ಮತ್ತು ರಾಜಕೀಯ ಪ್ರಭಾವವುಳ್ಳ ಆರೋಪಿಗಳಂತೆಯೇ ಕೊತ್ವಾಲ್ ಹಾಗೂ ಉಪ್ಪೂರು ಅವರಿಗೂ ಎದೆನೋವು ಕಾಣಿಸಿಕೊಂಡಿದೆ. 6 ರಂದು ರಾತ್ರಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಸಣ್ಣಗೆ ಎದೆನೋವು ಕಾಣಿಸಲಾರಂಭಿಸಿದೆಯಂತೆ. ಬಳಿಕ ಇಬ್ಬರನ್ನೂ ಸೆರೆಮನೆಗೆ ಸೇರಿಸುವ ಬದಲು ಜಿಲ್ಲಾಸ್ಪತ್ರೆಯ ಕೈದಿ ಸೆಲ್‌ಗೆ ಸೇರಿಸಲಾಗಿದೆ. ಮರುದಿನ ಮಧ್ಯಾಹ್ನ ಕೈದಿ ಸೆಲ್‌ನಿಂದ ವಿಶೇಷ ಕೈದಿ ಸೆಲ್‌ಗೆ ಸೇರಿಸಲಾಗಿದೆ. ಮರುದಿನ ಮಧ್ಯಾಹ್ನ ಕೈದಿ ಸೆಲ್‌ನಿಂದ ವಿಶೇಷ ವಾರ್ಡ್‌ಗೆ ಸ್ಥಳಾಂತರಗೊಂಡಿದ್ದು, ಆರೋಪಿಗಳಿಬ್ಬರೂ ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಈ ನಡುವೆ, ಲೋಕಾಯುಕ್ತ ಅಧಿಕಾರಿಗಳು ಜಿಲ್ಲಾ ಪೊಲೀಸ್ ಅಧೀಕ್ಷರಿಗೆ ಪತ್ರವೊಂದನ್ನು ಬರೆದು, ಆರೋಪಿ ಪೊಲೀಸರನ್ನು ಕೂಡಲೇ ಸಸ್ಪೆಂಡ್ ಮಾಡುವಂತೆಯೂ ಆಸ್ಪತ್ರೆಯಿಂದ ಸಬ್‌ಜೈಲಿಗೆ ಸ್ಥಳಾಂತರಿಸುವಂತೆಯೂ ಸೂಚನೆ ನೀಡಿದ್ದಾರೆ.

ಕ್ರಿಮಿನಲ್ ಮೈತ್ರಿ

ಉಡುಪಿಯ ಬಹುತೇಕ ಪೊಲೀಸ್ ಅಧಿಕಾರಿಗಳಿಗೆ ಕ್ರಿಮಿನಲ್‌ಗಳ ಜೊತೆಗೆ ಅವಿನಾಭಾವ ಸಂಬಂಧ. ಲೋಕಾಯುಕ್ತ ದಾಳಿಗೆ ಒಳಗಾಗಿ ಸಿಕ್ಕಿಬಿದ್ದ ಪೊಲೀಸರೂ ಇದರಲ್ಲೇನೂ ಕಡಿಮೆ ಇಲ್ಲ.



ಕೊತ್ವಾಲ್ ಹಾಗೂ ಉಪ್ಪೂರು ಲೋಕಾಯುಕ್ತರಿಂದ ಬಂಧನಕ್ಕೊಳಗಾದ ಬೆನ್ನಿಗೆ, ಪಿಟ್ಟಿ ನಾಗೇಶ್ ಎಂಬ ಕ್ರಿಮಿನಲ್, ದೂರುದಾರರಿಗೆ ಕಾಲ್ ಮಾಡಿ ರಾಜಿಯಾಗುವಂತೆಯೂ ಇಲ್ಲದಿದ್ದರೆ ಪರಿಸ್ಥಿತಿ ನೆಟ್ಟಗಿರಲಾರದೆಂದೂ ಬೆದರಿಕೆ ಒಡ್ಡಿ ಭ್ರಷ್ಟ ಪೊಲೀಸ್ ಸಿಬ್ಬಂದಿಗಳ ಋಣ ತೀರಿಸಿದ್ದಾನೆ. ಪಿಟ್ಟಿ ನಾಗೇಶನೆಂಬ ರೌಡಿಗಿಂತ ತಾನೇನೂ ಕಡಿಮೆಯವನಲ್ಲ ಎಂಬಂತೆ ಡಿವೈಎಸ್‌ಪಿ ಜಯಂತ್ ಶೆಟ್ಟಿ ಸ್ಕ್ವಾಡ್‌ನ ಇನ್ನೋರ್ವ ಸಿಬ್ಬಂದಿ ಸುಧೀರ್ ಪೂಜಾರಿ ಎಂಬುವವರು ನೇರವಾಗಿ ಲೋಕಾಯುಕ್ತ ಅಧಿಕಾರಿಗಳಿಗೆ ಕಾಲ್ ಮಾಡಿ ಬೆದರಿಕೆ ಹಾಕುವ ಭಂಡತನ ಪ್ರದರ್ಶಿಸಿದ್ದಾನೆ.

ಸೆಕ್ಸ್ ಸಿಡಿ ಹಗರಣ

ಇಡೀ ಪ್ರಕರಣಕ್ಕೆ ಮೂಲವಾದುದು ಒಂದು ಸೆಕ್ಸ್ ದೃಶ್ಯಗಳಿರುವ ಮೊಬೈಲ್ ಚಿಪ್. ಇದು ಸಿರಾಜ್ ಎಂಬುವನದ್ದು. ಉಡುಪಿ ಸಿಟಿ ಬಸ್ ನಿಲ್ದಾಣದ ಪಕ್ಕ ಮಣಿಪಾಲ ರಸ್ತೆಯಲ್ಲಿ ಬೃಂದಾವನ ಲಾಡ್ಜ್ ಇದೆ. ಇದರ ಮಾಲೀಕ ಕಾಸರಗೋಡು ಮೂಲದ ಕುಞಂಬು. ಇವರು ಭಟ್ಕಳದ ಪಿಡಬ್ಲ್ಯುಡಿ ಕಂಟ್ರಾಕ್ಟರ್. ಇವರ ಮಗನೇ ಸಿರಾಜ್.



ಬಂಧನಕ್ಕೊಳಗಾದ ಪೇದೆಗಳು

ಸುಮಾರು 23 ವರ್ಷ ಪ್ರಾಯದ ಸಿರಾಜ್ ಲಾಡ್ಜ್‌ನ್ನು ನಿರ್ವಹಿಸುತ್ತಿರುತ್ತಾನೆ. ಈತನಿಗೋ ಹೆಣ್ಣು ಹುಚ್ಚು ಬೃಂದಾವನ ಲಾಡ್ಜ್‌ಗೆ ಬರುವ ದಂಪತಿಗಳ, ಹುಡುಗಿಯರ ಫೋಟೋಗಳನ್ನು ತನ್ನ ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿಯುವ ಖಯಾಲಿ ಈತನದ್ದು. ಲಾಡ್ಜ್‌ನ ಬಾಗಿಲಿಗೆ ತೂತು ಕೊರೆದು, ದಂಪತಿಗಳು, ಹುಡುಗಿಯರೇನು ಮಾಡುತ್ತಿದ್ದಾರೆಂದು ನೋಡುವ ವಿಕೃತ ಕಾಮಿ. ತಂದೆ ಮಾಡಿಟ್ಟ ಹಣ. ಜವಾಬ್ದಾರಿ ಇಲ್ಲದ ಬದುಕು. ಲಾಡ್ಜ್‌ಗೆ ಪ್ರಾಯದ ಹುಡುಗಿಯರನ್ನು ಕರೆದುಕೊಂಡು ಬಂದು ಮಜಾ ಮಾಡುವ ಹವ್ಯಾಸ ಸಿರಾಜ್‌ಗೆ.

ಈ ಹವ್ಯಾಸ ಮುಳುವಾಯಿತು. ತಿಂಗಳ ಹಿಂದೆ ಲಾಡ್ಜ್‌ಗೆ ಹುಡುಗಿಯೊಬ್ಬಳನ್ನು ಕರೆದುಕೊಂಡು ಬಂದ ಸಿರಾಜ್ ತಾನು ಆಕೆಯೊಂದಿಗೆ ರತಿಕ್ರೀಡೆ ಆಡಿದ್ದನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾನೆ. 30 ಕ್ಕೂ ಅಧಿಕ ಆಕೆಯ ಬೆತ್ತಲೆ ದೇಹದ ಫೋಟೋಗಳನ್ನು ಕ್ಲಿಕ್ಕಿಸಿಕೊಂಡಿದ್ದಾನೆ.

ಇಷ್ಟೆಲ್ಲಾ ಮಾಡಿದ ಸಿರಾಜ್ ಸುಮ್ಮನಾಗಿದ್ದರೆ, ವಿಷಯ ದೊಡ್ಡದಾಗುತ್ತಿರಲಿಲ್ಲವೋ ಏನೋ? ಸಿರಾಜ್ ಹುಡುಗಿಯರನ್ನು ಬ್ಲಾಕ್‌ಮೇಲ್ ಮಾಡಲು ಆರಂಭಿಸಿದ್ದಾನೆ.

ಇದೇ ಸಂದರ್ಭದಲ್ಲಿ ಸಿರಾಜ್‌ನ ಬಾಟಲಿ ಮಿತ್ರರಾದ ಸೈಫುದ್ದೀನ್, ಅಕ್ರಂ ಹಾಗೂ ಇಮ್ರಾನ್‌ಗೂ ಈ ವಿಷಯ ಗೊತ್ತಾಗಿದೆ. ಸಿರಾಜ್‌ಗೆ ಕಂಠಪೂರ್ತಿ ಕುಡಿಸಿದ ಮಿತ್ರರು, ಸಿರಾಜ್‌ನ ಮೊಬೈಲ್‌ನಲ್ಲಿದ್ದ ಸೆಕ್ಸ್ ದೃಶ್ಯಗಳನ್ನು ಹೇಗೋ ಸಿಡಿ ಮಾಡಿಟ್ಟುಕೊಂಡಿದ್ದಾರೆ.

ಸಿರಾಜ್ ಹುಡುಗಿಯರನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಂತೆಯೇ, ಸೈಫುದ್ದೀನ್, ಅಕ್ರಂ ಹಾಗೂ ಇಮ್ರಾನ್ ಸಿರಾಜ್‌ನನ್ನು ಬ್ಲಾಕ್‌ಮೇಲ್ ಮಾಡಲು ಪ್ರಾರಂಭಿಸಿದ್ದಾರೆ.

ಅಂತಿಮವಾಗಿ ಇಡೀ ಪ್ರಕರಣ ಅನಧಿಕೃತವಾಗಿ ಡಿವೈಎಸ್‌ಪಿ ಜಯಂತ್ ಶೆಟ್ಟಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ಗಿರೀಶ್ ಬಳಿ ಹೋಗಿದೆ.

ಎರಡೂ ಕಡೆಯಿಂದ ಲಕ್ಷಾಂತರ ರೂಪಾಯಿ ವಸೂಲಿ ಮಾಡಿದ ಪೊಲೀಸ್ ಅಧಿಕಾರಿಗಳು ಕೊನೆಗೆ ರಾಜಿ ಮಾಡಿಸಿ ಪ್ರಕರಣಕ್ಕೆ ಮಂಗಳ ಹಾಡಿದ್ದಾರೆ.

ಆದರೆ, ನಿಜವಾಗಿಯೂ ಪೊಲೀಸರು ರಾಜಿಯಾಗಿರಲಿಲ್ಲ. ರಾಜಿ ಮಾಡಿಸಿದಂತೆ ಮಾಡಿದ ಸ್ಪೆಷಲ್ ಸ್ಕ್ವಾಡ್ ತೆರೆಮರೆಯಲ್ಲಿ ಬೆದರಿಸುತ್ತಾ ಮತ್ತೆ ಎರಡೂ ಕಡೆಯವರಿಂದ ಲಕ್ಷಾಂತರ ಸುಲಿಯಲು ಮತ್ತೊಂದು ಹಂತದ ಬ್ಲಾಕ್‌ಮೇಲ್ ಆರಂಭಿಸಿದ್ದರು.

ಈ ಬ್ಲಾಕ್‌ಮೇಲ್ ಪ್ರಕರಣವೇ ಕೊನೆಗೆ ಇವರಿಗೆ ಮುಳುವಾಗಿ ಹೋಗಿದೆ. ಉಡುಪಿಯ ಪೊಲೀಸ್ ಅಧಿಕಾರಿಗಳ ನಿಜಬಣ್ಣವನ್ನು ಈ ಪ್ರಕರಣ ಜಗಜ್ಜಾಹೀರು ಮಾಡಿದೆ.

-ಶ್ರೀರಾಮ ದಿವಾಣ

ಪೊಲೀಸ್ ಮಾಫಿಯಾ!

ಮೋಹನ ಕೊತ್ವಾಲ್ ಹಾಗೂ ರಾಘವೇಂದ್ರ ಉಪ್ಪೂರು ಇಬ್ಬರೂ ಪಿಸಿಗಳಾದರೂ ಲಕ್ಷಾಧಿಪತಿಗಳು, ಉದ್ಯಮಿಗಳು. ಕೊತ್ವಾಲ್ ಪೊಲೀಸ್ ಕ್ವಾರ್ಟ್ರಸ್‌ನಲ್ಲಿ ವಾಸ. ಇತ್ತೀಚೆಗೆ ಕುಂದಾಪುರ ನಗರದಲ್ಲಿ ೧೫ ಲಕ್ಷ ರೂ. ವೆಚ್ಚದ ಬಂಗಲೆ ನಿರ್ಮಿಸಿದ್ದಾನೆ. ಬಂಗಲೆಯನ್ನು ಬಾಡಿಗೆಗೆ ನೀಡಿದ್ದಾನೆ. ಇತರ ಹಲವು ವ್ಯವಹಾರಗಳು ಬಹುತೇಕ ಬೇನಾಮಿ ವ್ಯವಹಾರಗಳೇ.

ರಾಘವೇಂದ್ರ ಉಪ್ಪೂರು ಸಹ ಬಿಸಿನೆಸ್‌ಮೆನ್. ಎರಡು ಟವೇರಾ ಗಾಡಿ ಈತನಿಗಿದೆ. ಇವುಗಳನ್ನು ಉಡುಪಿ-ಬ್ರಹ್ಮಾವರ ಮಧ್ಯೆ ಪ್ರಮುಖ ಪೇಟೆಯಾಗಿರುವ ಸಂತೆಕಟ್ಟೆ ಕಲ್ಯಾಣಪುರದಲ್ಲಿ ಬಾಡಿಗೆಗೆ ನಿಲ್ಲಿಸ್ತಾನೆ. ಸಂತೆಕಟ್ಟೆ ಪರಿಸರದ ಕೇಬಲ್ ದೊರೆಯು ಈತನೆ. ಜಿಲ್ಲೆಯ ಭಾರೀ ಕೇಬಲ್ ದೊರೆಯಾಗಿ ಗುರುತಿಸಿಕೊಂಡಿರುವ ಕೇಬಲ್ ಗುರು ಯಾನೆ ಗುರುರಾಜ್‌ನ ಜೊತೆ ಉಪ್ಪೂರು ಪಾಲುದಾರಿಕೆ ಹೊಂದಿದ್ದಾನೆ. ಈ ಕೇಬಲ್ ಗುರುರಾಜ್ ಒಬ್ಬ ಕ್ರಿಮಿನಲ್. ಕೊಲೆ, ಜೀವ ಬೆದರಿಕೆ, ಕೊಲೆಗೆ ಸುಪಾರಿ ಕೊಟ್ಟ ಇತ್ಯಾದಿ ಪ್ರಕರಣಗಳೂ ಈತನ ಮೇಲೆ ದಾಖಲಾಗಿವೆ. ಜಿಲ್ಲೆಯ ಕ್ರಿಮಿನಲ್ ಜತೆ ಪೊಲೀಸ್ ಸ್ಪೆಷಲ್ ಸ್ಕ್ವಾಡ್‌ನ ಪಿಸಿಗೆ ಪಾಲುದಾರಿಕೆ. ಈ ಕೇಬಲ್ ಗುರು ಮೇಲೆಯೂ ಇತ್ತೀಚೆಗೆ ಡಿವೈಎಸ್‌ಪಿ ಸುಳ್ಳು ಕೇಸ್ ದಾಖಲಿಸಿದ್ದರು. ಎದುರು ಕಡೆಯವರು ಕೆಲವು ಲಕ್ಷ ಕೊಟ್ಟರು. ಡಿವೈಎಸ್‌ಪಿ ಬಂದು ಕೇಸಿನಲ್ಲಿ ಫಿಕ್ಸ್ ಮಾಡಿದ್ರು. ಇದು ಜಿಲ್ಲಾ ಪೊಲೀಸರ ಸದ್ಯದ ಗೆಟಪ್.

ಉಡುಪಿ ಸಬ್ ಡಿವಿಜನ್‌ನಲ್ಲಿ ಇಂತಹ ಭ್ರಷ್ಟ ಪೊಲೀಸರಿಗೆಲ್ಲಾ ಗಾಡ್‌ಫಾದರ್ ಆಗಿರುವವನೇ ಡಿವೈಎಸ್‌ಪಿ ಜಯಂತ್ ವಿ. ಶೆಟ್ಟಿ. ಕ್ರಿಮಿನಲ್‌ಗಳ ಜೊತೆ ಭೂಗತ ದೊರೆಗಳೊಂದಿಗೆ ಗಳಸ್ಯಕಂಠಸ್ಯ ಸಂಬಂಧ ಹೊಂದಿರುವ ಶೆಟ್ಟಿ ಕೋಟ್ಯಾಧಿಪತಿ. ಆದರೆ ಎಲ್ಲವೂ ಬೇನಾಮಿ ಹೆಸರಲ್ಲಿ ಕುತಂತ್ರ! ಮಾಡುವುದರಲ್ಲಿ, ಸಂಚು ರೂಪಿಸುವುದರಲ್ಲಿ ಎತ್ತಿದ ಕೈ. ಆರೋಪಿಗಳೇ ಇರಲಿ, ಅಮಾಯಕರೇ ಆಗಿರಲಿ ಥರ್ಡ್ ಡಿಗ್ರಿ ಟ್ರೀಟ್‌ಮೆಂಟ್ ಕೊಡಲು ಕಲಿಸಲು ಕೊಟ್ಟಿದ್ದೇ ಈ ಜಯಂತ್ ಶೆಟ್ಟಿ. ಮಂಗಳೂರಲ್ಲಿ ರೌಡಿ ನಿಗ್ರಹ ದಳದ ಇನ್ಸ್‌ಪೆಕ್ಟರ್ ಆಗಿದ್ದು ಖ್ಯಾತಿ ಮತ್ತು ಕುಖ್ಯಾತಿ ಎರಡನ್ನೂ ಪಡೆದ ಹೆಗ್ಗಳಿಕೆ ಜಯಂತ್ ಶೆಟ್ಟಿಯದ್ದು. ಪೊಲೀಸ್ ಇಲಾಖೆಯನ್ನು ಎಷ್ಟರ ಮಟ್ಟಿಗೆ ಕುಲಕೆಡಿಸಬಹುದೋ, ಅಷ್ಟರಮಟ್ಟಿಗೆ ಇವರೆಲ್ಲರೂ ಸೇರಿ ಕುಲಕೆಡಿಸಿದ್ದಾರೆ. ಉಡುಪಿ ಎಸ್‌ಪಿ ಪ್ರವೀಣ್ ಮಧುಕರ್ ಪವಾರ್‌ಗೆ ಸದ್ಯಕ್ಕೆ ಮಾರ್ಗದರ್ಶಕರೂ, ನಿರ್ದೇಶಕರೂ ಆಗಿರುವವರು ಇದೇ ದುಷ್ಟ ಜಯಂತ್ ಶೆಟ್ಟಿ!



ಜಯಂತ್ ವಿ. ಶೆಟ್ಟಿ.

...ಮಹೇಶಾ ಇಷ್ಟಾ ಆದ... ಅವನ್ನ ನಾನ್ ಮದುವಿ ...ಗೀನಿ... ಏನ್ ನಿಮದೆಲ್ಲಾ?" ಎಂದು ಪೊಲೀಸರನ್ನೇ ಜಾಡಿಸಿದ್ದಾಳೆ ನಾಯಕ ಜನಾಂಗದ ಹುಡುಗಿ ಲಕ್ಷ್ಮಿ. ಅಲ್ಲಿಗೆ ಪೊಲೀಸರು ಏನೂ ಮಾಡದಂತಾಗಿ ಆ ಯುವ ದಂಪತಿಗಳನ್ನು ...ಬಿಟ್ಟಿದ್ದಾರೆ. ಆದರೆ ಸ್ಟೇಷನ್ನಿನಿಂದ ಸ್ವಲ್ಪ ದೂರದಲ್ಲಿ ಕಾಯುತ್ತಿದ್ದ ನಾಯಕ ಜನಾಂಗದ ಗೂಂಡಾಪಡೆ ದಲಿತ ಮಹೇಶನನ್ನು ಹಿಗ್ಗಾಮುಗ್ಗಾ ...ಸಿದೆ. ಮಹೇಶ್ ಅದ್ವೇಗೋ ಪಾರಾಗಿ ...ಹೋಗಿದ್ದಾನೆ. ಲಕ್ಷ್ಮೀಯನ್ನು ತಮ್ಮೂರಿಗೆ ...ದೆ ಗೂಂಡಾಪಡೆ....

...ಒಂದು ಪ್ರೇಮ ಮದುವೆಯನ್ನು ...ಬಡಿಯಲು ಭಾಗ್ಯಮ್ಮ ಎಂಬ ದಲಿತ ಮಹಿಳೆಯನ್ನು ಬೆತ್ತಲೆಗೊಳಿಸಿದ್ದು ಜಿಲ್ಲಾಡಳಿತಕ್ಕೆ ...ತ್ತೇ ಇಲ್ಲಂತೆ. ಕೊನೆಗೆ ಡಿಎಸ್‌ಎ ...ಪರಿಷವರು ಭಾಗ್ಯಮ್ಮನ ಸಂದರ್ಶನ ಮಾಡಿದ ...ಲಷ್ಟೇ ಒಬ್ಬ ಆರೋಪಿಯನ್ನು ಕಾಟಾಚಾರಕ್ಕೆ ...ಧಿಸಲಾಗಿದೆ. ಆತನಿಗೂ ಒಂದೇ ದಿನದಲ್ಲಿ ...ಮೀನು ಸಿಕ್ಕಿದೆ. ಉಳಿದ ಆರೋಪಿಗಳೀಗ ...ರ್ಟ್ ಮುಂದೆ ಹಾಜರಾಗಿದ್ದು ಪಾರಾಗುವ ... ಲಕ್ಷಣಗಳಿವೆ. ಈಗ ಭಾಗ್ಯಮ್ಮನ ಮೇಲೆಯೇ 107 ಪ್ರಕರಣ ದಾಖಲಿಸಿ ಕೋರ್ಟಿಗೆ ಹಾಜರುಪಡಿಸಿದ್ದಾರೆ ಪೊಲೀಸರು! ಇದು ಖೈರ್ಲಾಂಜಿ ಅಲ್ಲದೇ ಇನ್ನೇನು?

ಇದು ಚಿತ್ರದುರ್ಗದ ಲಕ್ಷ್ಮೀಸಾಗರ ಎಂಬ ಒಂದೂರಿನ ದುರಂತವಲ್ಲ. ಈ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಇದೇ ಪರಿಸ್ಥಿತಿಯಿದೆ. ಚಳ್ಳಕೆರೆ ತಾಲ್ಲೂಕಿನ ಬೂದಿಹಳ್ಳಿ ಗ್ರಾಮದಲ್ಲಿ ಸುಮಾರು 150 ನಾಯಕ ಜನಾಂಗದವರ ಮನೆಗಳು, 30 ದಲಿತರ ಮನೆಗಳಿವೆ. ಭೂಮಿಯ ಒಡೆತನವೆಲ್ಲ ನಾಯಕರ ಕೈಯಲ್ಲಿದೆ. ದಲಿತರು ಅಲ್ಲಿ ಶೋಷಿತ ಕೃಷಿಕಾರ್ಮಿಕರು. ಈ ಊರಿನ ಬಹುತೇಕ ದಲಿತ ಮಹಿಳೆಯರು ಈ ನಾಯಕ ಜನಾಂಗದ ಪುರುಷಮಣಿಗಳಿಂದ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ಅಲ್ಲಿರುವ 160 ಎಕರೆ ಗೋಮಾಳದಲ್ಲಿ ಕೃಷಿ ಮಾಡಲು ಜಿಲ್ಲಾಡಳಿತವೇ ದಲಿತರಿಗೆ ಹಕ್ಕುಪತ್ರ ಕೊಟ್ಟರೂ ನಾಯಕ ಜನಾಂಗದ ಫ್ಯೂಡಲ್‌ಗಳು ಮಾತ್ರ ಆ ಭೂಮಿಯನ್ನು ಬಿಟ್ಟುಕೊಡುತ್ತಿಲ್ಲ. ಅಲ್ಲಿರುವ ಮರಗಳನ್ನು ಲಕ್ಷಾಂತರ ರೂಪಾಯಿಗೆ ಮಾರಿಕೊಳ್ಳುವ ಈ ಧೂರ್ತರು ದಲಿತರಿಗೆ ಅಲ್ಲಿ ವ್ಯವಸಾಯ ಮಾಡಲು ಬಿಡುತ್ತಿಲ್ಲ. ಕ್ರಮ ಕೈಗೊಳ್ಳಬೇಕಾದ ಜಿಲ್ಲಾಡಳಿತ, ರಾಜಕೀಯ ವ್ಯವಸ್ಥೆಗಳೆಲ್ಲ ಪ್ರಬಲ ನಾಯಕ ಜನಾಂಗದ ಓಟ್‌ಬ್ಯಾಂಕ್ ಹಿಂದೆ ಬಿದ್ದಿವೆಯಷ್ಟೇ. ಇದನ್ನು ಪ್ರಶ್ನಿಸಿ ನಾಲ್ವರು ದಲಿತ ಮಹಿಳೆಯರು ಪೊಲೀಸರಿಗೆ ಕಂಪ್ಲೇಂಟ್ ನೀಡಿದ್ದರು. ಆಗ ರೊಚ್ಚಿಗೆದ್ದ ಭೂಮಾಲೀಕ ನಾಯಕರು ದೊಂಬಿ ಎಬ್ಬಿಸಿಬಿಟ್ಟರು. ಈ ಗಲಾಟೆಯಲ್ಲಿ ದಲಿತ ಮಹಿಳೆಯೊಬ್ಬಳು ಅಸುನೀಗಿದ್ದು ಹೊರಜಗತ್ತಿಗೆ ಗೊತ್ತಾಗಲೇ ಇಲ್ಲ. ಈ ಕುರಿತು ಸತ್ಯಶೋಧನೆ ಮಾಡಲು ಬೆಂಗಳೂರಿನ ಮಹಿಳಾ ಸಂಘಗಳ ಒಕ್ಕೂಟವಾಗಿರುವ ಮಹಿಳಾ ಹೋರಾಟ ಒಕ್ಕೂಟದ ಸದಸ್ಯರು ಬೂದಿಹಳ್ಳಿಗೆ ಭೇಟಿ ನೀಡಿ ಕಿರುಕುಳಕ್ಕೊಳಗಾಗಿರುವ ದಲಿತ ಮಹಿಳೆಯರಿಗೆ ಸಾಂತ್ವನ ಹೇಳಿ ಅವರಿಗೆ ಬೆಂಬಲ ನೀಡಿದರು. ಒಕ್ಕೂಟದ ಸದಸ್ಯರು ಬೂದಿಹಳ್ಳಿಯಿಂದ ದಾಟುತ್ತಿದ್ದಂತೆ, ದಲಿತರೊಬ್ಬರ ಗುಡಿಸಲಿಗೆ ಬೆಂಕಿ ಹಾಕಿದರು ನಾಯಕ ಜನಾಂಗದ ಫ್ಯೂಡಲ್ ರಾಕ್ಷಸರು.

ಚಿತ್ರದುರ್ಗ ತಾಲ್ಲೂಕಿನ ರೇಣುಕಾಪುರದಲ್ಲಿ ಊರದೇವರ ರಥ ಮುಟ್ಟಿದರು ಎಂಬ ಕಾರಣವೊಡ್ಡಿ ಕೆಲ ದಲಿತ ಹುಡುಗರನ್ನು ಇದೇ ನಾಯಕ ಜನಾಂಗದವರು ಅಟ್ಟಾಡಿಸಿ ಹೊಡೆದಿದ್ದಾರೆ. ಇವತ್ತಿಗೂ ಈ ದೌರ್ಜನ್ಯ ನಡೆಸಿದ ಒಬ್ಬನನ್ನೂ ಬಂಧಿಸಲಾಗಿಲ್ಲ.

ಆನಂದ್ ತೇಲ್ತುಂಬೆ ಹೇಳುವಂತೆ ದಲಿತರ ಮೇಲೆ ಬರೀ ಬ್ರಾಹ್ಮಣರು, ಲಿಂಗಾಯತರು ದೌರ್ಜನ್ಯ ನಡೆಸುತ್ತಿಲ್ಲ. ಆಯಾ ಊರಿನಲ್ಲಿ ಪ್ರಬಲವಾಗಿರುವ ಹಿಂದುಳಿದ ಜಾತಿಗಳವರು (ನಾಯಕರು, ಕುರುಬರು ಇತ್ಯಾದಿ) ಹೆಚ್ಚಿನ ಪ್ರಮಾಣದಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ.

ಫೆಬ್ರವರಿ 15ರಂದು ಈ ಎಲ್ಲ ದೌರ್ಜನ್ಯಗಳ ವಿರುದ್ಧ ಚಿತ್ರದುರ್ಗದ ಎಲ್ಲ ದಲಿತ ಸಂಘಟನೆಗಳು ಮತ್ತು ಮತ್ತು ಬೆಂಗಳೂರಿನ ಮಹಿಳಾ ಹೋರಾಟ ಒಕ್ಕೂಟದವರು ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಎಲ್ಲಾ ಪ್ರಗತಿಪರ ಸಂಘಟನೆಗಳು ಈ ಪ್ರತಿಭಟನೆಯನ್ನು ಬೆಂಬಲಿಸಬೇಕಿದೆ.

ಮಹಾರಾಷ್ಟ್ರದಲ್ಲಷ್ಟೇ ಇಲ್ಲ
ಎಲ್ಲೆಲ್ಲೂ, ನಮ್ಮೂರಲ್ಲೂ
ಇದೆಯೊಂದು ಖೈರ್ಲಾಂಜಿ..
ಎಚ್ಚರಗೊಳ್ಳುವುದ್ಯಾವಾಗ ನಾವೆಲ್ಲ?

-ಪಿ.ಕೆ.ಮಲ್ಲನಗೌಡರ್



ಬಳ್ಳಾರಿ ಪದ್ಮಾವತಿ ಕೊಲೆ ಹಿಂದಿನ ರಹಸ್ಯ!



ತತ್ಕಾಲಕ್ಕೆ ಈ ಪ್ರಕರಣದ ವಿಲನ್ ಅನ್ನು 'ಸೋಮೇಶ್' ರೆಡ್ಡಿ ಅಂತಿಟ್ಟುಕೊಳ್ಳೋಣ....

ಈ ಕೊಲೆ ಯಾರು ಮಾಡಿಸಿರಬಹುದೆಂಬ ಅಂದಾಜು ಬಳ್ಳಾರಿಯ ಪ್ರತಿಯೊಬ್ಬರಿಗೂ ಇದೆ.

ಆದರೂ ಯಾರೂ ಬಾಯಿ ಬಿಡುತ್ತಿಲ್ಲ. ಪೊಲೀಸರು, ವಿರೋಧ ಪಕ್ಷಗಳು, ಜನಪರ ಸಂಘಟನೆಗಳು ಊಹುಂ... ಇವರನ್ನು ಬಿಡಿ, ಕೊನೆಗೆ ಮೀಡಿಯಾಗಳು?

ಬಳ್ಳಾರಿಯ ಮಾಲೀಕರ ಕೃಪಾಕಟಾಕ್ಷ, ಭೀತಿ, ಆಮಿಷಗಳ ನಡುವೆ ಸಿಕ್ಕಿಬಿದ್ದಿರುವ ಅನೇಕರಿಗೆ ಈಗ ಸತ್ಯ ಬೇಕಿಲ್ಲ. ಸತ್ಯವನ್ನು ಸಾಯಿಸುವುದಷ್ಟೇ ಬೇಕಿದೆ.

ಕಳೆದ ಫೆಬ್ರವರಿ 4 ರ ರಾತ್ರಿ ಬಳ್ಳಾರಿ ನಗರದಲ್ಲಿ ಹತ್ಯೆಗೀಡಾದ ಕಾರ್ಪೊರೇಟರ್ ಪದ್ಮಾವತಿ ಯಾದವ್ ಪ್ರಕರಣ ಇದಕ್ಕೊಂದು ಲೇಟೆಸ್ಟ್ ಉದಾಹರಣೆಯಾಗಿದೆ. ಈಕೆ ಬಿಜೆಪಿಯ ಸದಸ್ಯೆ ದೇಶಭಕ್ತ, ಮಹಿಳಾ ರಕ್ಷಕ ಬಿಜೆಪಿ. ಒಮ್ಮೆ ಬಿಜೆಪಿಯಿಂದಲೇ ಬಳ್ಳಾರಿ ನಗರಪಾಲಿಕೆ ಮೆಂಬರ್ ಆಗಿ ಗೆದ್ದು ಮೇಯರ್ ಆಗಿದ್ದಾಕೆ. 2007 ರಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯಾದ ನಂತರ ಮತ್ತೆ ಗೆದ್ದು ಕಾರ್ಪೊರೇಟರ್ ಆಗಿದ್ದರು. ಎಲ್ಲರನ್ನೂ 'ಅಣ್ಣಾ' ಎನ್ನುತ್ತಾ ಓಡಾಡಿಕೊಂಡು ಬಡವರಿಗೆ ತನ್ನ ಕೈಲಾದಷ್ಟು ನೆರವಾಗುತ್ತಿದ್ದರು. ತನು, ಮನ, ಧನಗಳನ್ನು ಜಿಲ್ಲಾ ಲೀಡರ್‌ಗಳ ಹಾಗೂ ಬಿಜೆಪಿ ಪಾರ್ಟಿ ಪಾದಕ್ಕರ್ಪಿಸಿ ರಾಜಕೀಯದಲ್ಲಿ ಮೇಲೇರಿ ಬಂದಿದ್ದರು. ಅಂತಹ ಪದ್ಮಾವತಿ ಯಾದವ್‌ರನ್ನು ಮಚ್ಚಿನಿಂದ ಹೊಡೆದು ಕೊಂದವರ್ಯಾರು? ಅಂತಾ ಜರೂರತ್ತು ಕೊಲ್ಲಿಸಿದವರಿಗೇನಿತ್ತು? ಈ ಪದ್ಮಾವತಿಗೆ ಬಳ್ಳಾರಿ ರಾಜಕಾರಣಿಯೊಬ್ಬನೊಂದಿಗಿದ್ದ ಹೊಕ್ಕು ಬಳಕೆಯೇ ಕೊನೆಗೆ ಅಧಿಕೃತ ಪತ್ನಿಯನ್ನು ರೊಚ್ಚಿಗೆಬ್ಬಿಸಿ ರಾಯಲುಸೀಮಾದ ಬಾಡಿಗೆ ಹಂತಕರಿಗೆ ಕರೆ ಹೋಯಿತಾ? ಈ ಪ್ರಶ್ನೆಗಳ ಜೊತೆಗೆ ಕೇಳಲೇಬೇಕಾದ ಅತೀ ಮುಖ್ಯವಾದ ಇನ್ನೊಂದು ಪ್ರಶ್ನೆಯೂ ಇದೆ.

ಯಾರೂ ಒತ್ತಾಯಿಸದೇ ಇದ್ದರೂ ಮುಖ್ಯಮಂತ್ರಿ ಯಡಿಯೂರಪ್ಪ ಪದ್ಮಾವತಿ ಹತ್ಯೆಯಾದ ಕೇವಲ 48 ಗಂಟೆಯಲ್ಲೇ ಸಿಓಡಿ ತನಿಖೆಗೆ ಆರ್ಡರ್ ಮಾಡಿರುವುದು ಯಾಕೆ ಅಂತ! ಈ ಪ್ರಶ್ನೆಗಳಿಗೆ ಉತ್ತರ ಕೆದಕುತ್ತಾಹೋದರೆ



ಬಳ್ಳಾರಿಯ ಗಣ್ಯರ ಹೆಂಗಸರ ಕಬಳಿಕೆ-ಕದನಗಳ ಕತೆ ಕೇಳಿಸುತ್ತದೆ. ನಗರಪಾಲಿಕೆಯೊಳಗಿನ ಅನೈತಿಕ ಚಟುವಟಿಕೆಗಳು, ರಾಮುಲಮ್ಮ ಎಂಬ ಪಾಲಿಕೆ ಜವಾನಿಕೆ ಮಾಡುವವಳ ಬ್ರಾಥಲ್ ದಂಧೆಗಳೆಲ್ಲಾ ಆಚೆ ಬರುತ್ತವೆ.

ಈ ವಿಷವರ್ತುಲದೊಳಗೆ ಸಿಕ್ಕುಬಿದ್ದಿದ್ದ ಪದ್ಮಾವತಿ ಯಾದವ್ ಅಂತಾ ಕೆಟ್ಟ ಹೆಂಗಸೇನಾಗಿರಲಿಲ್ಲ. ಆದರೆ ಯಾರನ್ನು ಈಕೆ ತನ್ನ ಉದ್ಧಾರಕನೆಂದು ನಂಬಿದ್ದಳೋ ಅಂತವನ ಮನೆಯೊಳಗಿನ ಕದನವೇ ಕೊನೆಗೆ ಪದ್ಮಾವತಿಯ ಪ್ರಾಣ ತೆಗೆಸಿಬಿಟ್ಟಿದೆ.

ಕೊಲೆ ನಡೆಯುವ ಮುನ್ನ....!

ಬಳ್ಳಾರಿಯ ಅಬಕಾರಿ ವ್ಯವಹಾರದ ಗವಿಸಿದ್ದಪ್ಪನವರ ನಾಲ್ಕು ಮಕ್ಕಳ ಪೈಕಿ ಒಬ್ಬನಾಗಿದ್ದ ಶ್ರೀನಿವಾಸ ಯಾದವನ ಪತ್ನಿಯಾಗಿದ್ದ ಪದ್ಮಾವತಿ 2002 ರಲ್ಲಿ ಮೊದಲ ಬಾರಿಗೆ ಬಿಜೆಪಿಯಿಂದ ನಗರಪಾಲಿಕೆ ಎಲೆಕ್ಷನ್‌ಗೆ ಸ್ಪರ್ಧಿಸಿದ್ದರು. ಸತ್ಯನಾರಾಯಣ ಪೇಟೆಯ 18ನೇ ವಾರ್ಡಿನಿಂದ ಗೆದ್ದು ಬಂದರು. ಈಕೆ ಕೌನ್ಸಿಲರ್ ಆಗಿದ್ದಾಗಲೇ ರಾಜಕೀಯ ಏರುಪೇರುಗಳಾಗಿ ಒಮ್ಮೆ ಅಧ್ಯಕ್ಷೆಯೂ ಆದರು. ನಂತರ 2007 ರ ವೇಳೆಗೆ ಬಳ್ಳಾರಿ ಮಹಾನಗರ ಪಾಲಿಕೆಯಾಯಿತು. ಆಗ ಮತ್ತೆ ಸ್ಪರ್ಧಿಸಿ, ತನ್ನ ಲೀಡರ್ ಸೋಮೇಶ್ ರೆಡ್ಡಿಯ ಹಣಬಲದಿಂದ ಎಲೆಕ್ಷನ್ ಜಯಿಸಿಕೊಂಡಳು. ಇವೆಲ್ಲಾ ನಡೆದಿದ್ದಾಗಲೇ ಈ ಸೋಮೇಶ್ ರೆಡ್ಡಿಯ ಕೃಪೆ ಈಕೆಯ ಕಡೆಗೆ ಯಾವ ಪರಿ ಹರಿದುಬಂತೆಂದರೆ ಕೆಲವೇ ತಿಂಗಳುಗಳಲ್ಲಿ ಈಕೆಯ ಕೈಯಲ್ಲಿ ಲಕ್ಷಾಂತರ ರೂಪಾಯಿಗಳು ಅಲಕ್ಷ್ಯದಿಂದೆಂಬಂತೆ ಹರಿದಾಡಲು ಶುರುವಾಗಿತ್ತು. ಈಕೆಯ ಬದುಕಿನ 'ಗುರಿ' ಯದ್ವಾತದ್ವಾ ಮೇಲಕ್ಕೆ ಚಲಿಸತೊಡಗಿತ್ತು. ಆಗಲೇ ಇದರ ವಾಸನೆ ಹಿಡಿದ ಸೋಮೇಶ್ ರೆಡ್ಡಿಯ ಹೆಂಡತಿ ತನ್ನ ಇನ್ನೊಬ್ಬ ರೆಡ್ಡಿ ಬಾಮೈದನ ಹತ್ತಿರ ಹೋಗಿ ಕಂಪ್ಲೇಂಟು ಮಾಡಿದ್ದಳು... ತನ್ನ ಗಂಡ ಪದ್ಮಾವತಿಗೆ ಮಾಡುತ್ತಿರುವ ಉಪಚಾರ, ನೀಡುತ್ತಿರುವ ನೆರವನ್ನು ನಿಲ್ಲಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಧಮಕಿ ಹಾಕಿದ್ದಳು. ಆದರೆ ಅವತ್ತಿನ ಆತ್ಮಹತ್ಯೆಯ ಬೆದರಿಕೆಯು ಈಗ ಪದ್ಮಾವತಿಯ ಹತ್ಯೆಯಲ್ಲಿ ಕೊನೆಯಾಗಿದೆ.

ಈ ಮಧ್ಯೆ ಈಗೊಂದು ಮೂರ್ನಾಲ್ಕು ತಿಂಗಳ ಹಿಂದೆ ಈ ಸೋಮೇಶ್ ರೆಡ್ಡಿಯ ಹೆಂಡತಿ ಮತ್ತಾಕೆಯ ವಾರಗಿತ್ತಿ ಜೊತೆಗೂಡಿ ಪದ್ಮಾವತಿಯ ಮನೆಗೇ ನುಗ್ಗಿ ಮುಂದಲೆ ಹಿಡಿದು ಎಳೆದಾಡಿ ಜಗಳಾಡಿ ಬಂದಿದ್ದರು.

ಇದು ವಿಕೋಪಕ್ಕೆ ಹೋಗಿದ್ದು ಬಳ್ಳಾರಿಯಲ್ಲೊಂದು ಬಹುಮಹಡಿ ಕಟ್ಟಡ ಕುಸಿದು ಬಿದ್ದಾಗ. ಇಂಜಿನಿಯರ್ ಸೋಮಶೇಖರನ ಈ ಬಿಲ್ಡಿಂಗ್ ಕುಸಿದು ಬಿದ್ದ ನಂತರ ಪರಿಹಾರ ಕಾರ್ಯ ಮಾಡಿ ಸಮಾಜ ಸೇವೆ ಮಾಡುತ್ತೇನೆಂದು ಮನೆಬಿಟ್ಟು ಹೋಗಿದ್ದ ಸೋಮೇಶ್ ರೆಡ್ಡಿ ಒಂಭತ್ತು ದಿನ ಮನೆಯತ್ತ ಮುಖ ಹಾಕಿರಲಿಲ್ಲ. ಅವನ ರಥದ ಗಾಲಿಗಳು ಅದೇ ಏರಿಯಾದ ಲಿಂಗಣ್ಣನ ಮನೆಯತ್ತಲೇ ಸುತ್ತುತ್ತಿದ್ದವು. ಅದೇ ಜಾಗದಲ್ಲಿ ಸೋಮೇಶ್ ರೆಡ್ಡಿಯ ಒಂದಿಬ್ಬರು ಆಪ್ತ ಮಹಿಳಾ ರಾಜಕಾರಣಿಗಳೂ ಪದೇಪದೇ ಅದೇ ಮನೆಗೆ ಹೋಗಿ ಸೋಮೇಶ್ ಊಟ-ತಿಂಡಿ-ಕಾಫಿ-ನಿದ್ರೆಯ ಉಪಚಾರ ಮಾಡಿ ಬರುತ್ತಿದ್ದುದನ್ನು ಬಳ್ಳಾರಿಯ ಜನ ನೋಡಿದ್ದಾರೆ. ಒಂದು ಕಡೆ ಬಿದ್ದ ಕಟ್ಟಡದ ಅವಶೇಷದಿಂದ ಸತ್ತವರ ದೇಹಗಳು ಹೊರಬರುತ್ತಿದ್ದರೆ, ಇನ್ನೊಂದು ಕಡೆ ಬದುಕಿದ್ದ ಪದ್ಮಾವತಿಯನ್ನು ಮಣ್ಣಿನಡಿಗೆ ತಳ್ಳಲು ಸಂಚು ರೂಪುಗೊಂಡಿತ್ತು. ಈ ಪರಿಹಾರ ಕಾರ್ಯವು ಪೂರ್ತಿಯಾಗಿ ಮುಗಿದಿದ್ದು ಫೆಬ್ರವರಿ 4 ರ ಗುರುವಾರ. ಆದಾದ ಕೆಲವೇ ಗಂಟೆಯಲ್ಲಿ ಅಂದರೆ ಫೆಬ್ರವರಿ 4 ರ ರಾತ್ರಿಯೇ ಪದ್ಮಾವತಿ ಹತ್ಯೆ ನಡೆದೇಹೋಯಿತು.

ಆಕೆಗೆ ರಾಜಕೀಯದಲ್ಲಿ ಶತ್ರುಗಳಿರಲಿಲ್ಲ. ಹಣಕಾಸು ವ್ಯವಹಾರಗಳಲ್ಲಿ ದೊಡ್ಡಮಟ್ಟದ ಫ್ರಾಡುಗಳಾಗಿರಲಿಲ್ಲ. ಹಣ ಕೊಡುವ ತೆಗೆದುಕೊಳ್ಳುವ ಬ್ಯುಸಿನೆಸ್ ಅನೇಕರೊಂದಿಗೆ ಇತ್ತಾದರೂ ಅದ್ಯಾವುದೂ ಕೊಲೆಯಾಗುವ ಲೆವೆಲ್‌ಗೆ ಹೋಗುವಂಥದ್ದಾಗಿರಲಿಲ್ಲ. ಇನ್ನು ಕುಟುಂಬದ ವಿಚಾರಕ್ಕೆ ಬಂದರೆ ಒಂದು ಕಾಲದಲ್ಲಿ ಇವರಿಗೆ ಬಳ್ಳಾರಿ ಸಿಟಿಯೊಳಗೇ ಎರಡು ವೈನ್‌ಶಾಪುಗಳಿದ್ದವು. ಕೊನೆಗೆ ಯಾವ್ಯಾವುದೋ ಕಾರಣದಿಂದಾಗಿ ಒಂದನ್ನು ಮಾರಿ ಒಂದೇ ಲಿಕ್ಕರ್ ಅಂಗಡಿ ಉಳಿಸಿಕೊಂಡಿತ್ತು ಪದ್ಮಾವತಿ ಕುಟುಂಬ. ಒಬ್ಬ ಮೈದುನ ಗೋವಿಂದ ರಾಜು ಜನತಾದಳದ ಸೂರ್ಯನಾರಾಯಣ ರೆಡ್ಡಿಯ ಜೊತೆ ಇರುತ್ತಾನೆ. ಇನ್ನೊಬ್ಬ ಮೈದುನ ರಾಮಪ್ಪ ಎಂಬುವನ ಬೆಸ್ಟ್ ಸ್ಕೂಲ್ ಉಸ್ತುವಾರಿಗಿದ್ದಾನೆ. ಇದ್ದೊಬ್ಬ ಗಂಡ ಶ್ರೀನಿವಾಸ ಯಾದವ್ ಬಿಡುವಿದ್ದಾಗ ಕುಡಿಯುತ್ತಾ ಬಿಡುವಿರದಿದ್ದಾಗ ತೂರಾಡುತ್ತಾ ಹೇಗೋ ಕಾಲ ಹಾಕುತ್ತಿದ್ದಾತ. ಈ ಹಿನ್ನೆಲೆಯಿಂದ ಬಂದ ಪದ್ಮಾವತಿ ಯಾದವ್ ಎರಡು ಬಾರಿ ಎಲೆಕ್ಷನ್ ಗೆದ್ದಿದ್ದಳು. ಇತ್ತೀಚೆಗೆ ವೆಂಕಟೇಶ್ವರ ಕಾಲನಿಯಲ್ಲಿ ಮೂರು ಕೋಟಿ ರೂಪಾಯಿ ಖರ್ಚಿನ 'ಆಲಿಶಾನ್' ಎಂಬ ಬಂಗಲೆ ಕಟ್ಟಿಸಿದ್ದಳು. ಅದೆಲ್ಲಿಂದ ಹರಿದುಬರುತ್ತಿತ್ತೋ ದುಡ್ಡು ತನಗೆ ಅನುಭವವಿರದಿದ್ದ ದೊಡ್ಡ ಬ್ಯುಸಿನೆಸ್‌ಗಳಿಗೆಲ್ಲಾ ಕೈ ಹಾಕಿದ್ದಳು. ಬಳ್ಳಾರಿಯಲ್ಲೇ ಅನೇಕ ಕಡೆ ಆಸ್ತಿ ಖರೀದಿ ಮಾಡಲು ಶುರು ಮಾಡಿದ್ದಳು. ಕಳೆದ ಎರಡು



ರಾಮುಲಮ್ಮ ಎಂಬ ನಟೋರಿಯಸ್ ಮಹಿಳೆ

ಪದ್ಮಾವತಿ ಯಾದವ್‌ಳ ಹತ್ಯೆಗೆ ನೇರ ಸಂಬಂಧವಿರದಿದ್ದರೂ ಈ ರಾಮುಲಮ್ಮ ಅಲ್ಲಿನ ನಗರಪಾಲಿಕೆಯೊಳಗಿನ ಅಸಹ್ಯ ದಂಧೆಗಳೊಂದಿಗೆ ಲಿಂಕ್ ಇರುವ ಮಹಿಳೆ.

ಈಕೆ ನಟೋರಿಯಸ್ ಹೆಂಗಸು. ನಗರಪಾಲಿಕೆಯ ನಾಲ್ಕನೇ ದರ್ಜೆ ನೌಕರಳಾಗಿರುವ ರಾಮುಲಮ್ಮ ಕೆಲಸಕ್ಕೆ ಸೇರಿದಾಗಿನಿಂದ ಒಂದು ದಿನವೂ ಕಸಗುಡಿಸಿದವಳಲ್ಲ, ಒಂದು ಫೈಲನ್ನು ಆ ಟೇಬಲಿನಿಂದ ಈ ಟೇಬಲ್ಲಿಗೆ ತೆಗೆದಿಟ್ಟವಳಲ್ಲ, ದಿನಾ ಬೆಳಗ್ಗೆ ಬಂದು ಅಟೆಂಡೆನ್ಸ್ ಹಾಕಿ ಸೀರೆ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಆಚೆಗೆ ಹೊರಟಳೆಂದರೆ ಕಚೇರಿ ಸಿಬ್ಬಂದಿಗೆ ಮತ್ತೆ ಅವಳ ಮುಖದರ್ಶನವಾಗುವುದೇ ಮರುದಿನ ಬೆಳಗ್ಗೆ.


ಹುಸೇನ್‌ನಗರ ವಾಸಿ ರಾಮುಲಮ್ಮ ಎಲ್ಲೆಲ್ಲಿಂದಲೋ ಹುಡುಗಿಯರನ್ನು ಕರೆಸಿ ವೇಶ್ಯಾದಂಧೆ ನಡೆಸುತ್ತಿರುವ ವಿಚಾರ ಇದೀ ಬಳ್ಳಾರಿಗೆ ಗೊತ್ತಿದೆ. ಬಳ್ಳಾರಿಯ ಅನೇಕ ರಾಜಕಾರಣಿಗಳು ಹಾಗೂ ಸರ್ಕಾರಿ ಅಧಿಕಾರಿಗಳೇ ಆಕೆಯ ದಂಧೆಯ ಫಲಾನುಭವಿಗಳು. ಇದರಿಂದ ರಾಮುಲಮ್ಮ ಎಷ್ಟು ಧಿಮಾಕು ಬೆಳೆಸಿಕೊಂಡಿದ್ದಳೆಂದರೆ ನಗರಪಾಲಿಕೆಯಲ್ಲಿ ಯಾರಾದರೂ ಆಕೆಯನ್ನು ಪ್ರಶ್ನಿಸಿದರೆ, ಆತ ಕಮಿಷನರ್ರೇ ಆಗಿರಲಿ "ಲೇಯ್, ನೀನ್ಯಾವನೊ ನನ್ನ ಕೇಳಕ್ಕೆ" ಎನ್ನುವಷ್ಟು ಅಹಂಕಾರ ತೋರಿಸುತ್ತಿದ್ದಳು. ಬಳ್ಳಾರಿ ನಗರವನ್ನು ಅರ್ಧ ಹಾಳು ಮಾಡಿರುವ ರಾಮುಲಮ್ಮನ ಟ್ರಾಪ್‌ಗೆ ಬಿದ್ದು ಹಾಳಾಗಿರುವ ಡಜನ್‌ಗಟ್ಟಲೆ ಹೆಣ್ಣುಮಕ್ಕಳ ಕತೆಗಳಿವೆ. ಅವಳನ್ನೂ ಕಮೀಷನರ್ ತಿಮ್ಮಪ್ಪ ಈಗ ಸಸ್ಪೆಂಡ್ ಮಾಡಿದ್ದಾರೆ


ತಿಮ್ಮಪ್ಪ


ಈ ಹಾಳು ಚಟ ಹತ್ತಿಸಿಕೊಂಡ ಬಳ್ಳಾರಿಯ ಕೆಲವು ಪುಢಾರಿಗಳಿಗೆ ಹೊಸ ಹೆಂಗಸರ ಬೆನ್ನು ಹತ್ತುವುದೇ ಗೀಳಾಗಿಹೋಗಿತ್ತು, ಆಕೆ ಸರ್ಕಾರಿ ನೌಕರಳಾಗಿರಲಿ, ರಾಜಕಾರಣಿಯಾಗಿರಲಿ, ಸಮಾಜ ಸೇವೆ, ಸಾರ್ವಜನಿಕ ಕೆಲಸ ಅಂತ ಹೊರಗೆ ಕಾಣಿಸಿಕೊಂಡರೆ ಸಾಕು ಅಂತವರನ್ನು ಹರಿದುಮುಕ್ಕಲು ಕಾದಿರುತ್ತಿದ್ದರು. ಈ ರಾಮುಲಮ್ಮ ಹೀಗೆ ಅನೇಕರನ್ನು ಪಳಗಿಸಿ ಲಂಪಟರಿಗೆ ಒದಗಿಸಿ ಇವತ್ತು ಐವತ್ತು ಲಕ್ಷಕ್ಕೆ ತೂಗುತ್ತಿದ್ದಾಳೆ. ಒಬ್ಬ ಮಗಳ ಮದುವೆಯನ್ನು ಬೆಂಗಳೂರಿನ ಲೀಲಾ ಪ್ಯಾಲೇಸ್ ಫೈವ್ ಸ್ಟಾರ್ ಹೋಟೆಲಿನಲ್ಲಿ ನಡೆಸಿದಳೆಂದರೆ ಇವಳ ಹಣಬಲ ಅದೆಷ್ಟಿರಬಹುದು ಊಹಿಸಿ. ಇಂಥ ರಾಮುಲಮ್ಮನ ಒಂದು ತಮಾಷೆ ಏನೆಂದರೆ 'ಆದರ್ಶ ಮಹಿಳಾ ಸಂಘ'ವೆಂಬ ಹೆಂಗಸರ ಗುಂಪು ಕಟ್ಟಿರುವುದು!

ಬಳ್ಳಾರಿಯ ಲಂಪಟ ರಾಜಕಾರಣಿಗಳನ್ನು ಖುಷಿಪಡಿಸುವ ಕೆಲಸ ಮಾಡುತ್ತಿದ್ದ ರಾಮುಲಮ್ಮ ತನ್ನ ಕಂಟ್ರೋಲಿಗೆ ಸಿಗದೆ ಸ್ವತಂತ್ರವಾಗಿ ವ್ಯವಹರಿಸುತ್ತಿದ್ದ ಕೆಲವು ಮಹಿಳೆಯರ ವಿರುದ್ಧ ಸೇಡು ಬೆಳೆಸಿಕೊಂಡಿರುವ ಸಾಧ್ಯತೆಗಳಿವೆ. ಪದ್ಮಾವತಿ ಕೊಲೆ ತನಿಖೆಯನ್ನು ಈ ಆ್ಯಂಗಲ್‌ನಿಂದಲೂ ಪೊಲೀಸರು ನೋಡಬೇಕಿದೆ. ಏಕೆಂದರೆ ಸ್ವತಃ ರಾಮುಲಮ್ಮನ ಗಂಡನೇ ಅನುಮಾನಾಸ್ಪದವಾಗಿ ಸತ್ತ ಘಟನೆಯನ್ನು ಬಳ್ಳಾರಿಯ ಜನ ಇನ್ನೂ ಮರೆತಿಲ್ಲ.

ಬಳ್ಳಾರಿ ಮಹಿಳಾ ಕಾರ್ಪೊರೇಟರ್‌ಗಳಿಗೆ ಎಚ್ಚರಿಕೆ


ಶಶಿಕಲಾ


ಎ.ಪದ್ಮಾವತಿ


ವಿಜಯಮ್ಮ

ಮೂವತ್ತೈದು ವಾರ್ಡುಗಳಿರುವ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಒಂದು ಡಜನ್‌ಗೂ ಹೆಚ್ಚು ಮಹಿಳಾ ಕಾರ್ಪೊರೇಟರ್‌ಗಳಿದ್ದಾರೆ. ಬಹುಜನ ಸಮಾಜ ಪಕ್ಷಕ್ಕೆ ಸೇರಿರುವ ಏಳನೇ ವಾರ್ಡಿನ ಒಬ್ಬ ನಾರಾಯಣಮ್ಮನನ್ನು ಹೊರತುಪಡಿಸಿ ಉಳಿದ ಮಹಿಳಾ ರಾಜಕಾರಣಿಗಳೆಲ್ಲಾ ಬಿಜೆಪಿಗೆ ಸೇರಿದ್ದಾರೆ. ಈಗ ಕೊಲೆಯಾಗಿರುವ ಪದ್ಮಾವತಿ ಯಾದವ್ ದುಡ್ಡು ಮಾಡುತ್ತಿದ್ದ ವೇಗಕ್ಕೆ ಹಾಗೂ ಹಣ ಮಾಡಲು ಹಿಡಿದಿದ್ದ ಹಾದಿಗೆ ಉಳಿದವರು ಹೋಗಿರಲಿಲ್ಲ. ಮೂವತ್ತಮೂರನೇ ವಾರ್ಡಿನಿಂದ ಗೆದ್ದು ಉಪಮೇಯರ್ ಆಗಿರುವ ವಿಜಯಮ್ಮ, 2 ನೇ ವಾರ್ಡಿನ ಲತಾ, ಆರನೇ ವಾರ್ಡಿನ ಲಕ್ಷ್ಮಿ, 9 ನೇ ವಾರ್ಡಿನ ಮುನ್ನಾಬಿ, 14 ನೇ ವಾರ್ಡಿನ ಪದ್ಮಾವತಿ, ಕವಿತಾ, ಶೋಭಾ... ಮುಂತಾದವರೆಲ್ಲಾ ತಮ್ಮ ಕೈಲಾದಷ್ಟು ಕೆಲಸ ಮಾಡುತ್ತಾ ಕೆಟ್ಟ ಹೆಸರು ಪಡೆಯದೆ ರಾಜಕಾರಣದಲ್ಲಿ ಸಾಗುತ್ತಿದ್ದಾರೆ.

ಆದರೆ ಪದ್ಮಾವತಿ ಹೀಗಿರಲಿಲ್ಲ, ಆಕೆಗೆ ದೊಡ್ಡ ಮನುಷ್ಯರ ಪರಿಚಯ ಬೆಳೆದು ದೊಡ್ಡ ದೊಡ್ಡ ವ್ಯವಹಾರಗಳಿಗೆ ಕೈ ಹಾಕಿದ್ದಳು. ಓರ್ವ ಮಾಮೂಲಿ ಮಹಿಳಾ ರಾಜಕಾರಣಿಯಾಗಿದ್ದರೂ ಜನರು ನೋಡನೋಡುತ್ತಿದ್ದಂತೆಯೇ ಮೂರು ಕೋಟಿ ರೂಪಾಯಿ ಬೆಲೆಯ ಬಂಗಲೆ ಕಟ್ಟಿಸಿಕೊಂಡಳು. ಈಕೆಗೆ ರಾಜಕಾರಣಿಯೊಬ್ಬ ಹಣ ಕೊಡುತ್ತಿದ್ದಾನೆಂದು ಅನುಮಾನಪಟ್ಟು ಆತನ ಪತ್ನಿ ಒಮ್ಮೆ ಪದ್ಮಾವತಿಯ ಮನೆಗೇ ನುಗ್ಗಿ ಹಾದಿರಂಪ ಬೀದಿರಂಪ ಮಾಡಿದ್ದಳು. ಇಷ್ಟೆಲ್ಲಾ ಆದ ಮೇಲೂ ಯಾರೂ ಬದಲಾಗದ ಕಾರಣ ಪದ್ಮಾವತಿಯ ಬದುಕು ಈಗ ಸುಪಾರಿ ಕೊಲೆಯಲ್ಲಿ ಅಂತ್ಯ ಕಂಡಿದೆ.

ಬಳ್ಳಾರಿಯ ಮಹಿಳಾ ಕಾರ್ಪೊರೇಟರ್‌ಗಳೆಲ್ಲಾ ಈ ಕೊಲೆ ನೋಡಿ ನಡುಗಿ ಹೋಗಿದ್ದಾರೆ. ಪದ್ಮಾವತಿಯಂತೆಯೇ ಸೋಮೇಶ್ ರೆಡ್ಡಿಯ ಬೆನ್ನ ಹಿಂದೆ ...ಂಗುತ್ತಿದ್ದ ಒಂದಿಬ್ಬರು ಮಹಿಳೆಯರಿಗಂತೂ ಈಗ ಜೀವಭಯ.

ರಾಯಲಸೀಮಾದ ರಕ್ತಸಿಕ್ತ ರಾಜಕೀಯದ ಒಂದು ಸ್ಯಾಂಪಲ್‌ನಂತಿರುವ ಈ ಕೊಲೆ ಅನೇಕರಿಗೆ ವಾರ್ನಿಂಗ್‌ನಂತಿದೆ.

...ವಿಂದೀಚೆಗೆ ಪದ್ಮಾವತಿ ನಡೆಸಿರುವ ಹಣಕಾಸಿನ ವಹಿವಾಟು ಹೆಚ್ಚುಕಡಿಮೆ ... ಕೋಟಿ ರೂಪಾಯಿಯಷ್ಟಿದೆ.

...ಇದೆಲ್ಲಾ ಯಾವ ದುಡ್ಡು? ಯಾರ ದುಡ್ಡು?

...ಒಬ್ಬ ಮಾಮೂಲಿ ಕಾರ್ಪೊರೇಟರ್ ಆಗಿದ್ದ ಪದ್ಮಾವತಿ ಈ ಮಟ್ಟದ ...ಗ್‌ಗಳನ್ನು ನಡೆಸುವಷ್ಟು ಆದಾಯ ಹೊಂದಿರಲಿಲ್ಲ, ಇದು ಎಲ್ಲರಿಗೂ ...ರುವ ಸತ್ಯ.





...ವಾಗಾದರೆ ಈ ಹಣ ಸೋಮೇಶ್ ರೆಡ್ಡಿಯದಾ? ಗಣಿಧೂಳಿನ ಯಾರದೋ ... ಎಲ್ಲಿಂದಲೋ ಹೊರಟು ಮತ್ತೆಲ್ಲೋ ಹಾದು ಪದ್ಮಾವತಿಯ ಕೈ ...ತ್ತಿತ್ತಾ?

...ಓಡಿ ಪೊಲೀಸರು ತನಿಖೆ ಮಾಡಬೇಕಾದ ವಿಚಾರಗಳಿವು.

ಕೊಲೆಯಾದ ದಿನ ಏನೇನಾಯಿತು?

...ಬ್ರವರಿ 4 ರ ಬೆಳಗ್ಗೆ ಹತ್ತು ಗಂಟೆಯ ಸುಮಾರಿಗೆ ಅವಶೇಷ ...ಯುವ ಕೆಲಸ ಪೂರ್ತಿಯಾಗಿತ್ತು. ಹತ್ತಿರದಲ್ಲೇ ಇದ್ದ ಸಾರಾಯಿ ...ಣ್ಣನ ಮನೆಯಲ್ಲಿ ಪರಿಹಾರ ಕಾರ್ಯದಲ್ಲಿ ...ಮಾಗಿದ್ದವರಿಗೆ ಊಟ ಹಾಕಿಸಿ ಕೈಗೊಂದು ಗಿಫ್ಟ್ ಕೊಟ್ಟು ...ಹ ಹೊರಟರು. ಪದ್ಮಾವತಿಯೂ ಅಲ್ಲಿಂದ ತನ್ನ ಮನೆಗೆ ...ಗಿದ್ದಾಳೆ. ಆ ನಂತರ ಸಂಜೆಯ ಸುಮಾರಿಗೆ ಮೊದಲೇ ...ಪಿಸಿಕೊಂಡಂತೆ ಆಕೆ ಮನೆಯಿಂದ ಹೊರಟು ಬಳ್ಳಾರಿಯಲ್ಲೇ ...ದೋ ಒಂದು ಸ್ಥಳ ತಲುಪಿದ್ದಾಳೆ. ಅಲ್ಲಿಗೆ ಬೇರೆ ...ಬ್ಬರ್‍ಯಾರೋ ಬಂದಿದ್ದಾರೆ. ಅಲ್ಲಿ ಕೆಲಸ ಮುಗಿಸಿಕೊಂಡು ...ಎಂಟು ಗಂಟೆ ಸುಮಾರಿಗೆ ಪದ್ಮಾವತಿಯ ಇನ್ನೋವಾ ... ಆಕೆಯ ವೆಂಕಟೇಶ್ವರ ಕಾಲನಿಯ ಮನೆಯತ್ತ ಹೊರಟಿದೆ. ಆಗ ... ಜೊತೆಗಿದ್ದವರು ಡ್ರೈವರ್ ಆನಂದ ಮತ್ತು ಸಹಾಯಕ ಕೃಷ್ಣ ಮಾತ್ರ. ...ಶೇಕ ಹಂತಕರು ಅಲ್ಲಿಂದಲೇ ಪದ್ಮಾವತಿಯ ಕಾರನ್ನು ಫಾಲೋ ...ಕೊಂಡು ಬಂದಿದ್ದಾರೆ. ಅವರು ಎರಡು ಮೋಟಾರ್ ಬೈಕುಗಳಲ್ಲಿ ಒಟ್ಟು ನಾಲ್ಕು ಜನರಿದ್ದರು. ದಾರಿ ತೋರಿಸುವ ಸಲುವಾಗಿ ಒಬ್ಬ ಸ್ಥಳೀಯನಂತೂ ಇದ್ದಿರಲೇ ಬೇಕು.


ಸೀಮಂತ್‌ಕುಮಾರ್

ಬಳ್ಳಾರಿಯ ಜನನಿಬಿಢ ನಗರದ ರಸ್ತೆ ಹಾದು ಕಾರು ಆ ಕತ್ತಲಲ್ಲಿ ಪದ್ಮಾವತಿಯ ಮನೆ ಕಾಂಪೌಂಡಿನ ಬಳಿ ಬಂದುನಿಂತಾಗ ಆಕೆ ಕಾರಿನಿಂದ ಕೆಳಗಿಳಿಯುವ ಮೊದಲೇ ಹಂತಕರು ಡೋರ್ ಬಳಿ ಬಂದಿದ್ದಾರೆ. ಆಕೆಯನ್ನು ಹಿಡೆದೆಳೆದು ಹಣೆ, ತಲೆಗೆ ಗುರಿ ಮಾಡಿ ಮಚ್ಚಿನೇಟು ಹಾಕಿದ್ದಾರೆ. ಅವರಿಗೆ ಸುಪಾರಿ ನೀಡಿದ್ದವರ ಹುಕುಂ 'ಪದ್ಮಾವತಿ ಸಾಯಲೇ ಬೇಕು' ಎಂದಿತ್ತಾದ್ದರಿಂದ ಹಂತಕರು ತಮ್ಮ ಹೀನ ಕೆಲಸ ಪೂರೈಸಲು ಹಿಂಜರಿದಿಲ್ಲ.

ಆಶ್ಚರ್ಯ ಅಂದರೆ ಪದ್ಮಾವತಿಯ ಅಸಿಸ್ಟೆಂಟ್ ಕೃಷ್ಣನಿಗೇನೂ ಆಗಿಲ್ಲ, ಅವನು ಕೊಲೆ ತಡೆಯುವ ಪ್ರಯತ್ನವನ್ನು ಮಾಡಿಲ್ಲ. ಅದೇ ರೀತಿ ಡ್ರೈವರ್ ಆನಂದ್ ಕೂಡ ಸ್ಥಳ ಬಿಟ್ಟು ಓಡಿಹೋಗಿದ್ದಾನೆ. ಯಾವ ಆತಂಕ, ಗಡಿಬಿಡಿ ಇರದಿದ್ದಾಗಲೂ ಕೊಲೆಗಡುಕರು ಹೊರಡುವಾಗ ತಮ್ಮದೊಂದು ಚಪ್ಪಲಿ ಹಾಗೂ ಒಂದು ಮಚ್ಚನ್ನು ಕೆಡವಿಕೊಂಡು ಹೋಗಿದ್ದಾರೆ.

ಬಳ್ಳಾರಿಯ ರಾಜಕಾರಣ, ಅಲ್ಲಿನ ನಾಯಕರ ಫ್ಯೂಡಲ್ ಮೆಂಟಾಲಿಟಿಯ ಬಗ್ಗೆ ಗೊತ್ತಿರುವ ಜನರ ಅನುಮಾನ ಏನೆಂದರೆ ಪದ್ಮಾವತಿ ಯಾದವ್‌ಳ ಕೊಲೆಯ ಹಿಂದೆ ರಾಜಕಾರಣಿಯೊಬ್ಬನಿಗಾಗಿ ಹೆಂಗಸರು ನಡೆಸಿದ ಜಗಳದ ಹಿನ್ನೆಲೆಯಿದೆ ಎಂದು.

ಬಾಡಿಗೆ ಹಂತಕರನ್ನು ರಾಯಲಸೀಮಾದ ಕಡಪಾ ಕರ್ನೂಲ್‌ಗಳಿಂದ ಸುಪಾರಿ ನೀಡಿ ಕರೆಸಿದ್ದಾರೆಂಬುದು, ಅದರ ಮೊತ್ತ ಐದು ಲಕ್ಷ ರೂಪಾಯಿಗಳಾಗಿತ್ತೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಪದ್ಮಾವತಿಯ ಹತ್ಯಾ ತನಿಖೆ ಆರಂಭಿಸಿರುವ ಸಿಓಡಿ ಪೊಲೀಸರು ಇವೆಲ್ಲ ಅಂಶಗಳನ್ನು ನೋಡಬೇಕಿದೆ. ಬಹಳ ಮುಖ್ಯವಾಗಿ ಪದ್ಮಾವತಿಯ ಮೊಬೈಲ್ 9880362225 ನಿಂದ ಹೋಗಿರುವ, ಬಂದಿರುವ ಕಾಲ್‌ಗಳನ್ನು ಪತ್ತೆ ಹಚ್ಚಿದರೆ, ಆಕೆ ಸತ್ತ ಫೆಬ್ರವರಿ 4 ರಂದು ಯಾರನ್ನು ಭೇಟಿಯಾಗಲು ಹೋಗಿದ್ದಳೆಂಬುದನ್ನು ಪತ್ತೆಹಚ್ಚಲು ಸಾಧ್ಯವಾದರೆ ಈ ಕೊಲೆಗೆ ಯಾವ ಉದ್ದೇಶವಿತ್ತು ಎಂಬುದು ಗೊತ್ತಾಗುತ್ತದೆ.

ಸದ್ಯಕ್ಕಂತೂ ಸೋಮೇಶ್ ರೆಡ್ಡಿಯ ಫ್ಯಾಮಿಲಿ ರಂಪಾಟವೇ ಪದ್ಮಾವತಿ ಯಾದವಳ ಕೊಲೆಗೆ ಕಾರಣ ಎಂದು ಬಳ್ಳಾರಿಯ ಬೀದಿಬೀದಿಗಳಲ್ಲಿ ಜನ ಮಾತನಾಡುತ್ತಿದ್ದಾರೆ.

ಬೆಂಕಿಯಿಲ್ಲದೆ ಹೊಗೆ ಆಡುತ್ತಾ ಹೇಳಿ.....!

ಚಿತ್ರಗಳು : ರಾಮುಲು

● ಪಾರ್ವತೀಶ್

ಪೇಜಾವರ ಉಪವಾಸ

ಅಮೋಘ 4ನೇ ಬಾರಿಗೆ ಮುಂದೂಡಿಕೆ!



"ಮಂಗಳೂರು ಎಸ್‌ಇಜೆಡ್-2 ವಿರುದ್ಧ ಉಪವಾಸ ಕೂಡುತ್ತೇನೆ...." ನೋ ಡೌಟ್, ಇದು ಶ್ರೀಶ್ರೀಶ್ರೀ ಪೇಜಾವರ ಸ್ವಾಮಿಗಳ ಹೇಳಿಕೆ. ಹೀಗೆ ಅವರು ನಾಲ್ಕು ಬಾರಿ ಸಾರ್ವಜನಿಕ ಘೋಷಣೆ ಮಾಡಿದ್ದಾರೆ. ಹಾಗೆಯೇ ತಮ್ಮ ಉದ್ದೇಶಿತ ಉಪವಾಸವನ್ನು ಅಮೋಘವಾಗಿ ನಾಲ್ಕನೇ ಬಾರಿ ಮುಂದೂಡಿ ಹಾಸ್ಯಾಸ್ಪದರಾಗಿರುವ ಶ್ರೀಗಳು ತಾವೆಂದೆಂದಿಗೂ ಅಧಿಕಾರಸ್ಥರ ಪರ ಎಂಬುದನ್ನು ನೂರಾಒಂದನೇ ಸಲ ಪ್ರೂವ್ ಮಾಡಿಬಿಟ್ಟಿದ್ದಾರೆ.

ಕಳೆದ ವಾರವಷ್ಟೇ ಅವರು ಎಸ್‌ಇಜೆಡ್ ವಿರೋಧಿಸಿ ಪೆರ್ಮುಡೆಯಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ ನಾಲ್ಕನೇ ಬಾರಿ ಘೋಷಿಸಿದ್ದರು. ಎಸ್‌ಇಜೆಡ್‌ಗೆ ನೋಟಿಫೈ ಮಾಡಿರುವ ಭೂಮಿಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಡಿನೋಟಿಫೈ ಮಾಡದಿದ್ದರೆ ಮಾರ್ಚ್ 5 ರಿಂದ ಆಮರಣಾಂತ ಉಪವಾಸ ಆರಂಭಿಸುವೆ ಎಂದು ಸರ್ಕಾರಕ್ಕೆ ವಾರ್ನ್ ಮಾಡಿದ್ದರು. ಅದೇನಾಯ್ತೋ ಏನೋ, ಅಷ್ಟೇ ವೇಗದಲ್ಲಿ ಪತ್ರಿಕಾಗೋಷ್ಠಿ ಕರೆದ ವೀರಶೂರ ಪೇಜಾವರರು ತಮ್ಮ ಉಪವಾಸ ಸತ್ಯಾಗ್ರಹವನ್ನು ಒಂದು ತಿಂಗಳು postphone ಮಾಡಿಬಿಟ್ಟಿದ್ದಾರೆ! ಇದು ಅವರ ನಾಲ್ಕನೇ ಗಿಮಿಕ್ ಆಗಿರುವುದರಿಂದ ಕರಾವಳಿ ಜನ 'ದಿ ಶೋ ಮಸ್ಟ್ ಗೋ ಆನ್' ಎಂದು ತಮಾಷೆ ಮಾಡುತ್ತಲೇ ಇದ್ದಾರೆ.

2009 ರ ಸೆಪ್ಟೆಂಬರ್‌ನಲ್ಲೊಮ್ಮೆ ಪತ್ರಿಕಾಗೋಷ್ಠಿ ಕರೆದಿದ್ದ ಪೇಜಾವರರು, ರೈತರ ಪರ ಮಾತಾಡಿ, ಎಸ್‌ಇಜೆಡ್‌ಗಾಗಿ ಭೂಸ್ವಾಧೀನ ಮಾಡಬಾರದು ಎಂದು ಅಬ್ಬರಿಸಿದ್ದರಲ್ಲದೇ, ನವೆಂಬರ್ 11 ರಿಂದ `hunger strike start' ಎಂದುಬಿಟ್ಟಿದ್ದರು! ಅದಾದ ಮೇಲೆ ಫೆಬ್ರವರಿ 4 ಕ್ಕೆ ಅವರ ಉಪವಾಸ ಶೋ ಮುಂದೂಡಲ್ಪಟ್ಟಿತ್ತು!! ಪ್ರತಿಸಾರಿ ಅವರು ಉಪವಾಸ ಕಾರ್ಯಕ್ರಮ ಘೋಷಿಸಿದ ನಂತರ ಎಸ್‌ಇಜೆಡ್ ಪರವೇ ಇರುವ ಗೃಹ ಸಚಿವ ವಿ.ಎಸ್. ಆಚಾರ್ಯರನ್ನೋ, ಸದಾನಂದ ಗೌಡರನ್ನೋ ಇಲ್ಲಾ, ಚಿಲ್ಟು ಎಂ.ಪಿ. ನಳಿನ್‌ಕುಮಾರ್ ಕಟೀಲನನ್ನೋ ಭೇಟಿ ಆಗುತ್ತಾರೆ. ತಕ್ಷಣವೇ ಮತ್ತೊಂದು ಪ್ರೆಸ್‌ಮೀಟ್ ಕರೆದು ಉಪವಾಸವನ್ನು ಮುಂದಕ್ಕೆ ಓಡಿಸುತ್ತಾರೆ.

"ಯಾಕ್ರೀ ಪೇಜಾವರರೇ ಪ್ರತಿಸಲ ಹೀಗೆ ನೀವು ನಿಮ್ಮ ಪ್ರತಿಭಟನೆಯನ್ನು



ಮುಂದೂಡ್ತಾ ಇದ್ದೀರಿ?" ಅಂತಾ ಕೇಳಿದರೆ, "ಈ ಸಲ ನನಗೆ ಎಂ.ಪಿ. ನಳಿನ್‌ಕುಮಾರ್ ಕಟೀಲ್ ಭರವಸೆ ಇತ್ತಿದ್ದಾರೆ, ಭೂಸ್ವಾಧೀನ ತಡೆಯುವುದಾಗಿ ಹೇಳಿದ್ದಾರೆ. ಈ ವಿಶ್ವಾಸದಿಂದ ಉಪವಾಸವನ್ನು ಒಂದು ತಿಂಗಳ ಮುಂದೂಡ್ತಾ ಇದ್ದೀನಿ" ಎಂದು ಹುಚ್ಚುಹುಚ್ಚಾಗಿ ಮಾತಾಡಿದ್ದಾರೆ. "ಎಂ.ಪಿ. ನಳಿನ್‌ಕುಮಾರ್ ಕಟೀಲನ ಪಾರ್ಟಿಯೇ ಅದನ್ನು ಮಾಡ್ತಾ ಇದೆಯಲ್ಲ" ಎಂದರೆ, 'ನಾನು ದೆಹಲಿಗೆ ಹೋದಾಗ, ಕೇಂದ್ರ ಸಚಿವ ಆಸ್ಕರ್ ಫರ್ನಾಂಡಿಸ್ SEZ ವಿರೋಧಿಸಬೇಡಿ ಅಂತಾ ಹೇಳವ್ರೆ' ಎಂದು ತಲೆಬುಡವಿಲ್ಲದ ಗುಳಿಗೆ ಉರುಳಿಸುತ್ತಾರೆ. ಮಾಜಿ ಶಾಸಕ ವಿನಯಕುಮಾರ್ ಶೆಟ್ಟಿಯೂ ಈ ವಿಷಯವಾಗಿ ಮಾತಾಡೋಣ ಅಂದಿದ್ದಾರಂತೆ. ಅಷ್ಟೇ ಅಲ್ಲ, ಐದು ಸಾವಿರ ಎಕರೆ ಬದಲು ನಾಲ್ಕು ಸಾವಿರ ಎಕರೆ ಭೂಮಿಯನ್ನು ಮಾತ್ರ ವಶಪಡಿಸಿಕೊಳ್ತೀವಿ ಬಿಡಿ ಅಂತಾ ವಿ.ಎಸ್. ಆಚಾರ್ಯ ಹೇಳಿದ್ದೂ ಕೂಡಾ ಪೇಜಾವರರು ಉಪವಾಸ ಮುಂದೂಡಲು ಕಾರಣವಂತೆ!

"ಅಲ್ರೀ, ಮೊದ್ಲಿಂದ ಈ ರಾಜಕಾರಣಿಗಳು ಇಂತಹ ಸುಳ್ಳು ಆಶ್ವಾಸನೆಗಳನ್ನು ಕೊಡ್ತಾನೇ ಇದ್ದಾರೆ. ನೀವು ಅದನ್ನೆಲ್ಲ ಹೇಗೆ ನಂಬ್ತೀರಿ" ಎಂದು ಪ್ರಶ್ನಿಸಿದಾಗ ಪೇಜಾವರರ ಅಸಲಿಮುಖ ಬಯಲಾಗತೊಡಗುತ್ತದೆ; ಅವರು ಎಸ್‌ಇಜೆಡ್ ಪರವೇ ಇರುವ ಆಸಾಮಿ ಎಂಬ ಸತ್ಯ ಹೊರಬರತೊಡಗುತ್ತದೆ. "ಮಾಜಿ ಶಾಸಕ ವಿನಯ್ ಶೆಟ್ಟಿ ಮತ್ತು ಕೇಂದ್ರ ಸಚಿವ ಫರ್ನಾಂಡಿಸ್ ಹೇಳಿರುವ ಪ್ರಕಾರ ಪೆರ್ಮುಡೆ, ಕುತ್ತೆತ್ತೂರು ಮತ್ತು ಬಜ್ಪೆಗಳಲ್ಲಿ ಕೃಷಿಯಿಂದ ಲಾಭ ಬರ್‍ತಾ ಇಲ್ಲ, ಎರಡು ಬೆಳೆ ಬೆಳೆಯೋದಕ್ಕೆ ಅಗತ್ಯವಾದ ನೀರು ಇಲ್ಲದಿರೋದು, ಮೂರನೇ ಬೆಳೆ ತೃಪ್ತಿಕರವಾಗಿ ಬೆಳೆಯದಿರೋದು ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿರೋದರಿಂದ ಅಲ್ಲಿ ಕೃಷಿ ಮಾಡೋದು ವೇಸ್ಟು" ಎಂದು ಬಹುರಾಷ್ಟ್ರೀಯ ಕಂಪನಿಗಳ ವಕ್ತಾರನಂತೆ ವಿಶ್ಲೇಷಣೆಗಿಳಿಯುತ್ತಾರೆ ಸ್ವಾಮಿಗಳು.


ದೇಶದ ಸಮಸ್ಯೆಗಳ ಪರಿಹಾರಕ್ಕೆ ಹಿಂದೆಲ್ಲ ಸಮಾಜೋತ್ಸವ ಮಾಡಿದ ಸ್ವಾಮಿಗಳು ಎಸ್‌ಇಜೆಡ್ ವಿರುದ್ಧ ಅಂತಾ ಉತ್ಸವ ಮಾಡಲ್ಲ...

ಗೊತ್ತಾಯಿತಲ್ಲ, ಈ ಸ್ವಾಮಿ ಎಂದೆಂದಿಗೂ ಪ್ರಭುತ್ವದ ಪರ. ... ಪರ. ಈತ ರೈತರ ಪರ ಎಂಬಂತೆ ಶೋ ಕೊಡುತ್ತಿದ್ದಾರಷ್ಟೇ.


He is hungry for publicity ಅಷ್ಟೇ!

● ಮುಬಾರಕ್ ಅಹಮದ್

ಬಿಜೆಪಿಗಳಿಗೆ ಬಲಿಯಾದ ಮಹಿಳೆಯರು







...ಮಾತೆ, ಮಾತೆ... ಎನ್ನುತ್ತಲೇ ಬಿಜೆಪಿ ರಾಜಕಾರಣಿಗಳು ಬಲಿತೆಗೆದುಕೊಳ್ಳುತ್ತಿರುವ ಮಹಿಳೆಯರ ಸಂಖ್ಯೆ ಬೆಳೆಯುತ್ತಲೇ ಇದೆ. ...ಳ್ಳಾರಿಯ ಪದ್ಮಾವತಿ ಪ್ರಕರಣ ಇದಕ್ಕೊಂದು ಲೇಟೆಸ್ಟ್ ಉದಾಹರಣೆಯಾಗಿದೆ. ಈ ಲಫಂಗರು ಕಳೆದ ಎರಡು ವರ್ಷಗಳಲ್ಲಿ ...ರುವ ಅನಾಹುತಗಳ ಪಟ್ಟಿ ಇಲ್ಲಿದೆ.

...ಪದ್ಮಪ್ರಿಯಾ: ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ಟನ ಪತ್ನಿ ಪದ್ಮಪ್ರಿಯಾ ತನ್ನ ಗಂಡನ ಲಂಪಟತನ ಸಹಿಸಲಾಗದೇ ...ಬಿಟ್ಟರು. ಆದರೂ ಬಿಡದೆ ಈಕೆಯ ಬೆನ್ನುಹತ್ತಿ ಹೋದ ರಘುಪತಿ ಭಟ್ಟ, ಸುನೀಲ್‌ಕುಮಾರ್ ಹಾಗೂ ರಾಜ್ಯ ಪೊಲೀಸರು ...ವತಿಗೆ ದೆಹಲಿಯಲ್ಲಿ 'ನೇಣು' ಹಾಕಿಸಿ ಬಂದರು.

...ಮೈತ್ರಾದೇವಿ: ಮುಖ್ಯಮಂತ್ರಿ ಯಡಿಯೂರಪ್ಪನ ಧರ್ಮಪತ್ನಿ, ಶಿವಮೊಗ್ಗದ ತಮ್ಮ ಮನೆಯಲ್ಲೇ ಅನುಮಾನಸ್ಪದವಾಗಿ ಸಾವಿಗೀಡಾದರು.

...ಜಯಲಕ್ಷ್ಮಿ: ಹೊನ್ನಾಳಿ ಬಿಜೆಪಿ ಶಾಸಕ ರೇಣುಕಾಚಾರ್ಯನ ಬಲಿಪಶು. ಇವನ ಲಂಪಟತನ ಜಗಜ್ಜಾಹೀರಾದ ಮೇಲೂ ಅಬಕಾರಿ ...ತ್ರಿ ಮಾಡಿ RSS ನವರು ತಮ್ಮ ಅಯೋಗ್ಯತೆ ಎಷ್ಟೆಂಬುದನ್ನು ತೋರಿಸಿಕೊಟ್ಟಿದ್ದಾರೆ.


...ಮಂಗಳೂರು ಅಂಬೆ ಮಹಿಳೆ: ಮಂಗಳೂರಿನ ಕುಪ್ಪೆಪದವ್ವನ ಶ್ರೀರಾಮ ಸೇನಾ ನಾಯಕ ದುಗ್ಗಪ್ಪನ ಕಾಮತೃಷೆಗೆ ಬಲಿಯಾದ ...ಕ ಯುವತಿ.

...ಪ್ರಮೀಳಾ ರೆಡ್ಡಿ: ನೆಲಮಂಗಲ ವಾಸಿ ರಾಮಕೃಷ್ಣ ಎಂಬಾತ ರಾಜ್ಯ ಬಿಜೆಪಿ ಎಸ್‌ಸಿ ಎಸ್‌ಟಿ ವಿಭಾಗದ ಪ್ರಧಾನ ಕಾರ್ಯದರ್ಶಿ. ... ಮೊನ್ನೆ ತನ್ನ ಹೆಂಡತಿಯ ಆಸ್ತಿ ಲಪಟಾಯಿಸಲು ತಾನೇ ಸುಪಾರಿ ನೀಡಿ ಪ್ರಮೀಳಾ ರೆಡ್ಡಿಯನ್ನು ಕೊಲೆ ಮಾಡಿಸಿದ್ದಾನೆ.

...ಪದ್ಮಾವತಿ ಯಾದವ್: ಬಳ್ಳಾರಿ ಮಹಾನಗರ ಪಾಲಿಕೆಯ ಬಿಜೆಪಿ ಸದಸ್ಯೆ, ಜಿಲ್ಲಾ ಬಿಜೆಪಿಯ ಒಬ್ಬ ಲಂಪಟನಿಂದಾಗಿ ಈಗ ...ೀಡಾಗಿದ್ದಾಳೆ.


...ಪಟ್ಟಿಗೆ ಇನ್ನು ಅನೇಕರು ಸೇರ್ಪಡೆಯಾದರೂ ಆಶ್ಚರ್ಯವಿಲ್ಲ.

ಉತ್ತರ ಕನ್ನಡ: ಅದಿರು ಲಾರಿ ಮಾಫಿಯಾದ ನೆತ್ತರು ದಾಹ



ನಿಮಗೆ ಮರೆತಿರಲಿಕ್ಕಿಲ್ಲ!

ಬಳ್ಳಾರಿ-ಸಂಡೂರು-ಹೊಸಪೇಟೆಯಿಂದ ಮ್ಯಾಂಗನೀಸ್ ಅದಿರು ಹೊತ್ತುಕೊಂಡು ಕರಾವಳಿಯತ್ತ ಹೋಗುವ ಲಾರಿಗಳಿಗೆ ತೆರಿಗೆ ವಿಧಿಸಲು ಸಿಎಂ ಯಡ್ಡಿ ನಿರ್ಧರಿಸಿದಾಗ ಮಂತ್ರಿದ್ವಯರಾದ ರೆಡ್ಡಿ ಬ್ರದರ್ಸ್ ಬಳಗ ಸರ್ಕಾರವನ್ನೇ ಬುಡಮೇಲು ಮಾಡಲು ರೆಡಿಯಾಗಿದ್ದರಲ್ಲವೇ? ಅದಿರು ಅವ್ಯವಹಾರದಲ್ಲಿರುವ ವಿವಿಧ ಮಾಫಿಯಾದಲ್ಲಿ ಲಾರಿ ಮಾಫಿಯಾ ಇದೆಯಲ್ಲ ಅದು ಘೋರ ಅನಾಹುತಕಾರಿ! ಈ ಮಾಫಿಯಾಕ್ಕೆ ನರ ನೆತ್ತರು ದಾಹ!!



ಕಾರವಾರದ ಬೈತಕೋಲ್, ಅಂಕೋಲದ ಬೇಲೇಕೇರಿ ಮತ್ತು ಮಂಗಳೂರಿನ ಪಣಂಬೂರು ಬಂದರಿನತ್ತ ಇರುವೆ ಸಾಲಿನಂತೆ ಬಳ್ಳಾರಿಯಿಂದ ಸಾಗಿ ಬರುವ ಅದಿರು ತುಂಬಿದ ಲಾರಿಗಳು ರಸ್ತೆಯುದ್ದಕ್ಕೂ ಮಾಡುವ ಅವಾಂತರ-ಅನಾಹುತ-ಆಘಾತಕ್ಕೆ ಲೆಕ್ಕವೇ ಇಲ್ಲ. ದೊಡ್ಡ ಮೊತ್ತದ ಲಾರಿ ಬಾಡಿಗೆ ಆಸೆಗೆ ಜಿದ್ದಿಗೆ ಬಿದ್ದಂತೆ ಆರ್ಭಟಿಸುತ್ತಾ ಓಡುವ ಈ ಸಾವಿರಾರು ಲಾರಿಗಳು ಉತ್ತರಕನ್ನಡವನ್ನು ಸಾಕ್ಷಾತ್ ರೌರವ ನರಕ ಮಾಡಿಬಿಟ್ಟಿವೆ. ಪ್ರತಿದಿನ ಸರಾಸರಿ ನಾಲ್ಕಾರು ನರಬಲಿ ಪಡೆಯುವ ಅದಿರು ಲಾರಿಗಳು ಕನಿಷ್ಠ ಆರೆಂಟು ಮಂದಿಯ ಅಂಗ ಊನ ಮಾಡುತ್ತಿರುವುದು ಜಿಲ್ಲೆಯ ನೆಮ್ಮದಿ ನಾಶಮಾಡಿಬಿಟ್ಟಿವೆ.

ಅದಿರು ಟ್ರಾನ್ಸ್‌ಪೋರ್ಟ್ ಮಾಫಿಯಾ ದೊರೆಗಳು ಮೀಸೆ ಮೂಡದ ಹುಡುಗರನ್ನೆಲ್ಲ ಡ್ರೈವರ್ ಮಾಡಿಕೊಂಡಿದ್ದಾರೆ. ಈ ಪಡ್ಡೆಗಳು ತಮ್ಮ ಜೀವ ಒತ್ತೆಯಿಟ್ಟು ಸ್ಪರ್ಧೆಗೆ ಬಿದ್ದಿವೆಯಷ್ಟೇ ಅಲ್ಲ, ನಿಷ್ಪಾಪಿಗಳ ಕೊಂದೆಸೆಯುತ್ತಿದ್ದಾರೆ. ಯಾರು ಮೊದಲು ಕರಾವಳಿ ತಲುಪಿ ಅದಿರು ಖಾಲಿ ಮಾಡಿ ಮತ್ತೆ ಬಳ್ಳಾರಿ ಗಣಿಗಳ ತಲುಪಿ ಲೋಡ್ ಮಾಡಿಕೊಂಡು ಹೊರಡುತ್ತಾರೋ ಎಂಬ ಪೈಪೋಟಿ 'ಆಟ' ಲಾರಿ ಮಾಫಿಯಾ ಆಡುತ್ತಿದೆ. ಲಾರಿ ಮಾಫಿಯಾದ ನೆತ್ತರದೋಕುಳಿಯ ಧನದಾಹದಿಂದ ರಾಷ್ಟ್ರೀಯ ಹೆದ್ದಾರಿ 63 ಹಾದುಹೋಗುವ ಉತ್ತರಕನ್ನಡದ ಯಲ್ಲಾಪುರ ಮತ್ತು ಅಂಕೋಲಾ ತಾಲ್ಲೂಕುಗಳು ದೊಡ್ಡ ಗಂಡಾಂತರಕ್ಕೆ ಸಿಲುಕಿ ಒದ್ದಾಡುತ್ತಿವೆ...

ಬಳ್ಳಾರಿ ಜಿಲ್ಲೆಯ ಗಣಿಗಳಿಂದ ಪ್ರತಿದಿನ ಹತ್ತು ಸಾವಿರದಷ್ಟು ಅದಿರು ತುಂಬಿದ ಲಾರಿಗಳು ಕಾರವಾರ-ಅಂಕೋಲಾ-ಮಂಗಳೂರು ಮತ್ತು ಆಂಧ್ರಪ್ರದೇಶದ ಬಂದರುಗಳತ್ತ ಸಾಗುತ್ತವೆ. ಇದರಲ್ಲಿ ಐದು ಸಾವಿರಕ್ಕೂ ಹೆಚ್ಚು ಲಾರಿಗಳು ಉತ್ತರಕನ್ನಡದ ಎರಡು ಬಂದರುಗಳಿಗೆ ಬರುತ್ತವೆ. ಅಷ್ಟೇ ಪ್ರಮಾಣದ ಲಾರಿಗಳು ಮರಳಿ ಗಣಿಗಳತ್ತ ಹೋಗುತ್ತವೆ. ಅಂದರೆ ದಿನಕ್ಕೆ 10 ಸಾವಿರ ಅತಿ ವೇಗವಾಗಿ ಚಲಿಸುವ ಅದಿರು ಲಾರಿಗಳು ರಾಷ್ಟ್ರೀಯ ಹೆದ್ದಾರಿ 63ರ ಮೇಲೆ ಓಡಾಡುತ್ತವೆಂದಾಯ್ತು, ಇನ್ನಿತರ ಸರಕು ಸಾಗಾಣಿಕೆ ಲಾರಿ, ಬಸ್, ಸಣ್ಣ ವಾಹನಗಳೆಲ್ಲ ಸೇರಿ ಒಟ್ಟು 3 ಸಾವಿರದಷ್ಟು ವಾಹನ ಈ ಹೆದ್ದಾರಿಯಲ್ಲಿ ಚಲಿಸುವ ಒತ್ತಡವಿದೆ.



ಅಲ್ಲಿಗೆ ಪ್ರತಿ ಒಂದೂವರೆ ಸೆಕೆಂಡಿಗೆ ಈ ಹದಿಮೂರು ಸಾವಿರ ವಾಹನಗಳಲ್ಲಿ ಒಂದು ಇನ್ನೊಂದಕ್ಕೆ ಮುಖಾಮುಖಿಯಾಗಬೇಕಾಗುತ್ತದೆ. ಇದು ಈ ದ್ವಿಪಥ ರಸ್ತೆಯ ಧಾರಣಾ ಸಾಮರ್ಥ್ಯಕ್ಕೆ ಮೀರಿದ ಭಾರ!! ಯಾವ ಶಿಸ್ತು, ಸಂಚಾರಿ ವ್ಯವಸ್ಥೆ ಇಲ್ಲದ ಈ ರಾಷ್ಟ್ರೀಯ ಹೆದ್ದಾರಿಯ ಮೇಲೆ ಮಿತಿಮೀರಿದ ವಾಹನಗಳ ಓಡಾಟದಿಂದ ದಿನಂಪ್ರತಿ ಒಂದಿಲ್ಲೊಂದು ಅಪಘಾತ, ಟ್ರಾಫಿಕ್ ಜಾಮ್, ಅದಿರು ಧೂಳು ಅವಾಂತರ, ಕೊನೆಗೆ ಲಾರಿ ಮಾಫಿಯಾದವರ ಮೇಲಾಟದಿಂದಾಗುವ ಮಾರಾಮಾರಿ ರಾ.ಹೆ.63 ನಿತ್ಯ 'ಕರ್ಮ'ದಂತಾಗಿ ಸ್ಥಳೀಯರು ಕಂಗಾಲಾಗಿ ಹೋಗಿದ್ದಾರೆ.

ಇದಕ್ಕೆಲ್ಲ ಕಾರಣ 'ನಕಲಿ ಲಾರಿ ಪರ್ಮಿಟ್'. ಆಳುವವರು, ಅಧಿಕಾರಿಗಳು, ಅದಿರು ಧಣಿಗಳು ಸೇರಿ ಕಟ್ಟಿಕೊಂಡಿರುವ ಟ್ರಾನ್ಸ್‌ಪೋರ್ಟ್ ಮಾಫಿಯಾದ ಖೋಟಾ ಪರ್ಮಿಟ್‌ನಿಂದ ದಿನವೊಂದಕ್ಕೆ ಒಂದು ಕೋಟಿ ರಾಜಧನ-ತೆರಿಗೆ ಬೊಕ್ಕಸಕ್ಕೆ ಹಾನಿಯಾಗುತ್ತಿದೆ. ಕಟ್ಟುನಿಟ್ಟಿನ ಪರ್ಮಿಟ್ ನೀತಿ ಪಾಲಿಸಿದರೆ ಎನ್‌ಎಚ್ 63ರ ಮೇಲೆ ಓಡಾಡುವ ಅದಿರು ಲಾರಿಗಳ ಸಂಖ್ಯೆ ದಿನಕ್ಕೆ ಒಂದೂವರೆ ಸಾವಿರ ಮೀರದು! ಕಾರವಾರ-ಅಂಕೋಲಗಳಿಗೆ ಬರುವ ಅದಿರು ಲಾರಿಗಳಲ್ಲಿ ಶೇಕಡಾ 90ರಷ್ಟು ಲಾರಿಗಳಿಗೆ ಅದಿರು ಸಾಗಿಸುವ ಪರ್ಮಿಟ್ಟೇ ಇಲ್ಲ.

ಅದಿರನ್ನು ದಾಸ್ತಾನು ಕೇಂದ್ರದಿಂದ ಅಥವಾ ಗಣಿಯಿಂದ ಲಾರಿಗೆ ತುಂಬಿ ಸಾಗಿಸಲು ಭೂ ಮತ್ತು ಗಣಿ ವಿಜ್ಞಾನ ಇಲಾಖೆಯ ಅನುಮತಿಬೇಕು. ದಾಸ್ತಾನುದಾರರು ಅಥವಾ ಗಣಿ ಧಣಿಗಳು ತಾವು ಸಾಗಿಸುವ ಅದಿರಿನ ಪಕ್ಕಾ ಲೆಕ್ಕ ಗಣಿ ವಿಜ್ಞಾನ ಇಲಾಖೆಗೆ ಕೊಡಬೇಕು. ಸರ್ಕಾರ ಟನ್ ಪ್ರಮಾಣದಲ್ಲಿ ತೆರಿಗೆ-ರಾಜಧನ ವಿಧಿಸಿ ಟ್ರಿಪ್‌ಶೀಟ್ ಉದ್ಯಮಿಗಳಿಗೆ ಕೊಡುತ್ತದೆ. ಟ್ರಿಪ್‌ಶೀಟ್ ಎಂಬ ಪರ್ಮಿಟ್ ಲಾರಿ ಡ್ರೈವರ್ ಬಳಿ ಇರಬೇಕು. ದಾಸ್ತಾನು ಖಾಲಿಯಾದಾಗ ಮತ್ತೆ ಸೇಲ್ ಟ್ಯಾಕ್ಸ್ ತುಂಬಿ ಪರ್ಮಿಟ್ ಪಡೆಯಬೇಕು.

ಇಂಥ ಅಧಿಕೃತ ಕಾನೂನುಬದ್ಧ ಟ್ರಿಪ್‌ಶೀಟ್ ಬಳ್ಳಾರಿಯಿಂದ ಬರುವ ಶೇಕಡ 10 ಲಾರಿಗಳಿಗಷ್ಟೇ ಇರುತ್ತದೆ. ಉಳಿದ ಶೇ.90 ಲಾರಿಗಳಲ್ಲಿರುವುದು ಆಂಧ್ರದಿಂದ ತಂದ ಸರಕುಗಳ ಸಾಗಾಣಿಕಾ ಪ್ರಮಾಣ ಪತ್ರವಷ್ಟೇ. ಇದನ್ನೇ ಅದಿರು ಸಾಗಾಣಿಕೆ ಪರ್ಮಿಟ್ಟಾಗಿ ಬಳಸಲು ಅಧಿಕಾರಿಗಳು ಆಳುವ ಖೂಳರ ನಿರ್ದೇಶನದಂತೆ ಅವಕಾಶ ಕಲ್ಪಿಸಿದ್ದಾರೆ. ಇದೊಂದು ಹಗಲು ದರೋಡೆ; ಜತೆಗೆ ಜನಜೀವನ ಅಸ್ತವ್ಯಸ್ತ ಮಾಡುವ ಹೆದ್ದಾರಿಗಳನ್ನು ಬಲಿಪೀಠ ಮಾಡುವ ಬರ್ಬರ ಪಾತಕ!

ಮಂತ್ರಿ ರೆಡ್ಡಿ ಬ್ರದರ್ಸ್ ಕೃಪಾಕಟಾಕ್ಷದಿಂದಲೇ ಈ ಅಕ್ರಮ-ಅನ್ಯಾಯ ನಿರಾತಂಕವಾಗಿ ಸಾಗಲು ಸಾಧ್ಯವಾಗಿದೆ. ರಾಜಧನ ತುಂಬದೇ ನೇರ ಗಣಿಯಿಂದಲೇ ಅದಿರು ಲೋಡ್ ಮಾಡಿ ಬಂದರುಗಳಿಗೆ ಕಳುಹಿಸಲಾಗುತ್ತಿದೆ. ಕೇಂದ್ರ ತನಿಖಾ ತಂಡ ಬಳ್ಳಾರಿಗೆ ಬಂದಾಗ ನಕಲಿ ಪರ್ಮಿಟ್ ಲಾರಿಗಳ ಭರಾಟೆ ಎನ್‌ಎಚ್63ರ ಮೇಲೆ ಕಡಿಮೆಯಾಗಿತ್ತು. ಇದಿಷ್ಟೇ ಸಾಕು, ನಕಲಿ ಪರ್ಮಿಟ್ ಮಾಫಿಯಾದ ಹಿಂದೆ ರೆಡ್ಡೀಸ್‌ಗಳಿದ್ದಾರೆಂಬುದಕ್ಕೆ. ಈಗ ಮತ್ತೆ ನಕಲಿ ಪರ್ಮಿಟ್ ಲಾರಿಗಳದ್ದೇ ಹಾವಳಿ. ಹಾಗಂತ ಪರ್ಮಿಟ್ ಚೆಕ್ ಮಾಡುವ ದಮ್ ಉತ್ತರಕನ್ನಡದ ಡಿಸಿ ಚನ್ನಪ್ಪಗೌಡ ಮತ್ತು ಎಸ್ಪಿ ಗುಪ್ತಾಗಿಲ್ಲ! ಪಾಲು ಮಾತ್ರ ನಿಯತ್ತಿನಿಂದ ಪಡೆಯುತ್ತಿದ್ದಾರಷ್ಟೇ!

ಸರ್ಕಾರವನ್ನೇ ಉರುಳಿಸಬಲ್ಲ ರೆಡ್ಡಿ ಬಳಗವೇ ಈ ನಕಲಿ ಪರ್ಮಿಟ್ ಜಾಲದ ಜತೆಯಿರುವಾಗ ಪೊಕ್ಕು ಅಧಿಕಾರಿಗಳಾದರೂ ಏನು ಮಾಡಿಯಾರು ಪಾಪ?! ಹೀಗಾಗಿ ಪಾಲಿಗೆ ಬಂದಿದ್ದೇ ಪಂಚಾಮೃತವೆಂದು ಅದಿರು ವ್ಯವಹಾರದ ಪರಿಧಿಯಲ್ಲಿ ಬರುವ ಇಲಾಖೆಯ ಅಧಿಕಾರಿಗಳು ಸಿಕ್ಕಷ್ಟು ಪಾಲನ್ನು ಕಿಸೆಗಿಳಿಸಿ ನಿರುಮ್ಮಳವಾಗಿದ್ದಾರೆ. ಯಾರು ಬೇಕಿದ್ದರೂ ಸಾಯಲಿ, ಕೈ-ಕಾಲು ಕಳೆದುಕೊಳ್ಳಲಿ ನಮಗೇನು ಎಂಬ ದೃಢ



ನಿರ್ಧಾರಕ್ಕೆ ಬಂದಿರುವ ಅಧಿಕಾರಿಗಳು ಅಕ್ರಮ ಅದಿರು ಲಾರಿಗಳನ್ನು ನಿಯಂತ್ರಿಸುವ ಉಸಾಬರಿಗೆ ಹೋಗುತ್ತಿಲ್ಲ. ಸಾರಿಗೆ (ಆರ್‌ಟಿಓ), ಅರಣ್ಯ, ಭೂ ಮತ್ತು ಗಣಿ ವಿಜ್ಞಾನ, ಪೊಲೀಸ್, ತೆರಿಗೆ ಸಂಗ್ರಹಿಸುವ ಸಿಎಂ ಸುಪರ್ದಿಯಲ್ಲಿರುವ ಹಣಕಾಸು ಇಲಾಖೆಗಳ ಅಧಿಕಾರಿಗಳು ಪಾಲಿನ ಬೋರ್ಡ್ ಹಾಕಿಕೊಂಡು ಕೂತಿದ್ದಾರೆ.

ಈ ಎಲ್ಲಾ ಇಲಾಖೆಗಳು ಕಳ್ಳ ಗಣಿ ದಣಿಗಳಿಗೆ ಅಕ್ರಮವಾಗಿ ಅದಿರು ಕದ್ದು ಸಾಗಿಸಲು ಅನುಕೂಲವಾಗಲು 'ಸ್ಪೆಷಲ್ ಪರ್ಮಿಟ್ ಕಾರ್ಡ್'ಗಳನ್ನು ತಯಾರಿಸಿಕೊಟ್ಟಿದ್ದಾರೆ. ನಿಗದಿತ ಮಾಮೂಲು ಕೊಡುವ ಲಾರಿಗಳವರಿಗಷ್ಟೇ ಈ 'ಲೂಟಿಕಾರ್ಡ್' ಕೊಡಲಾಗಿದೆ. ಹೀಗಿರುವಾಗ ಎನ್‌ಎಚ್63, 17 ಮತ್ತು 207ರ ಮೇಲೆ ಓಡಾಡುವ ರಕ್ಕಸ ಅದಿರು ಲಾರಿಗಳ ಸಂಖ್ಯೆ ಕಡಿಮೆಯಾಗಲು ಸಾಧ್ಯವೇ ಇಲ್ಲ. ಯಡ್ಡಿ ಸರ್ಕಾರ ಇರುವತನಕ ಈ ಮೂರೂ ಹೈವೇಗಳ ಮೇಲೆ ಮಾರಣಹೋಮ ತಪ್ಪಿಸಲಿಕ್ಕಾಗದು!

ಯಡ್ಡಿಯ ಅಮಾನುಷ-ನಿರ್ಲಜ್ಜ ಕುರ್ಚಿ ಪ್ರೀತಿಗಾಗಿ ಪಾಪದ ಮಂದಿ ಬಲಿಯಾಗಬೇಕಾಗಿರುವುದು ಎಂಥ ದುರಂತ ಅಲ್ಲವೇ?

● ನಹುಶ

ಹೆಚ್ಚಾಗಲಿವೆ ಅದಿರು ಹಾವಳಿ

ಉತ್ತರಕನ್ನಡ ಅದಿರು ಲಾರಿ ಹಾವಳಿಯಿಂದ ಹೈರಾಣಾಗಿ ಹೋಗಿದೆ. ಕಾನೂನುಬಾಹಿರ ಅದಿರು ಲಾರಿಗಳ ನಿಯಂತ್ರಿಸಿ, ಕಟ್ಟುನಿಟ್ಟಿನ ಪರ್ಮಿಟ್ ವ್ಯವಸ್ಥೆ ಜಾರಿಗೊಳಿಸಿ ಎಂದು ಜಿಲ್ಲೆಯ ಜನ ಬಾಯಿಬಾಯಿ ಬಡಿದುಕೊಳ್ಳುತ್ತಿದ್ದಾರೆ. ರೋಸತ್ತು ಹೋಗಿರುವ ಜನ ಸರಣಿ ಪ್ರತಿಭಟನೆ ಮಾಡುತ್ತಿದ್ದಾರೆ. ಜಿಲ್ಲಾ ಮಂತ್ರಿ ಕಾಗೇರಿ ಮತ್ತವನ ಹೇತ್ಲಾಂಡಿ ಜಿಲ್ಲಾಡಳಿತದ ಸುಪೀರಿಯರ್‌ಗಳು ಸುಳ್ಳು-ಸುಳ್ಳೇ ಬೊಗಳುತ್ತಿದ್ದಾರೆ. ಗಣಿ ಮಾಫಿಯಾದ ಸಾಕುನಾಯಿಗಳಂತಾಗಿದ್ದಾರೆ.

ಈ ನಾಲಾಯಕ್ ಕಾಗೇರಿ "ಬಳ್ಳಾರಿಯಿಂದಲೇ ಪ್ರತಿದಿನ 1,500 ಲಾರಿ ಹೊರಡುವಂಥ ನಿಯಂತ್ರಣ ವ್ಯವಸ್ಥೆಗೆ ಸರ್ಕಾರ ಚಿಂತಿಸುತ್ತಿದೆ" ಎನ್ನುತ್ತಿದ್ದಾರೆ. ಇದು ಬರೀ ಬೊಗಳೇ. ಲಾರಿ ನಿಯಂತ್ರಣ ಆತನ ಸಿಎಂ ಯಡ್ಡಿಯಲ್ಲಿಲ್ಲ, ಬದಲಿಗೆ ಯಡ್ಡಿಯನ್ನೇ ಗಣಿ ಮಾಫಿಯಾದ ಕಿಂಗ್‌ಪಿನ್‌ಗಳಾದ ರೆಡ್ಡಿಗಳು ನಿಯಂತ್ರಿಸುತ್ತಿದ್ದಾರೆ. ಹೀಗಾಗಿ ಅದಿರು ಲಾರಿ ಸಂಖ್ಯೆ ಕಡಿಮೆಯಂತೂ ಆಗದು. ದುರಂತವೆಂದರೆ ಅದಿರು ಲಾರಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಕರಾಳ ಸಂಕೇತಗಳು ಗೋಚರಿಸುತ್ತಿವೆ.

ಅಂಕೋಲೆಯಲ್ಲ ಬೇಲೇಕೇರಿ ಬಂದರು ಪ್ರದೇಶದಲ್ಲಿ ಬೇಕಾಬಿಟ್ಟಿಯಾಗಿ ಜೆಟ್ಟಿ (ಬೋಟ್ ನಿಲ್ಲುವ ಧಕ್ಕೆ) ನಿರ್ಮಾಣಕ್ಕೆ ಯಡ್ಡಿ ಸರ್ಕಾರ ಅವಕಾಶ ಕೊಡುತ್ತಿದೆ. ಈಗಿರುವ ಮೂರ್‍ನಾಲ್ಕು ಜೆಟ್ಟಿ ಜತೆ ಇನ್ನೂ ಮೂರ್‍ನಾಲ್ಕು ಧಕ್ಕೆ ನಿರ್ಮಾಣ ಆಗುತ್ತಿವೆ. ಇದರಲ್ಲಿ ಮೀನಿಗಾರಿಕಾ ಮಂತ್ರಿ ಕಂ ಅದಿರು ಅವ್ಯವಹಾರಿ ಆನಂದ ಅಸ್ನೋಟಿಕರ್‌ದು ಒಂದು. ಬೇಲೇಕೇರಿಯ ಸಮುದ್ರ ಪ್ರದೇಶಕ್ಕೆ ಮಣ್ಣು ತುಂಬಿ ಕಂದಾಯ ಭೂಮಿ ಅತಿಕ್ರಮಿಸಿ ಹೊಸ-ಹೊಸ ಜೆಟ್ಟಿ ಕಟ್ಟುವ ಕಾರ್ಯಾಚರಣೆ ಧನವಂತ-ಪ್ರಭಾವಿ ಕಂಪೆನಿಗಳು ಶುರು ಮಾಡಿವೆ.

ಹೊಸ ಜೆಟ್ಟಿ ನಿರ್ಮಾಣವಾದರೆ ನಕಲಿ ಪರ್ಮಿಟ್ ಲಾರಿಗಳ ಓಡಾಟ ದುಪ್ಪಟ್ಟಾಗುತ್ತದೆ. ಈಗಿರುವ ಹೈವೇಗಳ ಧಾರಣಾ ಸಾಮರ್ಥ್ಯಕ್ಕೆ ಮೂರು ಪಟ್ಟು ಹೆಚ್ಚು ಅದಿರು ಲಾರಿ ಸಂಚಾರ ನಡೆದಿದೆ. ಹೊಸ ಜೆಟ್ಟಿ ನಿರ್ಮಾಣದಿಂದ ಮತ್ತೆ ರಕ್ಕಸ ಲಾರಿಗಳ ಓಡಾಟ ಒತ್ತಡ ಹೆಚ್ಚಾಗಿ ನೂರಾರು ಜನ ಬಲಿಯಾಗುವುದು ಖಂಡಿತ. ಗಣಿ ದಂಧೆಯ ಸೂತ್ರಧಾರರಾದ ರೆಡ್ಡಿಗಳೆದುರು ಮಂಡಿಯೂರಿ ಶರಣಾಗಿರುವ ಸಿಎಂ ಯಡ್ಡಿಯಿಂದ ಪ್ರಜೆಗಳ ರಕ್ಷಣೆ ಸಾಧ್ಯವೇ ಇಲ್ಲ. ಉತ್ತರಕನ್ನಡ ಮತ್ತು ಕರ್ನಾಟಕ ಕರಾವಳಿ ರೌರವ ನರಕವಾಗಲಿದೆ. ●


ನಕಲಿ ಪರ್ಮಿಟ್ ರೇಟ್

ಕೆಬ್ಬಿಣದ ಅದಿರನ್ನು ಕದ್ದು ವಿದೇಶಕ್ಕೆ ಸಾಗಿಸುವ ಹಗಲು ದರೋಡೆ ಸಾಕ್ಷಾತ್ ಮುಖ್ಯಮಂತ್ರಿಗಳ ಕೃಪಾಕಟಾಕ್ಷದಿಂದಲೇ ನಿರಾತಂಕವಾಗಿ ನಡೆದಿದೆ. ಖೋಟಾ ಪರ್ಮಿಟ್‌ನಲ್ಲಿ ಅದಿರನ್ನು ಸಾಗಿಸಲು ಅನುಕೂಲ ಮಾಡಿಕೊಟ್ಟಿರುವ ವಿವಿಧ ಇಲಾಖೆ ಅಧಿಕಾರಿಗಳಿಗೆ ಅದಿರು ಲಾರಿ ಮಾಫಿಯಾ ಅವರವರ ಯೋಗ್ಯತೆಗೆ ತಕ್ಕಂತೆ ಅಕ್ರಮ ಆಮದಾನಿ ಫಿಕ್ಸ್ ಮಾಡಿದೆ. ಇದು ಪ್ರತಿ ದಿನ ನಡೆಯುವ ಲಕ್ಷಗಳ ಲೂಟಿ ವ್ಯವಹಾರ.

ಆರ್‌ಟಿಓ ಇಲಾಖೆಗೆ ನಕಲಿ ಪರ್ಮಿಟ್ ಅದಿರು ಲಾರಿ ಪ್ರತಿ ತಿಂಗಳು 6500 ರೂ ಕೊಡುತ್ತಿದೆ. ಬಳ್ಳಾರಿಯಿಂದ ಕಾರವಾರವರೆಗಿನ ರಸ್ತೆಯಲ್ಲಿ ಸಿಗುವ ಪ್ರತಿ ಪೊಲೀಸ್ ಠಾಣೆಗೆ 300 ರೂ. ನಿಗದಿಪಡಿಸಲಾಗಿದೆ ಮತ್ತು ಇಲಾಖೆಗೆ ಪ್ರತಿ ಲಾರಿಯಿಂದ 50-100 ರೂ ಬಕ್ಷೀಸು. ಓವರ್ ಲೋಡ್ ಲಾರಿಗಳಾದರೆ ಸುಲಿಗೆ ಪ್ರಮಾಣ ಜಾಸ್ತಿ. ಇದರಲ್ಲಿ ಸಾರಿಗೆ ಮಂತ್ರಿ ಅಶೋಕ್, ಗೃಹ ಮಂತ್ರಿ ಡಾ. ಆಚಾರಿ, ಗಣಿ ಮಂತ್ರಿಗಳಿಗೆಲ್ಲ ಪಾಲಿದೆ.

ತೆರಿಗೆ ವಸೂಲಿ ಮಾಡುವ ಹಣಕಾಸು ಇಲಾಖೆ ಸಿಎಂ ಕೈಲಿದೆ. ಯಡ್ಡಿಗೆ ಕೋಟ್ಯಂತರ ರೂ ರಾಜಧನ, ತೆರಿಗೆ ವಂಚಿಸುವ ಗಣಿಧಣಿಗಳು ಸಿಎಂ ಕುರ್ಚಿಯನ್ನೇ ಇನಾಮಾಗಿ ಕೊಟ್ಟಿದ್ದಾರೆ. ಮಾಮೂಲಿ ಫಿಕ್ಸ್ ಮಾಡಿಕೊಳ್ಳದವರು ಅದಿರು ಸಾಗಿಸಲು ಸಾಧ್ಯವಾಗದಂತೆ ಈ ಮಾಫಿಯಾ ಗ್ಯಾಂಗ್ ಕಟ್ಟುನಿಟ್ಟಿನ ವ್ಯವಸ್ಥೆ ಮಾಡಿದೆ. ಮಂತ್ಲಿ ಕೊಡುವವರಿಗೆ ಪ್ರತಿ ಇಲಾಖೆಗಳು ಪ್ರತ್ಯೇಕ ಲೂಟಿ ಕಾರ್ಡ್ ಕೊಟ್ಟಿವೆ. ಈ ಕಾರ್ಡ್ ತೋರಿಸಿದರೆ ಲೂಟಿ ಸಲೀಸು.

ಬೆಕ್ಕಿಗೆ ಗಂಟೆ ಕಟ್ಟೋರು ಯಾರು? ●



ಬಾಗಲಕೋಟೆ-ಕುಡಚಿ ರೈಲು

ಶತಮಾನದ ಕನಸು ನನಸಾದೀತೆ?

ರೈಲ್ವೆ ಬಜೆಟ್ ಮಂಡನೆ ಹತ್ತಿರ ಬಂದಿದೆ. ಎಂದಿನಂತೆ ನಮ್ಮ ಸಂಸದ ಮಹಾಶಯರು ...ಲ್ಲಿ ಮುಳುಗಿ ರಾಜ್ಯಕ್ಕೆ ತರಬೇಕಾದ ರೈಲ್ವೆ ಯೋಜನೆಗಳನ್ನು ಮರೆತುಬಿಟ್ಟಿದ್ದಾರೆ.

... ಹೊತ್ತಲ್ಲೇ, ಕುಡಚಿ-ಬಾಗಲಕೋಟೆ ಹೊಸ ರೈಲುಮಾರ್ಗಕ್ಕಾಗಿ ಇಲ್ಲಿನ ಜನ ಅವಿರತ ...ರಾಟ ಆರಂಭಿಸಿದ್ದಾರೆ. ತಮ್ಮ ಧ್ವನಿಯನ್ನು ರಾಜ್ಯಪಾಲರ ಮೂಲಕ ರೈಲ್ವೆ ಸಚಿವರಿಗೆ ...ಸಿದ್ದಾರೆ. ಈ ರೈಲುಮಾರ್ಗದ ಬೇಡಿಕೆ ಇಂದು ನಿನ್ನೆಯದಲ್ಲ, ಇದು ಶತಮಾನದ ... 1920 ರಲ್ಲೇ ಬ್ರಿಟಿಷರು ಈ ರೈಲುಮಾರ್ಗದ ಸರ್ವೆ ಮಾಡಿದ್ದರು. ಇಲ್ಲಿರುವ ಖನಿಜ ...ತ್ತು ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಈ 120 ಕಿ.ಮೀ. ಉದ್ದದ ಮಾರ್ಗ ಅಗತ್ಯವಾಗಿತ್ತು, ...ನಡೆಯಿತಾದರೂ ಕೆಲಸ ಶುರು ಆಗಲಿಲ್ಲ, ಮುಂದೆ 1948 ರಲ್ಲಿ ಜಮುಖಂಡಿ ಸಂಸ್ಥಾನ ...ಗೊಳ್ಳುವಾಗ, ಆ ಸಂಸ್ಥಾನದ ಸಂಸ್ಥಾನಿಕ ಶ್ರೀಮಂತ ಪಟವರ್ಧನ್ ಅವರು ಈ ...ಮಾರ್ಗ ಆರಂಭಿಸಬೇಕೆಂಬ ಶರತ್ತು ಇಟ್ಟಿದ್ದರು. ಮುಂದೆ ಅಧಿಕಾರಸ್ಥರು ಈ ಶರತ್ತನ್ನೇ ... ಈ ಭಾಗಕ್ಕೆ ದ್ರೋಹ ಬಗೆದರು.

...993 ರಲ್ಲಿ ಕೇಂದ್ರ ಸಚಿವರಾಗಿದ್ದ ಸಿದ್ದು ನ್ಯಾಮಗೌಡರು ಈ ರೈಲ್ವೆ ಮಾರ್ಗದ ...ತ್ವವನ್ನು ಅಂದಿನ ರೈಲ್ವೆ ಸಚಿವ ಜಾಫರ್ ಶರೀಫರಿಗೆ ಮನದಟ್ಟು ಮಾಡಿದ್ದರು. ಜಾಫರ್ ... ಬಿಡುಗಡೆ ಮಾಡಿದ 50 ಲಕ್ಷ ರೂ. ನೆರವಿನಿಂದ ಹೊಸದಾಗಿ ಸರ್ವೆ ಮಾಡಲಾಗಿತ್ತು, ...110 ಕಿ.ಮೀ. ಮಾರ್ಗಕ್ಕೆ 168 ಕೋಟಿ ರೂ. ಅಂದಾಜು ಮಾಡಲಾಗಿತ್ತು, ಮತ್ತೆ ...ಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದ ಕೆಲಸ ನೆನೆಗುದಿಗೆ ಬಿದ್ದಿತು.

ಮಾರ್ಗದ ಮಹತ್ವ

...ಲ್ಲಿ ತೋಟಗಾರಿಕೆಯಿದೆ, ಖನಿಜ ಸಂಪತ್ತಿದೆ, ಕಬ್ಬು ಕಾರ್ಖಾನೆಗಳಿವೆ. ಮುಧೋಳ, ...ಲಿಂಗಪ್ಪ, ತೇರದಾಳ, ಹಾರೋಗೇರಿ, ಬಾಗಲಕೋಟೆ ಇತ್ಯಾದಿ ಪ್ರದೇಶಗಳೆಲ್ಲ ಕೃಷ್ಣಾ ...ಭಾ, ಮಲಪ್ರಭಾಗಳ ಕಾರಣದಿಂದ ಸಮೃದ್ಧವಾಗಿವೆ. ಪ್ರತಿನಿತ್ಯ ಇಲ್ಲಿ ಲಕ್ಷಾಂತರ ಟನ್ ...ಉತ್ಪತ್ತಿಯಾಗುತ್ತದೆ. ದಿನವೊಂದಕ್ಕೆ ಜಮುಖಂಡಿ ಶುಗರ್ಸ್ 3.5 ಸಾವಿರ ಟನ್ ಕಬ್ಬು ..., ಪ್ರಭುಲಿಂಗೇಶ್ವರ ಶುಗರ್ಸ್ 5 ಸಾವಿರ ಟನ್ ಕಬ್ಬು ಅರೆಯುತ್ತದೆ. ಹೀಗೆ ಹತ್ತಕ್ಕೂ ...ಕಾರ್ಖಾನೆಗಳು ದಿನಕ್ಕೆ ಸಾವಿರ ಟನ್‌ಗಟ್ಟಲೇ ಕಬ್ಬು ಅರೆಯುತ್ತವೆ. ಮುದ್ದಾಪೂರದ ಜೆ.ಕೆ. ...ಟ್ಸ್, ಯಾದವಾಡದ ದಾಲ್ಮಿಯಾ ಸಿಮೆಂಟ್ಸ್, ಬಾಗಲಕೋಟೆಯ ಕನೋರಿಯಾ ಸಿಮೆಂಟ್ಸ್ ... ಇಲ್ಲಿ ಹಲವಾರು ಸಿಮೆಂಟ್ ಕಾರ್ಖಾನೆಗಳಿವೆ. ಇಲ್ಲಿರುವ ಖನಿಜ ಸಂಪತ್ತು ಅಪಾರ. ...ಹರಣೆಗೆ ಪ್ರತಿದಿನ ಈ ಭಾಗದಿಂದ 8 ಸಾವಿರ ಟನ್ ಸುಣ್ಣದಕಲ್ಲನ್ನು ಸಾಂಗ್ಲಿ, ಮೀರಜ್‌ಗಳಿಗೆ ...ಸ್ತಾರೆ.


...ಮಖಂಡಿ, ಮುಧೋಳ, ಬೀಳಗಿ, ಬಾದಾಮಿ, ಕಲಾದಗಿಗಳಲ್ಲಿ ಬೆಳೆಯುವ ದಾಳಿಂಬೆ ... ದಕ್ಷಿಣ ಭಾರತದಲ್ಲೇ ಉತ್ಕೃಷ್ಟವಾದುದಾಗಿದೆ. ದಕ್ಷಿಣ ಭಾರತದ ಅತಿದೊಡ್ಡ ಬೆಲ್ಲದ ...ಕಟ್ಟೆ ಎನಿಸಿರುವ ಮಹಾಲಿಂಗಪುರ ಕೂಡಾ ಈ ರೈಲುಮಾರ್ಗದ ಮಧ್ಯದಲ್ಲೇ ಬರುತ್ತದೆ. ...ಗಿ, ಕಮತಗಿ, ಬಾದಾಮಿಗಳಲ್ಲಿ ಸಿಗುವ ಕಬ್ಬಿಣದ ಅದಿರನ್ನು ಸದ್ಯ ಲಾರಿಗಳ ಮೂಲಕವೇ ...ದವ ಅನಿವಾರ್ಯತೆಯಿದೆ. ಈ ಯೋಜಿತ ರೈಲುಮಾರ್ಗದಲ್ಲೇ ಬರುವ ಜಮಖಂಡಿ, ..., ಬನಹಟ್ಟಿಗಳ ನೇಕಾರರಿಗೂ ಈ ರೈಲುಮಾರ್ಗ ಅನುಕೂಲವಾಗಲಿದೆ.

ಮಹಾರಾಷ್ಟ್ರಕ್ಕೆ ಸುಲಭ ಸಂಪರ್ಕ

...ಮೊದಲು 110 ಕಿ.ಮೀ. ಮಾರ್ಗ ಗುರುತಿಸಲಾಗಿದ್ದು, ಈಗ ಅದನ್ನು 120 ಕಿ.ಮೀ. ...ಸಲು ಅಧ್ಯಯನ ವರದಿ ಹೇಳಿದೆ.

...ಗಾಗಲೇ ಇಲ್ಲಿ ಹುಬ್ಬಳ್ಳಿ-ಗದಗ-ಬಾಗಲಕೋಟೆ-ಬಿಜಾಪುರ-ಸೋಲಾಪುರ ಮಾರ್ಗವಿದೆ. ...ಂದು ಕಡೆ ಕುಡಚಿಯಿಂದ ರಾಯಭಾಗ ಮೂಲಕ ಮಹಾರಾಷ್ಟ್ರದ ಸಂಪರ್ಕವಿದೆ. ಈ ... ಮಧ್ಯೆ ಈ ಯೋಜಿತ ಕುಡಚಿ-ಬಾಗಲಕೋಟೆ ಮಾರ್ಗ ಸಂಪರ್ಕ ಕೊಂಡಿಯಾಗಿ, ...ಟಕ ಮಹಾರಾಷ್ಟ್ರಗಳ ಮಧ್ಯೆ ಸರಕು ಸಾಗಾಣಿಕೆ ವೆಚ್ಚ ಸಾಕಷ್ಟು ...ಯಾಗಲಿದೆ. ಜೊತೆಗೆ ಪ್ರಯಾಣಿಕರ ಸಂಚಾರ ವೆಚ್ಚವೂ ...ಯಾಗುತ್ತದೆ. ಸಣ್ಣ ಪ್ರಮಾಣದ ಆಹಾರ ಸಂಸ್ಕರಣಾ ...ಗಳನ್ನು ಸ್ಥಾಪಿಸಿದರೆ ನಿರುದ್ಯೋಗ ಸಮಸ್ಯೆಯೂ ಕೊಂಚ ...ಯಾಗಲಿದೆ.

...ಡಚಿ-ಬಾಗಲಕೋಟೆ ರೈಲುಮಾರ್ಗ ಹೋರಾಟ ... ಈ ಸಲ ಪಟ್ಟು ಹಿಡಿದು ತಯಾರಾಗಿ ನಿಂತಿದೆ. ... ಪಕ್ಷಗಳ ಜನಪ್ರತಿನಿಧಿಗಳು ಈ ಹೋರಾಟಕ್ಕೆ ...ವಾಗಿ ನಿಂತಿದ್ದರೆ, ಬಿಜೆಪಿಯ ಭಂಡರು ತಮ್ಮ ಹಲ್ಕಾ ಕೆಲಸಗಳಲ್ಲಿ ...ಗಿ ಹೋಗಿದ್ದಾರೆ.



...ಮಹಾಲಿಂಗಪ್ಪ ಆಲಬಾಳ

ಭೂಸ್ವಾಧೀನದ ಭೂತ

...ಡಚಿ-ಬಾಗಲಕೋಟೆ ಯೋಜಿತ ರೈಲುಮಾರ್ಗದಲ್ಲಿ ಬರುವ ಮುಧೋಳದ ಸುತ್ತಮುತ್ತ ... ಎಕರೆ ಫಲವತ್ತಾದ ಭೂಮಿಯನ್ನು ಕೈಗಾರಿಕಾಭಿವೃದ್ಧಿಗಾಗಿ ವಶಪಡಿಸಿಕೊಳ್ಳಲು ಮುತ್ತಾಳ ... ಸರ್ಕಾರ ಮುಂದಾಗಿದೆ. ಈಗಾಗಲೇ ಇದರ ವಿರುದ್ಧ ಧ್ವನಿ ಎತ್ತಿರುವ ರೈತರು ...ಗೆರೆ ಮಾದರಿಯ ಹೋರಾಟವನ್ನು ರೂಪಿಸುತ್ತಿದ್ದಾರೆ.

...ಳಗಾವಿ ಸಂಸದ ಚಡ್ಡಿ ಸುರೇಶ್ ಅಂಗಡಿ, ಬಾಗಲಕೋಟೆಯ ಇನ್ನೊಬ್ಬ ಚಡ್ಡಿ ಸಂಸದ ...ದರ ಹೊಸ ರೈಲು ಮಾರ್ಗ ಹಾಕಿಸಿ ಜನಾಭಿವೃದ್ಧಿ ಮಾಡುವ ಬದಲು, ರೈತರ ...ಗೇ ಬಾಯಿ ಹಾಕಿ ಕುಳಿತಿದ್ದಾರೆ. ಮಂತ್ರಿಗಳಾದ ಕಾರಜೋಳ, ನಿರಾಣಿ ಮುಚ್ಚಿಕೊಂಡು ...ದ್ದಾರೆ.


...ತ್ತೀಚೆಗಷ್ಟೇ ಬಿಜಾಪುರ ಜಿಲ್ಲೆಯ ಕೊಲ್ಹಾರದ ಬಳಿ ಮಿತ್ತಲ್‌ಗೆ ನಾಲ್ಕು ಸಾವಿರ ಎಕರೆ ... ಕೊಡಲು ಹೊರಟಿದ್ದರು. ಈಗೇನೋ ಮಿತ್ತಲ್ ಬಳ್ಳಾರಿಯ ಕುಡತಿನಿಗೆ ಹೋಗಿದ್ದಾನೆ. ... ಕೊಲ್ಹಾರದ ನಾಲ್ಕು ಸಾವಿರ ಎಕರೆ ಭೂಮಿಯ ಮೇಲೆ ಸರ್ಕಾರದ ಕಣ್ಣು ಇದ್ದೇ ... ರೈತರು ರೊಚ್ಚಿಗೇಳುವ ದಿನ ದೂರವಿಲ್ಲ. ●

ಚಾಮರಾಜನಗರ: ಗ್ರಾಮ ಪಂಚಾಯ್ತಿ ಮೆಂಬರ್ ಲಕ್ಷ್ಮಣ ಶೆಟ್ಟಿ ಕೊಲೆ

ಶಾಸಕ ಪುಟ್ಟರಂಗಶೆಟ್ಟಿ ಮಸಲತ್ತು?

ಆಗಾಗ ದಲಿತರಿಗೆ ಗ್ರಾಮದಿಂದ ಬಹಿಷ್ಕಾರ ಹಾಕುವ ಪಾಳೆಗಾರಿಕೆ ಪ್ರವೃತ್ತಿ ತಣ್ಣಗೆ ಜರುಗುತ್ತಲೇ ಇರುತ್ತದೆ. ಅದನ್ನು ವಿರೋಧಿಸಿ ದಲಿತರ ಸ್ವಾತಂತ್ರ್ಯ ಎತ್ತಿಹಿಡಿಯಬೇಕಾದ ಗ್ರಾಮ ಪಂಚಾಯತಿ ಸದಸ್ಯರು ಮೇಲ್ಜಾತಿಗಳ ಒತ್ತಡದಲ್ಲೇ ಇರುವುದರಿಂದ ದಲಿತರಿಗೆ ನ್ಯಾಯ ಸಿಗುವುದೇ ಕಷ್ಟ.

ಚಾಮರಾಜನಗರ ತಾಲ್ಲೂಕಿನಲ್ಲಿ ಒಬ್ಬ ಗ್ರಾಮ ಪಂಚಾಯ್ತಿ ಸದಸ್ಯನಿಗೇ ಬಹಿಷ್ಕಾರ ಹಾಕಿದರು. ಆತನೇನೂ ದಲಿತನಲ್ಲ, ಶೆಟ್ಟಿ ಪಂಗಡದ ಲಕ್ಷ್ಮಣ ಶೆಟ್ಟಿ. ಬಹಿಷ್ಕಾರ ಒಪ್ಪಿಕೊಂಡು ಊರು ಬಿಟ್ಟರೂ ಆತನಿಗೆ ಕಿರುಕುಳ ತಪ್ಪಲಿಲ್ಲ, ಕೊನೆಗಾತ ಗ್ರಾಮಸ್ಥರಿಗೆ ನಿವೇದನೆ ಮಾಡಿಕೊಂಡು ತನ್ನೂರಿಗೆ ವಾಪಸ್ ಬರಲು ಬಿಡಿ ಎಂದಾಗ ಆತನ ಕೊಲೆಯೇ ಆಗಿಹೋಯ್ತು. ಕೊಂದವನು ರಾಜಕೀಯ ಪುಢಾರಿ ಶಂಕರ ಶೆಟ್ಟಿ. ಈತ ಚಾಮರಾಜನಗರ ತಾಲ್ಲೂಕು ಎಂಎಲ್‌ಎ ಪುಟ್ಟರಂಗ ಶೆಟ್ಟಿ ಎಂಬ ಚಿಲ್ರೆ ಮನುಷ್ಯನ ಚಿಲ್ರೆ ಶಿಷ್ಯ.




ಲಕ್ಷ್ಮಣಶೆಟ್ಟಿ


ಚಾಮರಾಜನಗರ ತಾಲ್ಲೂಕಿನ ಮೂಡಲಮೋಳೆ ಗ್ರಾಮ ಪಂಚಾಯ್ತಿ ಸದಸ್ಯ ಲಕ್ಷ್ಮಣ ಶೆಟ್ಟಿಯೇ ಕೊಲೆಯಾದ ದುರ್ದೈವಿ. ಜನವರಿ 20 ರಂದು ಅದೇ ಗ್ರಾಮದ ಶಂಕರ ಶೆಟ್ಟಿಯ ಕುಟುಂಬದವರು ಮಾಡಿದ ಸಾಮೂಹಿಕ ಹಲ್ಲೆಯ ಕಾರಣದಿಂದ 24 ರಂದು ಲಕ್ಷ್ಮಣ ಶೆಟ್ಟಿ ಮೃತಪಟ್ಟ. ಕೊಲೆಗಡುಕರು ಯಾರೆಂದು ಗೊತ್ತಿದ್ದರೂ ಸರ್ಕಲ್ ಇನ್ಸ್‌ಪೆಕ್ಟರ್ ಪ್ರತಾಪ್ ರೆಡ್ಡಿ ಶಂಕರ ಶೆಟ್ಟಿಯ ಕುಟುಂಬದವರನ್ನು ಮುಟ್ಟುತ್ತಿಲ್ಲ, ಕಾರಣ ಇಷ್ಟೇ: ಶಂಕರ ಶೆಟ್ಟಿ ಎಂಬ ಫ್ಯೂಡಲ್ ರಾಜಕಾರಣಿಯ ಬೆನ್ನಿಗೆ ಶಾಸಕ ಪುಟ್ಟರಂಗ ಶೆಟ್ಟಿಯೇ ನಿಂತುಬಿಟ್ಟಿದ್ದಾನೆ.

ಕೆಲಸವಂತನಿಗೆ ಬಹಿಷ್ಕಾರ!

ಚಾಮರಾಜನಗರದ ಕೆಲವು ಹಳ್ಳಿಗಳಲ್ಲಿ ಫ್ಯೂಡಲ್ ರಾಜಕಾರಣ ಯಾವ ಮಟ್ಟ ತಲುಪಿದೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೇ. ಮೂಡಲಮೋಳೆ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದ ಲಕ್ಷ್ಮಣ ಶೆಟ್ಟಿ ಜನರ ಮನ ಗೆದ್ದಿದ್ದ. ಗ್ರಾಮ ಪಂಚಾಯ್ತಿ ಸದಸ್ಯ ಆಗುವುದಕ್ಕೂ ಮೊದಲು, ಆತ ಊರಿನ ನ್ಯಾಯಯುತ ಯಜಮಾನನಾಗಿ ಎಂಟು ವರ್ಷಗಳ ಕಾಲ ಪ್ರಾಮಾಣಿಕ ಸೇವೆ ಸಲ್ಲಿಸಿದ್ದ. ಸಭ್ಯಸ್ಥನಾಗಿದ್ದ ಲಕ್ಷ್ಮಣ ಶೆಟ್ಟಿ ಗ್ರಾಮದಲ್ಲಿ ಏನೇ ಅವಘಡ ನಡೆದರೂ, ತಾನೇ ಮುಂದೆ ನಿಂತು ನ್ಯಾಯಯುತ ತೀರ್ಮಾನ ನೀಡಿ, ಜನರ ನಡುವಿನ ಅಪಸ್ವರವನ್ನು ತೊಡೆದು ಹಾಕುತ್ತಿದ್ದ. ಈ ಕಾರಣಕ್ಕಾಗಿಯೇ ಕಳೆದ ಸಲ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಮೂಡಲಮೋಳೆಯ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಜನ ಈತನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದರು. ಲಕ್ಷ್ಮಣ ಶೆಟ್ಟಿ ಕೂಡಾ ಅಷ್ಟೇ ಪ್ರಾಮಾಣಿಕವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಿ ಜನಪರ ವ್ಯಕ್ತಿ ಎನಿಸಿಕೊಳ್ಳುತ್ತಾ ಬಂದ. ಭವಿಷ್ಯದ ರಾಜಕೀಯಕ್ಕಾಗಿ ವಾಟಾಳ್ ಪಕ್ಷ ಸೇರಿ ವಾಟಾಳ್ ನಾಗರಾಜ್‌ರ ಪರಮಶಿಷ್ಯನಾಗಿ ಬೆಳೆದ. ಆಗಲೇ ಶುರುವಾಗಿದ್ದು ಶಂಕರ ಶೆಟ್ಟಿ ಎಂಬ ಗ್ರಾಮ ಯಜಮಾನನ ಹುನ್ನಾರಗಳು.



...ಕರ್ ಶೆಟ್ಟಿ



...ಸವರಾಜು



ಪುಟ್ಟರಂಗಶೆಟ್ಟಿ

ಮೂಡಲಮೋಳೆ ಗ್ರಾಮದ ಯಜಮಾನರುಗಳ ಪೈಕಿ ಶಂಕರ ಶೆಟ್ಟಿ ಕ್ರೂರ ಫ್ಯೂಡಲ್ ಸ್ವಭಾವದವನು, ಕಾಂಗ್ರೆಸ್ ಶಾಸಕ ಪುಟ್ಟರಂಗಶೆಟ್ಟಿಯ ಛೇಲಾ ಆಗಿ ಬೆಳೆದವನು. ಗ್ರಾಮದಲ್ಲಿ ಯಾವುದೇ ಸಮಸ್ಯೆ ತಲೆದೋರಿದರೂ ಯಜಮಾನ ಶಂಕರ ಶೆಟ್ಟಿಯ ಕಡೆ ಹೋಗಬೇಕು. ಲಕ್ಷ್ಮಣ ಶೆಟ್ಟಿ ಗ್ರಾಮ ಪಂಚಾಯ್ತಿ ಸದಸ್ಯನಾದ ಮೇಲೆ ಜನ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಶಂಕರ ಶೆಟ್ಟಿಯ ಬದಲು ಲಕ್ಷ್ಮಣ ಶೆಟ್ಟಿಯತ್ತ ಹೋಗತೊಡಗಿದರು. ಮೂಲತಃ ಗರ್ವಿಷ್ಠನಾದ ಶಂಕರ ಶೆಟ್ಟಿಗೆ ಇದನ್ನು ಸಹಿಸಲಾಗಲಿಲ್ಲ. ಕೆಲವರ್ಷಗಳ ಹಿಂದೆ ಶಂಕರ ಶೆಟ್ಟಿ ಕುಟುಂಬದಲ್ಲಿ ಜಗಳ ಶುರುವಾಗಿ ಅದು ಪೊಲೀಸ್ ಠಾಣೆಯ ಮೆಟ್ಟಿಲೇರಿದಾಗ, ಮಧ್ಯಪ್ರವೇಶಿಸಿದ ಲಕ್ಷ್ಮಣ ಶೆಟ್ಟಿ ಗ್ರಾಮದ ನ್ಯಾಯ ಪಂಚಾಯತಿಯಲ್ಲೇ ಜಗಳ ಬಗೆಹರಿಸಿಕೊಳ್ಳಿ, ಸ್ಟೇಷನ್ ಕಟ್ಟೆ ಹತ್ತಿದರೆ ಊರ ಮಾನ ಹರಾಜಾದಂತೆ ಎಂದು ಶಂಕರ ಶೆಟ್ಟಿಯನ್ನು ವಿನಂತಿಸಿದ್ದಾನೆ. ಇದರಿಂದ ಅವಮಾನಿತನಾದೆ ಎಂದು ಭಾವಿಸಿದ ಶಂಕರ ಶೆಟ್ಟಿ ಕುತಂತ್ರ ಹೆಣೆದು, ಜನರನ್ನು ಲಕ್ಷ್ಮಣ ಶೆಟ್ಟಿಯ ವಿರುದ್ಧ ಎತ್ತಿಕಟ್ಟಿಬಿಟ್ಟ. ಗೂಂಡಾಗಳ ಮೂಲಕ ಲಕ್ಷ್ಮಣ ಶೆಟ್ಟಿಗೆ ಗ್ರಾಮ ಬಹಿಷ್ಕಾರ ಜಾರಿಯಾಗುವಂತೆ ಮಾಡಿಬಿಟ್ಟ. ಲಕ್ಷ್ಮಣ ಶೆಟ್ಟಿ ಕುಟುಂಬದವರನ್ನು ಯಾರೂ ಕೂಲಿಗೆ ಕರೆಯಬಾರದು, ಅವರಿಗೆ ಯಾರೂ ದಿನಸಿ ನೀಡಬಾರದು ಎಂದೆಲ್ಲ ಅಪ್ಪಟ ಗೂಂಡಾಶೈಲಿಯ ಫರ್ಮಾನು ಹೊರಡಿಸಿದ ಶಂಕರ ಶೆಟ್ಟಿ ಎಂಬ ಪುಂಡ ಲಕ್ಷ್ಮಣ ಶೆಟ್ಟಿಯ ಕುಟುಂಬವನ್ನು ಊರಿಂದ ಓಡಿಸಿಯೇ ಬಿಟ್ಟ. ಭಯಬಿದ್ದ ಲಕ್ಷ್ಮಣ ಶೆಟ್ಟಿ ಹೆಂಡತಿ, ಮಕ್ಕಳು ತಂದೆತಾಯಿ ಸಮೇತ ಪಕ್ಕದ ಜಾಲಳ್ಳಿ ಹುಂಡಿ ಗ್ರಾಮಕ್ಕೆ ಬಂದು ವಾಸತೊಡಗಿದ.

ಅಲ್ಲೂ ಬಿಡಲಿಲ್ಲ

ಗ್ರಾಮ ಬಹಿಷ್ಕಾರದ ನಂತರವೂ ಸುಮ್ಮನಾಗಲಿಲ್ಲ ದುಷ್ಟ ಶಂಕರ ಶೆಟ್ಟಿ. ತನ್ನ ಗೂಂಡಾಪಡೆಯೊಂದಿಗೆ ಜಾಲಳ್ಳಿ ಹುಂಡಿ ಗ್ರಾಮಕ್ಕೂ ಕಾಲಿಟ್ಟ ಶಂಕರ ಶೆಟ್ಟಿ ಮತ್ತೆ ಲಕ್ಷ್ಮಣ ಶೆಟ್ಟಿಗೆ ಬೆದರಿಕೆ ಹಾಕಿ, ಗ್ರಾಮದ ಯಜಮಾನಿಕೆಗೆ ರಾಜೀನಾಮೆ ನೀಡು ಎಂದು ಪೀಡಿಸಿದ. ಪೀಡನೆಯಿಂದ ನೊಂದ ಲಕ್ಷ್ಮಣ ಶೆಟ್ಟಿ ಮೂಡಲಮೋಳೆಯ ಯಜಮಾನಿಕೆ ಅಧಿಕಾರವನ್ನು ತ್ಯಜಿಸಿದ. ಇಷ್ಟಕ್ಕೂ ಸಮಾಧಾನವಾಗದ ಕಟುಕ ಶಂಕರ ಶೆಟ್ಟಿಯ ದುಷ್ಟಪಡೆ ಮತ್ತೆ ಲಕ್ಷ್ಮಣ ಶೆಟ್ಟಿಯ ಮನೆಗೆ ನುಗ್ಗಿ ಆತನನ್ನು, ಆತನ ಹೆಂಡತಿ ಮಕ್ಕಳನ್ನು ಥಳಿಸಿತು, ಗ್ರಾಮ ಪಂಚಾಯ್ತಿ ಸದಸ್ಯತ್ವಕ್ಕೂ ರಾಜೀನಾಮೆ ನೀಡುವಂತೆ ಧಮಕಿ ಹಾಕಿತು. ರಾಜೀನಾಮೆ ನೀಡದಿದ್ದರೆ ಇಡೀ ಕುಟುಂಬವನ್ನೇ ನಾಶ ಮಾಡುವುದಾಗಿ ಬೆದರಿಸಿಬಿಟ್ಟಿತು. ಇದು ಅತಿಯಾಯ್ತು ಎಂದುಕೊಂಡ ಲಕ್ಷ್ಮಣ ಶೆಟ್ಟಿ ಸೀದಾ ಚಾಮರಾಜನಗರ ಪೊಲೀಸ್ ಠಾಣೆಗೆ ಹೋಗಿ ತನ್ನ ಕುಟುಂಬಕ್ಕೆ ಶಂಕರ ಶೆಟ್ಟಿಯಿಂದ ಪ್ರಾಣ ಬೆದರಿಕೆಯಿದೆ, ದಯವಿಟ್ಟು ರಕ್ಷಣೆ ಕೊಡಿ ಎಂದು ಅಂಗಲಾಚಿಕೊಂಡ. ಕಂಪ್ಲೆಂಟ್ ಪಡೆದ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೇ ಸುಮ್ಮನೆ ಕುಳಿತರು. ಯಾಕೆಂದರೆ ಅಲ್ಲಿ ಶಂಕರ ಶೆಟ್ಟಿಯ ಗಾಡ್‌ಫಾದರ್ ಶಾಸಕ ಪುಟ್ಟರಂಗಶೆಟ್ಟಿ ಪೊಲೀಸರ ಮೇಲೆ ಒತ್ತಡ ಹೇರಿದ್ದ.

ಚಾಮರಾಜನಗರದ ಪೊಲೀಸರಿಂದ ತನಗೆ ನ್ಯಾಯ ಸಿಗದೆಂದು ಅರಿತುಕೊಂಡ ಲಕ್ಷ್ಮಣ ಶೆಟ್ಟಿ ರಾಜ್ಯಪಾಲರು, ಗೃಹಸಚಿವರು ಹಾಗೂ ಮುಖ್ಯ ಕಾರ್ಯದರ್ಶಿಯವರಿಗೆ ದೂರು ನೀಡಿದ. ಇವನನ್ನು ಹೀಗೆಬಿಟ್ಟರೆ ಕಷ್ಟ ಎಂದೆನಿಸಿದ ಶಂಕರ ಶೆಟ್ಟಿ ಲಕ್ಷ್ಮಣ ಶೆಟ್ಟಿಯನ್ನು ಮುಗಿಸಲು ಬಲೆ ಹೆಣೆಯತೊಡಗಿದ. ಲಕ್ಷ್ಮಣ ಶೆಟ್ಟಿಯನ್ನು ಕದ್ದುಮುಚ್ಚಿ ಭೇಟಿ ಆಗಿ ಬರುತ್ತಾನೆ ಎಂದು ಮೂಡಲಮೋಳೆಯ ಸೀಮೆಎಣ್ಣೆ ನಂಜುಂಡನ ವಿರುದ್ಧ ತಿರುಗಿಬಿದ್ದ ಶಂಕರ ಶೆಟ್ಟಿ ನಂಜುಂಡನನ್ನು ಹೊಡೆದು ಸಾಯಿಸಿ, ಮರವೊಂದಕ್ಕೆ ನೇಣುಹಾಕಿ ಆತ್ಮಹತ್ಯೆ ಎಂದು ಮುಚ್ಚಿಹಾಕಿಬಿಟ್ಟ. ಈ ಸತ್ಯ ಗೊತ್ತಿದ್ದ ಲಕ್ಷ್ಮಣ ಶೆಟ್ಟಿ ಯಾರ ತಂಟೆಗೂ ಹೋಗದೇ ತನ್ನಷ್ಟಕ್ಕೇ ತಾನು ಪಕ್ಕದೂರಲ್ಲಿ ಬದುಕುತ್ತಿದ್ದ. ಆದರೆ ಮೂಡಲಮೋಳೆಯ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದ ಆತನ ಮಕ್ಕಳಿಗೂ ಶಂಕರ ಶೆಟ್ಟಿ ಕಿರಿಕಿರಿ ಕೊಡಲು ಶುರು ಮಾಡಿದ. ಇದು ತೀರಾ ಅತಿಯಾಯ್ತು ಎಂದ ಲಕ್ಷ್ಮಣ ಶೆಟ್ಟಿ ಜನವರಿ 30 ರಂದು ಮೂಡಲಮೋಳೆ ಗ್ರಾಮಕ್ಕೆ ಹೋಗಿ ತನ್ನ ಅಣ್ಣ ರಾಚಯ್ಯಶೆಟ್ಟಿಯ ಮನೆಗೆ ಹೋದ. ಬಹಿಷ್ಕಾರದಿಂದ ತನ್ನ ಕುಟುಂಬ ಬೀದಿಪಾಲಾಗುತ್ತಿದೆ ಎಂದು ಅವಲತ್ತುಕೊಂಡ ಲಕ್ಷ್ಮಣ ಶೆಟ್ಟಿ, ಗ್ರಾಮಸ್ಥರು ಬೇಕಾದರೆ ತನಗೆ ಎಷ್ಟಾದರೂ ದಂಡ ಹಾಕಲಿ, ಅದಕ್ಕೆ ನಾನು ಬದ್ಧನಾಗಿರುವೆ, ಆದರೆ ಮೊದಲು ನನ್ನನ್ನು ಗ್ರಾಮದೊಳಕ್ಕೆ ಬಿಟ್ಟುಕೊಳ್ಳುವಂತೆ ಮಾಡಿ ಎಂದು ಅಂಗಲಾಚಿದ. ಆದರೆ ಈ ಹೊತ್ತಿಗೆ ಶಂಕರ ಶೆಟ್ಟಿಯ ಗ್ಯಾಂಗು ಹೊಂಚು ಹಾಕಿ ಕಾದಿತ್ತು. ಶಂಕರ ಶೆಟ್ಟಿ, ಅವನ ತಮ್ಮ ಶಿವಣ್ಣ, ತಂಗಿ ನಂಜಮ್ಮ ಹಾಗೂ ಬಾವ ಸ್ವಾಮಿ ಮತ್ತು ಕುಮಾರರ ಗೂಂಡಾಪಡೆ ಲಕ್ಷ್ಮಣ ಶೆಟ್ಟಿಯನ್ನು ನೆಲಕ್ಕೆ ಹಾಕಿ ಸಿಕ್ಕಾಪಟ್ಟೆ ಹಲ್ಲೆ ನಡೆಸಿಬಿಟ್ಟರು. ಅರೆಪ್ರಜ್ಞಾವಸ್ಥೆ ಸ್ಥಿತಿ ತಲುಪಿದ ಲಕ್ಷ್ಮಣ ಶೆಟ್ಟಿಯನ್ನು ಆತನ ಕುಟುಂಬದವರು ಆಸ್ಪತ್ರೆಗೆ ಸೇರಿಸಿದರು. ಆದರೆ ತೀವ್ರ ಹಲ್ಲೆಗೊಳಗಾಗಿದ್ದ ಲಕ್ಷ್ಮಣ ಶೆಟ್ಟಿ ಆಸ್ಪತ್ರೆಯಲ್ಲಿ ಎರಡು ದಿನ ಜೀವನ್ಮರಣದ ಹೋರಾಟ ನಡೆಸಿ ಅಸುನೀಗಿದ. ಲಕ್ಷ್ಮಣ ಶೆಟ್ಟಿಯ ಸಾವಿಗೆ ಶಂಕರ ಶೆಟ್ಟಿಯ ಕುಟುಂಬವೇ ಕಾರಣವೆಂದು ಲಕ್ಷ್ಮಣ ಶೆಟ್ಟಿಯ ತಂದೆ ರಾಮಯ್ಯ ಶೆಟ್ಟಿ ಚಾಮರಾಜನಗರ ಠಾಣೆಯಲ್ಲಿ ದೂರು ನೀಡಿದ್ದಾರೆ. ಆದರೆ ಪೊಲೀಸರು ಕಾಟಾಚಾರಕ್ಕೆ ಸ್ವಾಮಿ, ಕುಮಾರ ಎಂಬಿಬ್ಬರು ಆರೋಪಿಗಳನ್ನು ಬಂಧಿಸಿ, ಪ್ರಮುಖ ಆರೋಪಿಗಳಾದ ಶಂಕರ ಶೆಟ್ಟಿ, ಶಿವಣ್ಣ ಮತ್ತು ನಂಜಮ್ಮರ ತಂಟೆಗೇ ಹೋಗಿಲ್ಲ. ಇಲ್ಲೂ ಶಾಸಕ ಪುಟ್ಟರಂಗಶೆಟ್ಟಿಯ ಕಾಣದ ಕೈಯೇ ಕೆಲಸ ಮಾಡಿದೆ.

ಪ್ರಾಮಾಣಿಕ ಗ್ರಾಮ ಪಂಚಾಯ್ತಿ ಸದಸ್ಯನಿಗೇ ಈ ಗತಿಯಾದರೆ ಅಲ್ಲಿನ ಜನರ ಪಾಡೇನು? ನಶೆಯಲ್ಲಿರುವ ಶಾಸಕ ಪುಟ್ಟರಂಗ ಶೆಟ್ಟಿಯನ್ನು ಎಬ್ಬಿಸುವವರ್ಯಾರು? ಹಂತಕ ಶಂಕರ ಶೆಟ್ಟಿಗೆ ಶಿಕ್ಷೆ ವಿಧಿಸುವವರ್ಯಾರು?

● ಕೊಳ್ಳೇಗಾಲ ಚಿಕ್ಕಮಾಳಿಗೆ

ಗೋಹತ್ಯೆ ನಿಷೇಧ ಕಾನೂನು: ಪ್ರತಿಕ್ರಿಯೆಗಳು

ರಾಜ್ಯದಲ್ಲಿ ಗೋಹತ್ಯೆ ನಿಷೇಧದ ಹೆಸರಲ್ಲಿ ಬೆಡ್ಡಿ ಸರ್ಕಾರ ನಮ್ಮ ಹಿಂದುಳಿದ,ದಲಿತ, ಅಲ್ಪಸಂಖ್ಯಾತ ಜನರ ಮೇಲೆ ವಿವಿಧ ಸ್ತರಗಳಲ್ಲಿ ದಾಳಿ ಮಾಡಲು ಹೊರಟಿದೆ. ಇದನ್ನು ರಾಜ್ಯದ ವಿರೋಧ ಪಕ್ಷಗಳು ವಿರೋಧಿಸದೇ ಇದ್ದರೂ ಎಲ್ಲಾ ಪ್ರಜ್ಞಾವಂತರಂತೂ ಕಟುವಾಗಿ ಟೀಕಿಸುತ್ತಿದ್ದಾರೆ. ಹೋದವಾರ ನಮ್ಮ ಶಿವಸುಂದರ್ ಅವರು 'ಚಾರ್ವಾಕ' ಅಂಕಣದಲ್ಲಿ ಗೋಹತ್ಯೆ ನಿಷೇಧ ಕುರಿತು ಬರೆದದ್ದಕ್ಕೆ ನೂರಾರು ಪತ್ರಗಳು ಬಂದಿವೆ. ಅವುಗಳಲ್ಲಿ ಹಲವನ್ನು ಆಯ್ಕೆ ಮಾಡಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ದಲಿತ-ಅಲ್ಪಸಂಖ್ಯಾತರಿಗಾಗಿ ಕಾದಿದೆ 'ಗೋ' ಕಾನೂನಿನ ಮೂಗುದಾರ

ಮುಂದಿನ ಅಧಿವೇಶನದಲ್ಲಿ 'ಗೋಹತ್ಯೆ ನಿಷೇಧ' ಕಾನೂನಿನ ಜಾರಿಯ ಬಗ್ಗೆ ಯೋಚಿಸಲಾಗಿದೆ ಎಂದು ಸ್ವಯಂ ಸಿಎಂ ಸಾಹೇಬರೇ ಡಂಗೂರ ಸಾರಿಕೊಂಡು ತಿರುಗುತ್ತಿದ್ದಾರೆ. ಜತೆಗೆ ಕಾಂಗ್ರೆಸ್ ರಾಜ್ಯಪಾಲ ಭಾರದ್ವಾಜ್ ಕೂಡ ಇದರ ಅಗತ್ಯತೆಯ ಪರವಹಿಸಿ ಮಾತನ್ನಾಡುತ್ತಿರುವುದು ಕೂಡ ಅದಕ್ಕೆ ಪೂರಕವೇ ಅನಿಸಿದೆ. ಒಟ್ಟಾರೆ ಈ ಗೋಹತ್ಯೆ ನಿಷೇಧ ಕಾನೂನು, ಮತಾಂತರ ನಿಷೇಧ ಕಾನೂನು ಜಾರಿಗೆ ತರಲು ಹೊರಡುವ ಮೂಲಕ ಬಿಜೆಪಿ ಸರ್ಕಾರ ತನ್ನ ನಿಜರೂಪ ತೋರಲು ರೆಡಿಯಾಗಿ ನಿಂತಿರುವುದಂತೂ ಸ್ಪಷ್ಟ.

ನಿಜ ಹೇಳಬೇಕೆಂದರೆ ಗೋಮಾಂಸಕ್ಕಾಗಿ ಶೂದ್ರರಾಗಲೀ, ಮುಸಲ್ಮಾನರಾಗಲೀ ಮುಗಿಬೀಳುತ್ತಾರೆಂದೇನೂ ಇಲ್ಲ. ಮೂಲತಃ ಕೂಲಿನಾಲಿ ಮಾಡಿ ಬಡತನದಲ್ಲಿ ಬದುಕುವ ಶೂದ್ರ ವರ್ಗಕ್ಕೆ ಇತರ ಕುರಿ ಕೋಳಿಗಳಿಗೆ ಹೋಲಿಸಿದರೆ ಸ್ವಲ್ಪ ಭರ್ಜರಿ ಎನಿಸುವಷ್ಟು ಸಿಗುವ ಕಾರಣ ಮತ್ತು ಅಗ್ಗ ಎನಿಸುವ ಕಾರಣ ಇದನ್ನ ತಿನ್ನಬಹುದೇ ವಿನಃ ಗೋವಾದಿಗಳು ಹೇಳುವಂತೆ ಗೋವಂಶ ನಿರ್ಮೂಲನಕ್ಕೆ ಪಣತೊಟ್ಟವರೇನೂ ಇವರಲ್ಲ. ಇವರಿಗೆ ಅಂತಹ ಅವಶ್ಯಕತೆಯೂ ಇಲ್ಲ. ತಮಾಷೆಯೆಂದರೆ ಶೂದ್ರವರ್ಗದ ಗೋಮಾಂಸ ಮೂಲಪ್ರೇರಣೆಯೇ ಈ 'ಬ್ರಾಹ್ಮಣರು.' ಹಾಗಂತ ಯಾರೋ ದಾರಹೋಕ ಹೇಳಿದ್ದಲ್ಲ. ಹಿಂದೂಗಳಿಗೆ ಪರಮಪೂಜ್ಯರೆನಿಸಿದ ಹಿಂದಿನ ಶೃಂಗೇರಿ ಪೀಠಾಧೀಶರಾಗಿದ್ದ ಶ್ರೀ ಚಂದ್ರಶೇಖರ ಭಾರತಿ ಸ್ವಾಮೀಜಿಯವರ ಅಭಿಪ್ರಾಯ ಇದು. ಚೆನ್ನೈನ ಬ್ರಹ್ಮ ವಿದ್ಯಾಟ್ರಸ್ಟ್ ಪ್ರಕಟಿಸಿರುವ "Sparks From a Divine Anvil " ಎಂಬ ಪುಸ್ತಕದಲ್ಲಿ ಈ ಉಲ್ಲೇಖವಿದೆ (ಮೊದಲ ಮುದ್ರಣ 1958) ಅವರ ಸಂಕ್ಷಿಪ್ತ ಸಾರಾಂಶ ಹೀಗಿದೆ-

ಈಗೀಗ ಬ್ರಾಹ್ಮಣರ ಕೇರಿಯಲ್ಲಿ ಹಸುಗಳು ಸತ್ತರೆ ಅದನ್ನು ತೆಗೆಯಲು ಶೂದ್ರರು ನಿರಾಕರಿಸುತ್ತಿರುವ ಕಾರಣ ಆ ಕೆಲಸವನ್ನು ನಾವೇ ಮಾಡುವಂತಹ ಪರಿಸ್ಥಿತಿ ಬಂದಿದೆ ಎಂಬ ಬ್ರಾಹ್ಮಣರೊಬ್ಬರ ಪ್ರಶ್ನೆಗೆ ಉತ್ತರಿಸುತ್ತಾ ಶ್ರೀಗಳು-

"ಆಕಳ ಹಾಲು ತುಪ್ಪವನ್ನೇ ತಿಂದು ಬೆಳೆದ ನೀವು ಒಂದು ಬಗೆಯಲ್ಲಿ ತಾಯಿಗೆ ಸಮನಾದ ಆ ಗೋವು ಸತ್ತಾಗ ಅಂತ್ಯಕ್ರಿಯೆ ನಡೆಸಲು ಹಿಂಜರಿದರೆ ಹೇಗೇ? ಅಲ್ಲದೇ ಈ ಸತ್ತ ದನವನ್ನು ಶೂದ್ರರಿಗೆ ಬಿಟ್ಟುಕೊಟ್ಟರೆ ಅದನ್ನವರು ಮಾಂಸವನ್ನಾಗಿ ಬಳಸುತ್ತಾರೆಂಬ ಅರಿವೂ ನಿಮಗಿದೆ ಅಂದರೆ ಪರೋಕ್ಷವಾಗಿ ಅವರ ಗೋಮಾಂಸ ಭಕ್ಷಣೆಯನ್ನು ನೀವೇ ಪ್ರೋತ್ಸಾಹಿಸಿದಂತಾಲಿಲ್ಲವೇ?" ಎಂದು ಕುಟುಕಿದರು.

ಕಾಲ ಬದಲಾಗಿದೆ, ಆವತ್ತು ಕನ್ನಡಿ ಅಪರೂಪದ ಹಾಗೂ ಅಮೂಲ್ಯ ವಸ್ತುವಾಗಿತ್ತು. ಆದರೀಗ ಕನ್ನಡಿ ಇಲ್ಲದ ಜಾಗವೇ ಇಲ್ಲ. ಹಾಗಾಗಿ ಕನ್ನಡಿ ಒಡೆದರೆ 7 ವರ್ಷ ಶನಿಕಾಟ ಎಂಬ ಮಾತಿಗೀಗ ಅರ್ಥವಿಲ್ಲ. ಅಂದು ಅಮೂಲ್ಯ ಎನಿಸಿದ್ದ ಉಪ್ಪು (Salary ಪದ ಹುಟ್ಟಿದ್ದೇ Saltನಿಂದ) ಇಂದು ಚೀಪೆಸ್ಟ್ ವಸ್ತುವಾಗಿದೆ. ಆವತ್ತು ಹರಳೆಣ್ಣೆಯ ದೀಪಗಳೇ ಮನೆ ಬೆಳಗುತ್ತಿದ್ದರೆ, ಇಂದು ಬಲ್ಬ್-ಟ್ಯೂಬಿನ ಜಾಗದಲ್ಲಿ ಹರಳೆಣ್ಣೆಯನ್ನು ಕೇಳುವವರೇ ಇಲ್ಲ. ಅದೇರೀತಿ ಆ ಕಾಲದಲ್ಲಿ ಯಂತ್ರಗಳ ಶೋಧನೆ, ಕೈಗಾರಿಕೀಕರಣ, ರಸಗೊಬ್ಬರಗಳ ಶೋಧನೆಗೂ ಮುನ್ನ ಗೋಸಂಪತ್ತು ನಿಜ ಸಂಪತ್ತೇ ಆಗಿತ್ತು. ಆದರೀಗ ಆವತ್ತು ಕೃಷಿಗೆ ಅನಿವಾರ್ಯ ಎನಿಸಿದ್ದ ಹಟ್ಟಿಗೊಬ್ಬರ ಹೆಸರಿಗಷ್ಟೇ ಬಳಕೆಯಾಗುತ್ತಿದೆ. ಗಾಣ, ಬಂಡಿ, ಉಳುಮೆಗಳಲ್ಲಿ ಇದ್ದ ಹಸು ಇಂದು ವ್ಯವಸ್ಥಿತ ಡೈರಿ ಉದ್ಯಮದ ಫಲವಾಗಿ ಬೇಕೇಬೇಕು ಎನಿಸುತ್ತಿಲ್ಲ. ಹಾಲಿನ ಪ್ಯಾಕೇಟ್ ಮನೆಗೆ ಬಂದು ಬೀಳುತ್ತಿವೆ. ಆದರೂ ಈ ಗೋವಾದಿಗಳು ಇನ್ನೂ ಹರಳೆಣ್ಣೆಯ ಕಾಲದಿಂದ ಹೊರಬಂದಂತೆ ಕಾಣುತ್ತಿಲ್ಲ. ಗೋವಿನ ಚಾಕರಿ ಮಾಡಿದ ಅನುಭವ ಇರದ ಇವರಿಗೆ ಗೋವು ತಮ್ಮ ಬೇಳೆ ಬೇಯಿಸಿಕೊಳ್ಳಲು, ಜನರ ಭಾವನೆ ಕೆರಳಿಸಲು ಒಂದು ನೆವವಾಗಿ ಅಷ್ಟೇ ಬೇಕು. ಗೋವಿನ ಹೆಸರ್‍ಹೇಳಿ ಅದರ ಗಂಜಲ-ಸಗಣಿಯನ್ನ ಜನರ ಹಣೆಗೆ ತಿಕ್ಕ ದುಂಡಗಾಗಲು ಸಗಣಿಸ್ವಾಮಿಯೊಬ್ಬ ಹುಟ್ಟಿಕೊಂಡಂತೆ ಮುಂದೊಬ್ಬ "ನಮ್ಮ ಹರಳೆಣ್ಣೆಯೇ ಪವಿತ್ರ ವಿದೇಶಿ ಬಲ್ಬನ್ನ ಸುಡಿ" ಎಂಬ 'ಹರಳೆಣ್ಣೆ ಸ್ವಾಮಿ' ಹುಟ್ಟಿಕೊಂಡಾನು ಹುಷಾರ್...!!

-ರವಿ ಪುತ್ತೂರು, ದ.ಕ.



ಗೋಹತ್ಯೆ ನಿಷೇಧಿಸಲಿ, ಜೊತೆಗೆ....

1. ಕುರಿಗಳ ಹತ್ಯೆಯನ್ನೂ ನಿಷೇಧಿಸಲಿ. ಯಾಕೆಂದರೆ ಕುರಿಗಳ ಹತ್ಯೆಯಿಂದ ಸಾಕಷ್ಟು ರುಚಿಯಾದ ಮೃಷ್ಟಾನ್ನ ಮಾಂಸವು ದೊರೆಯುವುದರಿಂದ, ಅದನ್ನು ಕೊಂದು ತಿನ್ನಲು ಜನಸಾಮಾನ್ಯರಿಗೆ ಬಲವಿಲ್ಲದಿರುವುದರಿಂದ, ಅದು ಕೇವಲ ಉಳ್ಳವರಿಗೆ ಮೀಸಲಾಗಿಬಿಡುವುದರಿಂದ, ಇದರಿಂದಾಗಿ ಸಮಾಜದಲ್ಲಿ ಬಡವ-ಶ್ರೀಮಂತ, ಮೇಲ್ವರ್ಗ-ಕೆಳವರ್ಗ ಎಂಬ ಭೇದಗಳು ಸೃಷ್ಟಿಯಾಗುವುದರಿಂದ, ಹೀಗಾಗದೇ ಇರಲಿ ಎಂದು 'ಕಲ್ಲೊಡ್ಡಿ, ಕೈ-ಕಾಲ್ ಕಡಿ, ನಾಲ್ಗೆ ಕಡಿ ಸರ್ಕಾರ'ವು ಕುರಿಗಳ ಹತ್ಯೆಯನ್ನು ನಿಷೇಧಿಸಲಿ.
2. ಕೋಳಿಗಳ ಹತ್ಯೆಯನ್ನು ನಿಷೇಧಿಸಲಿ. ಯಾಕೆಂದರೆ ಕೋಳಿಗಳ ಹತ್ಯೆಯಿಂದ ಕೋಳಿಗಳ ಪುಕ್ಕ, ರಕ್ತ, ಬೇಡವಾದ ಮಾಂಸಗಳಿಂದ ಸೊಳ್ಳೆ-ನೊಳ್ಳೆಗಳು ಹೆಚ್ಚಳವಾಗಿ ಅದರಿಂದ ಚಿಕೂನ್‌ಗುನ್ಯಾ-ಮಟನ್‌ಗುನ್ಯಾ ಮತ್ತಿತರ ರೋಗ-ರುಜಿನಗಳು ಕಾಣಿಸಿಕೊಂಡು, ಅದು ಜನಸಾಮಾನ್ಯರ ಸಾವಿಗೆ ಕಾರಣವಾಗುವುದರಿಂದ, ಇಂಥ ತ್ಯಾಜ್ಯ ವಸ್ತುಗಳನ್ನು 'ಎಲ್ಲೋ ಒಂದು ಕಡೆ ಬಿಸಾಕಲು' ಯೋಚಿಸಬೇಕಾಗಿರುವುದರಿಂದ, ಗಣಿಗಾರಿಕೆ ಮುಂತಾದ ಅಕ್ರಮಗಳಿಂದ ಭೂಮಿಯಲ್ಲಿ ತ್ಯಾಜ್ಯವಸ್ತುಗಳಿಗೆ ಜಾಗವೇ ಸಿಗದಿರಲು ಕೋಳಿಗಳ ತ್ಯಾಜ್ಯಗಳನ್ನು ಪರಿಸರದ ಯಾವ ಮೂಲೆಗೂ ಸೇರಿಸಲಾಗದೇ ಇರುವುದರಿಂದ... 'ಕಲ್ಲೊಡ್ಡಿ, ಕೈ-ಕಾಲ್ ಕಡಿ, ನಾಲ್ಗೆ ಕಡಿ ಸರ್ಕಾರ'ವು ಕೋಳಿಗಳ ಹತ್ಯೆಯನ್ನು ನಿಷೇಧಿಸಲಿ.
3. ಹಂದಿಗಳ ಹತ್ಯೆಯನ್ನೂ ನಿಷೇಧಿಸಲಿ. ಯಾಕೆಂದರೆ ಹಂದಿಯನ್ನೂ ಕಂಡರೆ ಮನುವಾದಿಗಳಿಗಿಂತ ಮುಸ್ಲಿಂ ಸಂಪ್ರದಾಯವಾದಿಗಳಿಗೆ ಸಿಕ್ಕಾಪಟ್ಟೆ ಅಸಹ್ಯ! ಈ ಹತ್ಯೆಯಾದ ಹಂದಿಯನ್ನು ಮನುವಾದಿಯೊಬ್ಬ ಮಸೀದಿಯ ಮೇಲೆ ಎಸೆದರೆ ಅದು ಎರಡೂ ಧರ್ಮಗಳ ನಡುವೆ ಕಚ್ಚಾಟಕ್ಕೆ ಕಾರಣವಾಗಿ, ಇದರಿಂದಾಗಿ ಕರ್ಫ್ಯೂ-ಬಂದ್‌ಗಳು ಜಾರಿಯಾಗಿ, ಅದು ಬಡ ಹಿಂದೂ-ಬಡ ಮುಸ್ಲಿಂನ ಮೇಲೆ ಪ್ರಭಾವ ಬೀರಿ, ಇವರಿಬ್ಬರ ದಿನಗೂಲಿಗೆ ಹೊಡೆತ ಉಂಟಾಗಿ, ಇವರಿಬ್ಬರೂ ವಾರವಿಡೀ ತಣ್ಣೀರು ಬಟ್ಟೆ ಕಟ್ಟಿಕೊಳ್ಳಬೇಕಾಗಿರುವುದರಿಂದ, ಹಂದಿ ವಿಷ್ಣುವಿನ ವಾಹನ ವರಾಹವೂ ಆಗಿರುವುದರಿಂದ 'ಕಲ್ಲೊಡ್ಡಿ, ಕೈ-ಕಾಲ್ ಕಡಿ, ನಾಲ್ಗೆ ಕಡಿ ಸರ್ಕಾರ'ವು ಕುರಿಗಳ ಹತ್ಯೆಯನ್ನು ನಿಷೇಧಿಸಲಿ.
4. ಮೀನುಗಳ ಹತ್ಯೆಯನ್ನೂ ನಿಷೇಧಿಸಲಿ. ಯಾಕೆಂದರೆ ಹಿಂದೂಗಳಿಗೆ ಪವಿತ್ರವಾದ ಗೋವು ಕಾಮಧೇನುವಾದರೆ... ಮೀನು 'ಮತ್ಸ್ಯರೂಪಿ' ವಿಷ್ಣುವಿನ ಅವತಾರವಲ್ಲವೇ. ಹೀಗೆ ಮೀನಿನ ಹತ್ಯೆಯಿಂದ ಸಾಕ್ಷಾತ್ ವಿಷ್ಣುವನ್ನೇ ಹತ್ಯೆ ಮಾಡಿದಂತೆ ಆಗಿ, ನಾವು ಸಾಕ್ಷಾತ್ ವಿಷ್ಣುವನ್ನೇ ತಿಂದಂತಾಗಲಿಲ್ಲವೇ? ಜೊತೆಗೆ ನರಮಾನವರು 'ದೈವಭಕ್ಷಕ'ರಾಗಲಿಲ್ಲವೇ? ಮತ್ತೆ ಇದೂ ಕೂಡ ಹಿಂದೂ ಧರ್ಮಕ್ಕೆ ಅವಮಾನ ಮಾಡಿದಂತಾಗುವುದಿಲ್ಲವೇ? ಆದ್ದರಿಂದ ಮೀನುಗಳ ಹತ್ಯೆಯನ್ನೂ ನಿಷೇಧಿಸಲು ಈ ಮೂಲಕ 'ಕಲ್ಲೊಡ್ಡಿ, ಕೈ-ಕಾಲ್ ಕಡಿ, ನಾಲ್ಗೆ ಕಡಿ ಸರ್ಕಾರ'ಕ್ಕೆ ಕೈಕಾಲ್ ಮುಗಿದು ಕೇಳಿಕೊಳ್ಳುತ್ತೇನೆ ಕುರಿ,ಕೋಳಿ,ಹಂದಿ, ಮೀನುಗಳ ಹತ್ಯೆಯನ್ನು ನಿಷೇಧಿಸಿ ಎಂದು!

-ಬಾದಲ್, ಮೈಸೂರು

ವೈಚಾರಿಕತೆ ಇಲ್ಲದವರು

ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರಾದ ಬ್ರಾಹ್ಮಣೀಯ ಸಂಸ್ಕೃತಿಯನ್ನು ಸಮಾಜದ ಮೇಲೆ ಹೇರಲು ಸತತ ಪ್ರಯತ್ನ ನಡೆಸುವ ಮಂದಿಗಳ 'ಗೋಹತ್ಯೆ ನಿಷೇಧ'ದ ಬಗ್ಗೆ ಕಳೆದ ಸಂಚಿಕೆಯಲ್ಲಿ ಶಿವಸುಂದರ್ ಅವರ ಲೇಖನವು ಆರ್ಕ್ಯುಗಳೊಂದಿಗೆ, ಅಂಕಿಅಂಶಗಳೊಂದಿಗೆ ತುಂಬ ಅರ್ಥವತ್ತಾಗಿತ್ತು.

ಇಂಥ ಎಷ್ಟೇ ಸತ್ಯಾಂಶ ಹೊರಬಿದ್ದರೂ ಈ ಕೋಮುವಾದಿ ಮೆಂಟಾಲಿಟಿಯವರಿಗೆ ಅರ್ಥವಾಗೋದೇ ಇಲ್ಲ ಬಿಡಿ. ಅರ್ಥವಾದರೂ ಅದನ್ನು ಒಪ್ಪಿಕೊಳ್ಳುವ ಮನುಷ್ಯರಂತೂ ಅಲ್ಲ. 'ನರಹತ್ಯೆ'ಯ ಚಟುವಟಿಕೆಗಳಿಗೆ ಕುಮ್ಮಕ್ಕು ಕೊಡುವುದಷ್ಟೇ ಇಂಥವರ ಮಹತ್ಕಾರ್ಯ. ಇಂಥ ಗೋಮುಖ ವ್ಯಾಘ್ರರ ನಡುವೆ ಜನಸಾಮಾನ್ಯರು ಗೋಹತ್ಯೆ ನಿಷೇಧದ ಕುರಿತು ಪ್ರಶ್ನಿಸುವುದೇ ದೊಡ್ಡ ಸವಾಲಿಗೆ ಮೈಯೊಡ್ಡಿದಂತೆ ಎಂಬಂತಹ ಪರಿಸ್ಥಿತಿ ಉಂಟಾಗಿದೆ.

ಇತ್ತೀಚೆಗೆ ನಾನು ದಿನಪತ್ರಿಕೆಯೊಂದರ 'ವಾಚಕರವಾಣಿ'ಯಲ್ಲಿ 'ಗೋಹತ್ಯೆ ನಿಷೇಧವಾಗಬೇಕೆ?' ಎಂಬ ಪ್ರಶ್ನೆ ಒಡ್ಡಿದ್ದೆ. ಅದರಲ್ಲಿ ನನ್ನ ಒಂದೆರಡು ಅನ್ನಿಸಿಕೆಗಳನ್ನು ತಿಳಿಸುತ್ತಾ ಬೇರೆ ಪ್ರಾಣಿಗಳ ಮಾಂಸಕ್ಕೆ ದುಪ್ಪಟ್ಟು ಹಣ ಕೊಡಬೇಕಾದ್ದರಿಂದ ಕೈಗೆಟುಕುವ ಬೆಲೆಯ ದನದ ಮಾಂಸವನ್ನು ಬಡಜನರು ಸೇವಿಸುತ್ತಾರೆ ಎಂದಿದ್ದೆ. ಆ ಪತ್ರಕ್ಕೆ ಮರುದಿನವೇ ಅದೇ ವಾಚಕರವಾಣಿಯಲ್ಲಿ ಪ್ರತಿಕ್ರಿಯೆಯೆಂಬಂತೆ ಪತ್ರವೊಂದು ಬಂತು. ಬೆಂಗಳೂರಿನ ಶಾಸಕರೊಬ್ಬರು ಬರೆದ ಆ ಪತ್ರದಲ್ಲಿ ಯಾವುದೇ ವೈಚಾರಿಕತೆಯಿರಲಿಲ್ಲ. 'ಕೆಲವರಲ್ಲೇಕೆ ಹಂದಿಮಾಂಸ ಸೇವನೆ ನಿಷೇಧಿಸಲ್ಪಟ್ಟಿದೆ' ಎಂಬ ವಿಚಿತ್ರ ಪ್ರಶ್ನೆ ಅದರಲ್ಲಿತ್ತು! ಅದಲ್ಲದೆ 'ನೀನಾರಿಗಾದೆಯೋ ಎಲೆಮಾನವಾ ಎಂಬ ಕುವೆಂಪು ಅವರ ಪದ್ಯವನ್ನು ನೀವೆಲ್ಲರೂ ಓದಿಕೊಳ್ಳಿ' ಎಂಬ ಬುದ್ಧಿವಾದ ಅದರಲ್ಲಿತ್ತು! ಅಸಲಿಗೆ ಆ ಪದ್ಯವನ್ನು ಬರೆದಿದ್ದು ಕುವೆಂಪು ಅಲ್ಲ. ಪುರಂದರದಾಸರು ಬರೆದ ಪದ್ಯವದು. ವಿಶ್ವಮಾನವ ಕವಿ ಕುವೆಂಪು ಬಗ್ಗೆ ಮಾತಾಡುವ ನೈತಿಕತೆಯಿಲ್ಲದವರು ಆಡಿದರೆ ಹೀಗೇ ಆಗೋದು! 'ಕೆಲವರಲ್ಲೇಕೆ ಹಂದಿ ಮಾಂಸ ಸೇವನೆ ನಿಷೇಧಿಸಲ್ಪಟ್ಟಿದೆ' ಎಂಬ ಪ್ರಶ್ನೆಗೆ ಆನೇಕಲ್‌ನ ಪ್ರದೀಪ್ ಎಂಬುವರ ಪ್ರತಿಕ್ರಿಯೆ ಆ ವ್ಯಕ್ತಿಯ ಮುಖಕ್ಕೆ ಕನ್ನಡಿ ಹಿಡಿದಂತಿತ್ತು.

ಇಲ್ಲಿ ಯಾರು ಯಾವ ಪ್ರಾಣಿಯ ಮಾಂಸ ಸೇವಿಸಿದರೆ ಏನು? ಇಂಥ ಪ್ರಾಣಿಯ ಮಾಂಸ ತಿನ್ನು, ಇಂಥ ಪ್ರಾಣಿಯ ಮಾಂಸ ತಿನ್ನಬೇಡ ಎಂದು ಹೇಳುವುದು ಸರಿಯೆ? 'ಗೋಹತ್ಯೆ ನಿಷೇಧವಾಗಬೇಕು' ಎಂದು ಪಟ್ಟು ಹಿಡಿಯುವವರು ಕೊಂಚ ಆಳವಾಗಿ ಯೋಚಿಸಿದರೆ ಎಲ್ಲಾ ಪ್ರಾಣಿಗಳ ಹತ್ಯೆಯನ್ನು ಅವರೇ ವಿರೋಧಿಸುತ್ತಾರೆ! ಆ ಪ್ರಕಾರ 'ಹಂದಿ ಹತ್ಯೆ'ಯೂ ನಿಷೇಧವಾಗಬೇಕು. ವರಾಹ ಎಂಬ ಹೆಸರು ಇದಕ್ಕಿದೆ. ವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂದು ಅವತಾರವಾದ ಈ ವರಹಾನನ್ನು ಹತ್ಯೆ ಮಾಡಬಹುದೆ? ನಾಲ್ಕು ವೇದಗಳ ಸೂಚಕವಾದ ನಾಯಿಗಳನ್ನು ನಗರಗಳಲ್ಲಿ ಬೀದಿಬೀದಿಯಲ್ಲಿ ಹತ್ಯೆ ಮಾಡಬಹುದೆ? ಹೀಗೆ ಎಲ್ಲಾ ಪ್ರಾಣಿಗಳೂ ದೈವರೂಪಿಯಾಗಿರುವಾಗ ಗೋಹತ್ಯೆ ಮಾತ್ರ ನಿಷೇಧವಾಗಬೇಕೆಂದು ಪಟ್ಟುಹಿಡಿಯುತ್ತಿರುವ ಮಂದಿಯನ್ನು ಏನೆನ್ನಬೇಕು ಎಂಬುದೇ ತಿಳಿಯುತ್ತಿಲ್ಲ!

-ಕಿರುಗುಂದ ರಫೀಕ್, ಮೂಡಿಗೆರೆ

ಸುರತ್ಕಲ್: ಮರುಕಳಿಸಿದ ನೈತಿಕ ಪೊಲೀಸುಗಿರಿ

ನೆದೇ ಫೆಬ್ರವರಿ 1 ಸೋಮವಾರ ರಾತ್ರಿ 10 ರ ಸುಮಾರಿಗೆ, ಲ್‌ನ ಕೃಷ್ಣಾಪುರದ 5 ನೇ ಬ್ಲಾಕ್‌ನಲ್ಲಿರುವ ಸರ್ಕಾರಿ ಸಂಯುಕ್ತ ಶಾಲೆಯ ಬಳಿ, ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮುಸ್ಲಿಮ್ ಕರ ಮೇಲೆ ಸುಮಾರು 30 ಜನರ ಗುಂಪೊಂದು ಹಠಾತ್ತನೆ ಎರಗಿ, ಮಾಡಿದೆ. ಈ ಯುವಕರ ಪೈಕಿ ಮುನೀಬ್ ಎಂಬವನ ನೆತ್ತಿ ಮತ್ತು ಕ್ಕೆ ಮೊಸೈಕ್ ಪೀಸಿನಿಂದ ಗಂಭೀರವಾದ ಹೊಡೆತ ಬಿದ್ದು ಸ್ಥಳದಲ್ಲೇ ಬಿದ್ದು ಪ್ರಜ್ಞಾಹೀನನಾದ. ಅವನನ್ನು ಅಲ್ಲಿಂದಲೇ ಎತ್ತಿಕೊಂಡು ಹೋಗಿ ಳೂರಿನ ಯೂನಿಟಿ ಆಸ್ಪತ್ರೆಯ ICU ವಾರ್ಡಿಗೆ ದಾಖಲು ಮಾಯಿತು. ಮುನೀಬ್‌ನ ಜೊತೆಗಿದ್ದ ನಿಜಾಮ್‌ನ ಕೈಗಳನ್ನು ಅವನ ಂದೆ ಎಳೆದು ಮರವೊಂದಕ್ಕೆ ಬಗಿದು ಹೊಡೆದರು. ಈ ತಂಡದಲ್ಲಿದ್ದ , ನೌಫಲ್, ಯಾಕುಬ್, ಅಲ್‌ರಫ್, ಅಲ್ತಫ್, ಅಜರುದ್ದೀನ್ ಮತ್ತು ದ್ ಅವರಿಗೂ ಏಟು ಬಿದ್ದಿದೆ; ಆದರೆ ಅಷ್ಟು ಗಂಭೀರವಾಗಿ ಅಲ್ಲ. ಮುಸ್ಲಿಮ್ ಯುವಕರು ಸುರತ್ಕಲ್‌ಗೆ ಹೊರಗಿನವರೇನೂ ಅಲ್ಲ. ಲ್ಲಿ ಹಲ್ಲೆ ನಡೆದ ಸ್ಥಳಕ್ಕೆ ಸಮೀಪವೇ ಇರುವ ಕೃಷ್ಣಾಪುರ 9ನೆಯ ಹುಡುಗರು. ಅವತ್ತು ಕೃಷ್ಣಾಪುರ 5ನೇ ಬ್ಲಾಕ್‌ನ ಸರಕಾರೀ ಶಾಲೆಯ ವಾರ್ಷಿಕೋತ್ಸವವಿತ್ತು, ಅದರ ಮನರಂಜನಾ ಕಾರ್ಯಕ್ರಮ ಲು ಮುನೀಬ್ ಮತ್ತು ಅವನ ಗೆಳೆಯರು ಶಾಲೆಗೆ ಹೋಗಿದ್ದರು. ಲ್ ಮತ್ತು ಕರಾವಳಿಯ ಇತರ ಅನೇಕ ಊರುಗಳಲ್ಲಿ ಮುಸ್ಲಿಮ್ ಕರು ಈಗೀಗ ಇಂತಹ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹಿಸುವುದಿಲ್ಲ; ಪ್ರೇಕ್ಷಕರಾಗಿಯೂ ಹೋಗುವುದಿಲ್ಲ. ಭಜರಂಗದಳ, ಮ ಸೇನೆ, ಹಿಂದೂ ಜಾಗರಣ ವೇದಿಕೆ ಇತ್ಯಾದಿ ಸಂಘಟನೆಗಳವರು ಮಾಡಿಯಾರು ಎಂಬ ಭಯವೇ ಈ ಹಿಂಜರಿಕೆಗೆ ಇರುವ ಏಕೈಕ

ಕರಾವಳಿಯ ಹಲವು ಕಾಲೇಜುಗಳಲ್ಲಿ ಕೂಡ, ಈಗ ಎಬಿವಿಪಿಯಿಂದಾಗಿ, ಮ್ ಯುವಕರು ಸದಾ ಭಯಭೀತರಾಗಿ ಇರುವಂತಹ ಸ್ಥಿತಿ ಇದೆ. ಬ್ ಮತ್ತು ಅವನ ಜೊತೆಗಿದ್ದ ಯುವಕರಿಗೆ ಕೂಡ ಈ ಪರಿಸ್ಥಿತಿಯ ಇತ್ತು. ಮುನೀಬ್ ಎರಡನೆಯ ವರ್ಷದ ಪಿಯುಸಿ ವಿದ್ಯಾರ್ಥಿಯಾಗಿದ್ದು ನ ಎಸ್.ಎಫ್.ಐ. ಘಟಕದ ಕಾರ್ಯದರ್ಶಿಯೂ ಆಗಿದ್ದಾನೆ. ಅವನ ದ್ದ ಇತರ ಮುಸ್ಲಿಮ್ ಯುವಕರೆಲ್ಲರೂ ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಎಲ್ಲರೂ ಎಸ್.ಎಫ್.ಐ. ಸದಸ್ಯರು. ದಾವೂದ್ ಒಬ್ಬ ಮಾತ್ರ ರ್ಥಿಯಲ್ಲ, ಅವನು ಗುಜರಿ ಸಂಗ್ರಹಿಸುವ ಉದ್ಯೋಗದಲ್ಲಿದ್ದಾನೆ. ಕೃಷ್ಣಾಪುರ ಬ್ಲಾಕ್‌ನ ಶಾಲೆ ತಮ್ಮ ಮನೆಗಳಿಗೆ ಸಮೀಪದಲ್ಲಿ ಇದ್ದುದರಿಂದ ಈ ಮ್ ಯುವಕರು, ಶಾಲಾ ಮಕ್ಕಳ ಕಾರ್ಯಕ್ರಮ ನೋಡುವ ಆಸೆಯಾಗಿ ಹೋದದ್ದು. ಅವತ್ತು ನಡೆದ ಘಟನೆಯ ಕುರಿತು ಹೇಳುತ್ತ ಬ್‌ನನ್ನೊಡನೆ "ಇನ್ನು ಮುಂದೆ ಅಂತಹದ್ದಕ್ಕೆಲ್ಲ ಎಲ್ಲಿಯೂ ವುದಿಲ್ಲ" ಎಂದು ಖಡಾಖಂಡಿತವಾಗಿ ಹೇಳಿದ.

ಮುನೀಬ್ ಮತ್ತು ಅವನ ಜೊತೆಗಿದ್ದವರು ಆ ರಾತ್ರಿ ಶಾಲೆಯ ಸಭಾಂಗಣಕ್ಕೆ ಾಗ, ವಾರ್ಷಿಕೋತ್ಸವದ ಸಭಾ ಕಾರ್ಯಕ್ರಮ ನಡೆದಿತ್ತು. ಸಭೆಯಲ್ಲಿದ್ದ ತರುಣರು, "ನೀವು ಯಾಕೆ ಇಲ್ಲಿಗೆ ಬಂದದ್ದು?" ಎಂದು ಇವರನ್ನು ದರಂತೆ. ತಾವು ನಾಟಕ ನೋಡಲು ಬಂದದ್ದು ಎಂದು ಇವರು ದರು. ನಂತರ ಸಭೆಯಲ್ಲೇ ಇದ್ದ ಆ ವಾರ್ಡಿನ ಬಿಜೆಪಿ ಕಾರ್ಪೊರೇಟರ್ ಕುಮಾರ್‌ಗೆ "ಹೊರಗಿನಿಂದ" ಮುಸ್ಲಿಮ್ ಹುಡುಗರು ಬಂದಿರುವ ದೂರು ಹೋಯಿತು. ತಿಲಕ್‌ಕುಮಾರ್ ಇವರ ಬಳಿ ಬಂದು, "ಉಪದ್ರವ ಬೇಡಿ" ಎಂದು ಹೇಳಿದರು. ನಾವು ಉಪದ್ರವ ಮಾಡಲು ಬಂದದ್ದಲ್ಲ ಇವರು ಜವಾಬು ನೀಡಿದರು. ಆದರೆ ಶಾಲೆಯ ಆವರಣದಲ್ಲಿ ಇನ್ನು ದು ಕ್ಷೇಮವಲ್ಲವೆಂದು ಹುಡುಗರಿಗೆ ಅನ್ನಿಸಿ ಅಲ್ಲಿಂದ ಮನೆಗೆ ದರು. ಆಗ ರಾತ್ರಿ ಸುಮಾರು 10 ಗಂಟೆ. ಕೃಷ್ಣಾಪುರ 9ನೆಯ ಲ್ಲಿರುವ ಅವರ ಮನೆಗಳು ಶಾಲೆಯಿಂದ ಆರೇಳು ನಿಮಿಷಗಳ ಹಾದಿ. ತಮ್ಮ ಮನೆಗಳಿಗೆ ವಾಪಸ್ಸು ಹೋಗುತ್ತಿರುವಾಗ ಶಾಲೆಗೆ ಸ್ವಲ್ಪ ಲ್ಲಿರುವ ಯುವಕ ಮಂಡಲದ ಕಟ್ಟಡದ ಬಳಿ ಅವರ ಮೇಲೆ ಹಲ್ಲೆ ತು.

ಮುನೀಬ್ ಮತ್ತು ಅವನ ಸಂಗಡಿಗರಿಗೆ ತಮ್ಮ ಮೇಲೆ ಹಲ್ಲೆ ಮಾಡಿದವರ ಗೊತ್ತಿಲ್ಲ; ಆದರೆ ಗುರುತು ಹತ್ತುತ್ತದೆ. ಆ ಗುಂಪಿನಲ್ಲಿದ್ದವರು ಸ್ಥಳೀಯರು ಮತ್ತು ಇವರಿಗೆ ನೋಡಿ ಪರಿಚಯ ಇರುವವರು. ಬ್ ಮತ್ತು ಆ ದಿನ ಅವನ ಜೊತೆ ಪೆಟ್ಟು ತಿಂದ ಒಂದಿಬ್ಬರು ನನಗೆ ಪ್ರಕಾರ ಅವರ ಮೇಲೆ "ಅಟ್ಯಾಕ್" ಮಾಡಿದವರೆಲ್ಲರೂ ಅದೇ ವರು, ಅವರದ್ದೇ ಪ್ರಾಯದವರು ಮತ್ತು "ಕೆಲಸಕ್ಕೆ ಹೋಗುವವರು" ಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ "ಕೆಲಸಕ್ಕೆ ಹೋಗುವವರು" ಮಾತಿಗೆ ವಾಚ್ಯಾರ್ಥಕ್ಕಿಂತ ಭಿನ್ನವಾದ ಧ್ವನ್ಯರ್ಥವಿದೆ. ಇಲ್ಲಿ ಕಚೇರಿ ಬ್ಯಾಂಕು, ಶಾಲೆ, ಕಾಲೇಜುಗಳಲ್ಲಿ ಉದ್ಯೋಗ ಮಾಡುವವರನ್ನು "ಕೆಲಸಕ್ಕೆ ಹೋಗುವವರು" ಎಂದು ಕರೆಯುವುದಿಲ್ಲ. ಉತ್ತರ ಕರ್ನಾಟಕದಿಂದ ವಲಸೆ ಬಂದು ಇಲ್ಲಿ ಬರೇ ದೈಹಿಕ ಶ್ರಮದ ಕೆಲಸಗಳನ್ನಷ್ಟೇ ಮಾಡುವ "ಬಿಜಾಪುರದ ಕೂಲಿ"ಗಳಿಗೂ ಆ ಸಂಬೋಧನೆ ಇಲ್ಲ. "ಕೆಲಸಕ್ಕೆ ಹೋಗುವವರು" ಎಂದರೆ ಅಲ್ಪಸ್ವಲ್ಪ ಶಿಕ್ಷಣದ ಜೊತೆ ವೃತ್ತಿ ಕೌಶಲವನ್ನೂ ಬಯಸುವ, ಆದರೆ ಹಂಗಾಮಿಯಾಗಿರುವ ಉದ್ಯೋಗಗಳಲ್ಲಿ ತೊಡಗಿಕೊಂಡಿರುವ ಸ್ಥಳೀಯರು: ಉದಾ. ಫಿಟ್ಟರು, ಮೆಕ್ಯಾನಿಕ್, ಬಸ್, ಟ್ಯಾಕ್ಸಿ, ಆಟೋರಿಕ್ಷಾ ಸಿಬ್ಬಂದಿ, ಗಾರೆ ಸೆಂಟ್ರಿಕೆಲಸದವರು, ಇತ್ಯಾದಿ.

ಕರಾವಳಿಯಲ್ಲಿ ಸುರತ್ಕಲ್ ಮಾತ್ರವಲ್ಲ, ಮಂಗಳೂರು, ಪುತ್ತೂರು, ಸುಳ್ಯ ವಿಟ್ಲ ಉಪ್ಪಿನಂಗಡಿ, ಬಂಟವಾಳ, ಮೂಲ್ಕಿ ಮೂಡುಬಿದಿರೆ, ಉಡುಪಿ, ಕುಂದಾಪುರ ಮುಂತಾದ ಪಟ್ಟಣಗಳಲ್ಲಿ ಸಹ ಭಜರಂಗದಳ, ಶ್ರೀರಾಮ ಸೇನೆ, ಹಿಂದೂ ಜಾಗರಣ ವೇದಿಕೆ ಮುಂತಾದ ತೋಳ್ಬಲದ ಹಿಂದೂತ್ವ ಸಂಘಟನೆಗಳ "ಮಾನವ ಸಂಪನ್ಮೂಲ" ಇದೇ "ಕೆಲಸಕ್ಕೆ ಹೋಗುವವರ" ವರ್ಗ. ಕೋಮು ಹಿಂಸೆ ನಡೆಸುವವರನ್ನು "ಗೂಂಡಾ", "ಕಿಡಿಗೇಡಿ" ಅಥವಾ "ಹೊರಗಿನಿಂದ ಬಂದವರು" ಎಂದು ವರ್ಣಿಸುವ ಮಾತಿನ ರೂಢಿ ಕನ್ನಡದಲ್ಲಿ ಈಗಲೂ ಚಾಲ್ತಿಯಲ್ಲಿದೆ. ಕನ್ನಡಿಗರು ಶಾಂತಿಪ್ರಿಯರು ಮತ್ತು ಸಹಿಷ್ಣುಗಳು. ಕರ್ನಾಟಕದಲ್ಲಿ ನಡೆಯುವ ಹಿಂಸೆ ಏನಿದ್ದರೂ ಒಂದೋ ಕಿಡಿಗೇಡಿಗಳು ಅಥವಾ "ಹೊರಗಿನಿಂದ ಬಂದವರು" ಮಾಡುವಂತಹದ್ದು ಎಂಬ ನಂಬಿಕೆ ವ್ಯಾಪಕವಾಗಿದೆ. ಆದರೆ ಭಜರಂಗದಳದ ಕಾಲಾಳುಗಳಲ್ಲಿ ಹೆಚ್ಚಿನವರು ಗೂಂಡಾಗಳಲ್ಲ; ಕಿಡಿಗೇಡಿಗಳೂ ಅಲ್ಲ. ಅವರು ನಡೆಸುವ ಹಿಂಸೆಗೆ ಜನರ ಮೌನ ಸಮ್ಮತಿ ಇರುವುದನ್ನೂ ನಾವು ಮರೆಯುವಂತಿಲ್ಲ.



ಸುರತ್ಕಲ್‌ನಲ್ಲಿ ಮುನೀಬ್ ಮತ್ತು ಇತರ ಯುವಕರ ಮೇಲೆ ಯಾಕೆ ಈ ಹಲ್ಲೆ ನಡೆಯಿತು? ಈ ಕುರಿತು ಜಿಲ್ಲೆಯ ಪ್ರತಿಯೊಂದು ಪತ್ರಿಕೆಯೂ ತನ್ನದೇ ಆದ ನಿರೂಪಣೆಗಳನ್ನು ನೀಡಿದೆ. ಆದರೆ ಎಲ್ಲ ಪತ್ರಿಕೆಗಳೂ ಈ ಮುಸ್ಲಿಮ್ ಹುಡುಗರನ್ನು ಹೊಡೆಯಲು, ಹೊಡೆದವರಿಗೆ ಒಳ್ಳೆಯ ಕಾರಣಗಳಿದ್ದವು ಎಂಬ ಅರ್ಥ ಹೊರಡಿಸುವ ವರದಿಗಳನ್ನೇ ಪ್ರಕಟಿಸಿವೆ. ಈ ಘಟನೆ ನಡೆದ ಮರುದಿನ ಈ ಬಗ್ಗೆ ಸುರತ್ಕಲ್ ಪೊಲೀಸು ಠಾಣೆಗೆ ದೂರು ಕೊಡಲಾಗಿದ್ದು, ದೂರಿನಲ್ಲಿ ಹೆಸರಿಸಿದ ಆರೋಪಿಗಳಲ್ಲಿ ಇಬ್ಬರನ್ನು ಬಂಧಿಸುವ ಶಾಸ್ತ್ರ ಮಾಡಲಾಗಿದೆ. ಉದಯವಾಣಿ ವರದಿ ಪ್ರಕಾರ ಹಲ್ಲೆಗೊಳಗಾದ ಮುಸ್ಲಿಮ್ ಯುವಕರು "ವಿದ್ಯಾರ್ಥಿನಿಯರನ್ನು ಇಣುಕಿ ನೋಡುತ್ತಿದ್ದರು ಎಂದು ಬಂಧಿತರು ಆರೋಪಿಸಿದ್ದಾರೆ. ಸ್ಥಳೀಯರು ಹಾಗೂ ಪೊಲೀಸರ ಎಚ್ಚರಿಕೆಯ ಹೊರತಾಗಿಯೂ ಅವರು ವರ್ತನೆಯನ್ನು ಮುಂದುವರಿಸಿದ್ದರಿಂದ ಕೆರಳಿದ ಕೆಲ ಯುವಕರು ಶಾಲೆಯಿಂದ ಸ್ವಲ್ಪ ದೂರದ ಯುವಕ ಮಂಡಲದ ಬಳಿ ಈ ಯುವಕರು ಹಿಂದಿರುಗುವುದನ್ನು ಕಾದು ಕುಳಿತು ಹಿಗ್ಗಾಮುಗ್ಗಾ ಥಳಿಸಿದರು ಎನ್ನಲಾಗಿದೆ." (ಉದಯವಾಣಿ ಮಣಿಪಾಲ ಆವೃತ್ತಿ 3.2.10).

ಉದಯವಾಣಿಯ ಈ ವರದಿ, ನೂರಕ್ಕೆ ನೂರು ಸುಳ್ಳು. ವಾರ್ಷಿಕೋತ್ಸವ ಸಮಾರಂಭ ನಡೆದದ್ದು ಕೃಷ್ಣಾಪುರ ಪ್ರೌಢಶಾಲೆಯ "ಮಂಜುಶ್ರೀ" ರಂಗಮಂದಿರದಲ್ಲಿ, ಅದರ ಎದುರಿಗೆ ಇರುವ ವಿಶಾಲವಾದ ಆಟದ ಬಯಲಿನಲ್ಲಿ ಅಂದು ಸಾವಿರಾರು ಪ್ರೇಕ್ಷಕರು ಜಮಾಯಿಸಿದ್ದರು. ಈ ಬಯಲಿನಲ್ಲಿ ಕೂತು, ಯಾವ ವಿದ್ಯಾರ್ಥಿನಿಯನ್ನೂ ಎಲ್ಲಿಂದಲೂ "ಇಣುಕಿ ನೋಡಲು" ಸಾಧ್ಯವೇ ಇಲ್ಲ. ಕನ್ನಡಪ್ರಭ ಪತ್ರಿಕೆ ಈ ಘಟನೆಯ ಕುರಿತು ತನ್ನ ವರದಿಯಲ್ಲಿ "ವಾರ್ಷಿಕೋತ್ಸವದ ವೇಳೆ" ವಿದ್ಯಾರ್ಥಿನಿಯರು ಬಟ್ಟೆ ಬದಲಾಯಿಸುತ್ತಿರುವುದನ್ನು ಕಿಟಕಿಯಲ್ಲಿ ನೋಡಿದ ಆರೋಪ ಈ ಹಲ್ಲೆಗೆ ಕಾರಣವೆಂದು ತಿಳಿಸಿದೆ. ಇದು ಕೂಡ ಒಂದು ಮಾನಗೆಟ್ಟ ಸುಳ್ಳು. ಮುನೀಬ್ ಮತ್ತು ಇತರ ಮುಸ್ಲಿಮ್ ಹುಡುಗರ ವಿರುದ್ಧ ಶಾಲೆಯ ಮುಖ್ಯೋಪಾಧ್ಯಾಯಕರಾಗಲೀ, ವಿದ್ಯಾರ್ಥಿನಿಯರಾಗಲೀ, ಅವರ ಹೆತ್ತವರಾಗಲೀ ಯಾರಿಗೂ ದೂರು ಕೊಟ್ಟಿರಲಿಲ್ಲ. ಪೊಲೀಸರು ಈ ಮುಸ್ಲಿಮ್ ಯುವಕರಿಗೆ ಎಚ್ಚರಿಕೆ ನೀಡಿದ್ದರು ಎಂಬ ಮಾತು ಸಹ ಹಸಿಸುಳ್ಳು. ಸುರತ್ಕಲ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕೆ.ಯು. ಬೆಳ್ಳಿಯಪ್ಪನವರೇ ನನಗೆ ಇದನ್ನು ದೃಢಪಡಿಸಿದ್ದಾರೆ. ಪೊಲೀಸರಿಗೆ ವಿಷಯ ಗೊತ್ತಾದದ್ದೇ ಹಲ್ಲೆಯ ಕುರಿತು ಅವರಿಗೆ ದೂರು ಬಂದ ನಂತರ. ಮುನೀಬ್ ಮತ್ತು ಅವನ ಜೊತೆಗಿದ್ದ ತರುಣರ ಮೇಲೆ ಆ ರಾತ್ರಿ ಹಲ್ಲೆ ನಡೆದದ್ದಕ್ಕೆ ಅವರು ಮುಸ್ಲಿಮರು ಎಂಬುದನ್ನು ಹೊರತುಪಡಿಸಿ ಬೇರೆ ಯಾವ ಕಾರಣವೂ ಇರಲಿಲ್ಲ.

ಮುಸ್ಲಿಮರನ್ನು ಸಮಾಜದ ಅಂಚಿನ ಆಚೆಗೆ ತಳ್ಳುವ ಮತ್ತು ಆ ಸಮುದಾಯಕ್ಕೆ "ಬಹಿಷ್ಕಾರ" ಹಾಕುವ ಹಿಂದೂತ್ವದ ಕಾರ್ಯಕ್ರಮದ ಭಾಗವಾಗಿಯೇ ಈ ಹಲ್ಲೆ ನಡೆದಿದೆ. ಇದು ಇವತ್ತು ನಿನ್ನೆಯ ಆಕಸ್ಮಿಕ ಘಟನೆ ಅಲ್ಲ. 9 ಜೀವಗಳನ್ನು (7 ಮುಸ್ಲಿಮ್, 2 ಹಿಂದೂ) ಬಲಿ ತೆಗೆದುಕೊಂಡ 1998 ರ ಸುರತ್ಕಲ್ ಕೋಮು ಹಿಂಸಾಚಾರ ಪ್ರಾರಂಭವಾದದ್ದೂ ಒಂದು ಅಪ್ಪಟ ಸುಳ್ಳಿನಿಂದ. ಅಬ್ದುಲ್ ಖಾದರ್ ಎಂಬ ವಿದ್ಯಾರ್ಥಿ ಸುರತ್ಕಲ್ ಗೋವಿಂದದಾಸ ಕಾಲೇಜು ವಾರ್ಷಿಕೋತ್ಸವದ ಸಂದರ್ಭದಲ್ಲಿ ಹಿಂದೂ ಹುಡುಗಿಯನ್ನು ಚುಡಾಯಿಸಿದ ಎಂಬ ಕಾರಣಕ್ಕೆ ಹಿಂಸಾಚಾರ ಪ್ರಾರಂಭವಾಯಿತು. ಅಂತಹ ಘಟನೆಯೇ ನಡೆದಿರಲಿಲ್ಲ ಎಂದು ನಂತರ ಆ ಕಾಲೇಜಿನ ಕರೆಸ್ಪಾಂಡೆಂಟ್ ಅವರೇ ನಮಗೆ ತಿಳಿಸಿದರು. ಮೊನ್ನೆ ಮುನೀಬ್ ಮತ್ತು ಇತರರ ಮೇಲೆ ಹಲ್ಲೆ ನಡೆದ ಇದೇ ಕೃಷ್ಣಾಪುರ 5 ನೇ ಬ್ಲಾಕ್‌ನಲ್ಲಿ, 1998 ರ ಹಿಂಸಾಚಾರದ ದಿನಗಳಲ್ಲಿ ಜಕೀರ್ ಹುಸೇನ್ ಎಂಬ 22 ವರ್ಷದ ತರುಣನನ್ನು ಅವನ ಮನೆಯಲ್ಲಿ, ಅವನ ತಾಯಿ, ತಂಗಿಯರ ಕಣ್ಣೆದುರೇ ಕಬ್ಬಿಣದ ರಾಡಿನಲ್ಲಿ ತಲೆಗೆ ಹೊಡೆದು ಕೊಲ್ಲಲಾಗಿತ್ತು. ಕೊಲೆಗಡುಕರೆಲ್ಲ ಸುರತ್ಕಲ್‌ನವರೇ ಆಗಿದ್ದರು; ಅವರಲ್ಲಿ ಒಬ್ಬ ಜಕೀರ್ ಹುಸೇನ್‌ರ ತಾಯಿ ಜೋಹರಾಬೀ ಬಳಿ, "ಅಮ್ಮ ಬೇಜಾರು ಮಾಡಿಕೊಳ್ಳಬೇಡಿ. ಈ ಟೈಮಿನಲ್ಲಿ ಇದೆಲ್ಲ ಮಾಮೂಲು" ಅಂದನಂತೆ. ಇಲ್ಲಿ ಮಾಮೂಲು ಸಂಗತಿಗಳೇ ಎಷ್ಟು ಭಯಾನಕವಾಗಬಲ್ಲವು!

ಬಸ್ಸು, ಬಸ್‌ಸ್ಟ್ಯಾಂಡು, ಟೀ ಸ್ಟಾಲ್, ಐಸ್‌ಕ್ರೀಮ್ ಪಾರ್ಲರ್, ಕಾಲೇಜು ಕಾರಿಡಾರು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂ ಹುಡುಗಿಯರ ಜೊತೆ ಮಾತಾಡುತ್ತಿದ್ದರು ಅಥವಾ ಜೊತೆಯಲ್ಲಿ ಹೋಗುತ್ತಿದ್ದರು ಅಥವಾ ಬರೇ ಕಾಣಿಸಿಕೊಂಡರು ಎಂಬ ಕಾರಣಕ್ಕೆ ಕರಾವಳಿಯ ಊರುಗಳಲ್ಲಿ ಮುಸ್ಲಿಮ್ ತರುಣರ ಮೇಲೆ ಅಮಾನುಷ ಹಲ್ಲೆಗಳು ಈಗ "ಮಾಮೂಲಾಗಿ" ಎಂಬಂತೆ ನಡೆಯುತ್ತಿವೆ. ಕೆಲವು ವರ್ಷಗಳ ಹಿಂದೆ ಪುತ್ತೂರಿನ ಥೇಟರಿನಲ್ಲಿ ಹಿಂದೂ ತರುಣಿಯರು ತಮ್ಮ ಮುಸ್ಲಿಮ್ ಸಹೋದ್ಯೋಗಿಗಳ ಜೊತೆ ಕೂತು ಸಿನಿಮಾ (ರಾತ್ರಿ ಶೋ ಕೂಡ ಅಲ್ಲ ಮಾಟನಿ!) ನೋಡುತ್ತಿದ್ದರು ಎಂಬ ಕಾರಣಕ್ಕೆ ಊರಿನಲ್ಲಿ ದೊಂಬಿ, ಸೆಕ್ಷನ್ 144 ಇತ್ಯಾದಿ ಎಲ್ಲ ಆಗಿಹೋಯಿತು. ಮುಸ್ಲಿಮನೊಬ್ಬನ ಜೊತೆ ಮಾತಾಡಿದಳು ಎಂಬ ಕಾರಣಕ್ಕೆ ಮಂಗಳೂರಿನಲ್ಲಿ ಕೇರಳದ ಶಾಸಕನ ಮಗಳ ಮೇಲೆ ಹಲ್ಲೆ ನಡೆಯಿತು: ಮುಸ್ಲಿಮರ ಜೊತೆ ಮಾತಾಡಿದ ತಪ್ಪಿಗೆ ಹೆಜಮಾಡಿಯ ವನಿತ ಮತ್ತು ಮೂಡುಬಿದಿರೆಯ ಅಶ್ವಿನಿಕುಲಾಲ್ ತಮ್ಮ ಪ್ರಾಣಕ್ಕೇ ಎರವಾಗಬೇಕಾಯಿತು.

ಈಗ ಕರಾವಳಿಯ ಹಿಂದೂತ್ವದ ನೈತಿಕ ಪೊಲೀಸರು, ತಮ್ಮ ಸ್ವಂತದ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ಹೊಸ ಕಲಮು ಒಂದನ್ನು ಸೇರಿಸಿಕೊಂಡಿದ್ದಾರೆ. ಮುಸ್ಲಿಮ್ ಯುವಕರು ಹಿಂದೂ ಹುಡುಗಿಯರ ಜೊತೆ ಮಾತಾಡಕೂಡದು; ಅಷ್ಟೇ ಅಲ್ಲ ಅವರನ್ನು ಸ್ಟೇಜ್ ಮೇಲೆ ನೋಡಲೂ ಕೂಡದು ಎಂಬ ನಿಯಮವೊಂದು ಈಗ ನಿಧಾನವಾಗಿ ಜಾರಿಗೆ ಬರುತ್ತಿದೆ. ಈ ವರ್ಷ ಜನವರಿ 6 ರಂದು ಮಂಗಳೂರಿನ ಕೊಣಾಜೆ ಸಮೀಪದ ಕುರ್ನಾಡು ಸರಕಾರೀ ಜೂನಿಯರ್ ಕಾಲೇಜಿನ ಟ್ಯಾಲೆಂಟ್ಸ್‌ಡೇ ಸಮಾರಂಭ ನಡೆಯಿತು. ಸಮಾರಂಭದ ನಡುವೆ ಭಜರಂಗದಳದವರು ಎಂದು ಹೇಳಲಾದ ತರುಣರ ಒಂದು ಗುಂಪು ಸಭಾಂಗಣಕ್ಕೆ ನುಗ್ಗಿ, ಪವರ್ ಕೇಬಲ್ಲುಗಳನ್ನು ಕತ್ತರಿಸಿ, ದೀಪಗಳನ್ನು ಆರಿಸಿ, ಗದ್ದಲ ಎಬ್ಬಿಸಿದರು. ಅವರ ಬೇಡಿಕೆ ಏನು ಗೊತ್ತೆ? ಸಭೆಯಲ್ಲಿದ್ದ ಮುಸ್ಲಿಮ್ ವಿದ್ಯಾರ್ಥಿಗಳ ಎದುರು ಸ್ಟೇಜ್ ಮೇಲೆ ಹಿಂದೂ ಯುವತಿಯರು ಡ್ಯಾನ್ಸ್ ಮಾಡುವಂತಿಲ್ಲ. ಮುಸ್ಲಿಮ್ ವಿದ್ಯಾರ್ಥಿಗಳನ್ನು ಸಭೆಯಿಂದ ಹೊರಗೆ ಕಳುಹಿಸಬೇಕು ಎಂಬುದು ಅವರ ಹಠವಾಗಿತ್ತು. ಕಾಲೇಜಿನ ಪ್ರಿನ್ಸಿಪಾಲರು ಅದಕ್ಕೆ ಸುತಾರಾಂ ಒಪ್ಪಲಿಲ್ಲ; ಅವರ ಜೊತೆ ಅರ್ಧ ಗಂಟೆ ವಾದ ಮಾಡಿದ ಮೇಲೆ ಕೊನೆಯದಾಗಿ ಭಜರಂಗಿಗಳು ಮುಂದಿಟ್ಟ ಬೇಡಿಕೆ- "ಹಿಂದೂ ಹುಡುಗಿಯರ ಡ್ಯಾನ್ಸಿಗೆ ಮುಸ್ಲಿಮ್ ಹುಡುಗರು ಚಪ್ಪಾಳೆ ಹೊಡೆಯಬಾರದು" ಎಂಬುದಾಗಿತ್ತು! ಕಾಲೇಜು ಪ್ರಿನ್ಸಿಪಾಲರು ಅದಕ್ಕೂ ಸಮ್ಮತಿಸಲಿಲ್ಲ. ಕರಾವಳಿಯಲ್ಲಿ ಮೂರಾಬಟ್ಟೆಯಾಗುತ್ತಿರುವ ಭಾರತ ಸಂವಿಧಾನದ ಮಾನ ಆವತ್ತು ಕುರ್ನಾಡು ಸರಕಾರೀ ಕಾಲೇಜಿನ ಪ್ರಿನ್ಸಿಪಾಲರಿಂದ ಉಳಿಯಿತು.

● ಜಿ. ರಾಜಶೇಖರ



ಕೊರಗು

ಕಲೆಯಾಗುವ ನಮ್ಮ
ಜೀವಂತ ಚಿತ್ರಣಗಳು
ನನ್ನ ಹಂಗಿಸಿ ಹಾದು ಹೋಗುವಾಗ
ಕಲೆ ಸಾಹಿತ್ಯ ಸಂಸ್ಕೃತಿಯನ್ನೆಲ್ಲ
ಮರೆಗೆ ಸರಿಸಿ ಮರುಗುತೇನೆ
ಆಶಯಗಳ ಮೂಡಿಸದ
ಪ್ರಯಾಸದ ಹಾದಿಯಲ್ಲಿ ನಿಂತು.

ನಮ್ಮೂರಲ್ಲಿ
ಕೊರಗನೊಬ್ಬ ತನ್ನ
ಬದುಕಿಗೂ ಮೀರಿದ ಕನಸ ಕಂಡದ್ದು
ಕಾದಂಬರಿಕಾರನ ಹುಟ್ಟಿಸಿಬಿಟ್ಟಿತು
ಜಾತಿಯನೇ ಜೀವಂತವಾಗಿಟ್ಟೂರಿನಲಿ
ಜಾತ್ಯತೀತ ಬಸಿರದು!
ಅಜರಾಮರವಾಯಿತು ಕಾದಂಬರಿ ಕೂಸು
ಕೊರಗನ ಕನಸಿನ ಸಾಕಾರ
ಕತೆಯೊಳಗೂ ಆಗದುಳಿಯಿತು.

ಊರ ಜಾತ್ರೆಯ ನೆವದಲ್ಲಿ
ಡೊಳ್ಳು ಚಂಡೆ ದುಡಿಗೆ ಪೆಟ್ಟಿಟ್ಟು
ಜಾತಿಯನೇ ಜೀವಂತವಾಗಿಟ್ಟೂರಿನಲಿ
ದೇವರ ಎಚ್ಚರಿಸಿದರೆ; ಪಲ್ಲಕ್ಕಿಯಲಿ
ಶವದ ಮೆರವಣಿಗೆ ನಡೆದು ವೈಭವದಲಿ
ಗುಡಿಯ ಗರ್ಭದೊಳಗೆ ಅಂತರ್ಧಾನವಾಗುತ್ತಾನೆ
ಕೆಡುಕ ಕುರುಡ ಕೊರಡು ದೇವರು.

ಪೆಟ್ಟು ತಿಂದ
ಡೊಳ್ಳು ಚಂಡೆ ದುಡಿಗಳು
ಜಾತ್ರೆಯ ಬೆವರ ತೇವಕ್ಕೆ
ಸ್ವರ ಕಳೆದುಕೊಂಡು
ಕೆಪ್ಪಾಗಿ ಬಡುತ್ತವೆ.


ಕೊರಗನ ಮೊರೆ
ಜಾತ್ರೆಯ ನಿನಾದವಾಗಿ ರಂಗೇರಿ
ಬಣ್ಣದ ಹೊದ್ದು ಬೆಳ್ಳಿತೆರೆಯೊಳು
ಮಿಂಚಿ ಪ್ರಶಸ್ತಿ ತರುತ್ತದೆ
ಕೊರಗನಿಗಲ್ಲ!! ಅವನ ಬದುಕಿಗೆ
ಭರವಸೆಯ ಬೆಳ್ಳಿಮೂಡಿಸದೆ
ಶಾಶ್ವತ 'ಕಲೆ'ಯಾಗಿ ಬಡುತ್ತದೆ.

ಓ ಹಿರಿಯ
ನಮ್ಮ ಕಪ್ಪು ಮೈ ಬಣ್ಣ
ಕರಿಯ ಕನಸುಗಳು ಕತ್ತಲೆಯ ಸೀಳಿ
ಬೆಳಕಾಗಿ ಹೊಳೆಯಲಿಲ್ಲ; ಬದಲು,
ಸಮಾಜದ ಶ್ರೇಷ್ಠರ ಆವಿಷ್ಕರಿಸಿದವು!


ನಿನ್ನ ನಂತರದವರು ನಡೆಯುತ್ತಿರುವುದು
ಕನಸ ಕಮರಿಸುವ ಹಾದಿಯಲ್ಲೇ!
ಓ ಕೊರಗ,
ಕಲೆ ಸಾಹಿತ್ಯ ಸಂಸ್ಕೃತಿಯೆಲ್ಲ
ನಮ್ಮ ಬದುಕ ಚಿತ್ರಿಸುತ್ತವೆ;
ಚೆಲುವಾದ ಬದುಕ ನಮಗೆ ನೀಡದೆ!!


● ಸಂತೋಷ ಗುಡ್ಡಿಯಂಗಡಿ

ಲಂಕೇಶ್-ನನ್ನ ಆತ್ಮೀಯ ಸಂಬಂಧ



ಲಂಕೇಶರ ಹುಟ್ಟುಹಬ್ಬದ ನಿಮಿತ್ತ ಈ ಚಿಕ್ಕ ಲೇಖನ ಬರೆದು ಅವರಿಗೆ ಆತ್ಮೀಯ ಶುಭಾಶಯ ಕೋರುತ್ತೇನೆ. ನಾನು-ಲಂಕೇಶ್ ಎರಡು ಧ್ರುವದ ಹಾಗೆ. ಆದರೆ ಯಾವುದೋ ಒಂದು ಚುಂಬಿತ ಗಾಳಿ ನಮ್ಮಲ್ಲಿ ಹರಿಯುತ್ತದೆ. ನಮ್ಮಲ್ಲಿ ಬಹಿರಂಗ ವೈಷಮ್ಯಗಳಿವೆ, ವೈರುಧ್ಯಗಳಿವೆ. ಆದರೆ ಸಾಮ್ಯಕ್ಕೂ ಕೊರತೆಯಿಲ್ಲ. ಹಿರಿಯ ಜನಾಂಗದ ಲೇಖಕರು-ಬುದ್ಧಿಜೀವಿಗಳು ನನ್ನನ್ನು ಮೆಚ್ಚುತ್ತಾರೆ! ಕಿರಿಯಬಲ್ಲೂ ನನ್ನ ದೂರದಿಂದ ಮೆಚ್ಚಿಕೊಂಡವರುಂಟು; ಆದರೆ ನನಗೆ ತೀವ್ರ ವಿರುದ್ಧ ಮನಸ್ಸಿನವರಾದ ಲಂಕೇಶ್ ನನ್ನನ್ನು ಮೆಚ್ಚಿಕೊಂಡದ್ದು ನನಗೆ ಯಾವಾಗಲೂ ಆಶ್ಚರ್ಯವುಂಟು ಮಾಡುತ್ತದೆ. (ಬಹಿರಂಗವಾಗಿ ಟೀಕಿಸಿದ್ದಾರೆ. ಅತಿ ಕಟುಟೀಕೆಯ ಲೇಖನವೊಂದನ್ನು 'ತಮಾಷೆ' ಎಂದು ಸಮರ್ಥಿಸಿಕೊಂಡು, ಮೈಸೂರಿನಲ್ಲಿ ಆದ ನನ್ನ ಮೇಲಿನ ಹಲ್ಲೆಯನ್ನು ಕಟುವಾಗಿ ನಿಂದಿಸಿ ನನಗೆ ಪತ್ರ ಬರೆದಿದ್ದರು). ಅಭಿಪ್ರಾಯಗಳು ಇನ್ನೂ ಕನಸು ಎಂದು ನನ್ನ ಭಾವನೆ. ಆದರೆ ಅಂತಃಕರಣ ವಿಶಾಲವಾದದ್ದು. ಇದಕ್ಕೆ 'ಅಕ್ಷರ ಹೊಸಕಾವ್ಯ'ದಲ್ಲಿ ನನಗೆ ಸಿಕ್ಕ ಅವಾಸ್ತವ ಮಹತ್ವವೊಂದು ಸಾಕ್ಷಿ. ಇದಕ್ಕೂ ದೊಡ್ಡ ಸಾಕ್ಷಿಯೆಂದರೆ, ಬೆಂಗಳೂರಿನಲ್ಲಿ ನಡೆದ ಕಾರಂತ ಸೆಮಿನಾರಿನಲ್ಲಿ ನನ್ನ ಪೇಪರಿಗೆ ಹಾಜರು ಇದ್ದ ಲಂಕೇಶರು ಅದು ಮುಗಿದನಂತರ, ಹೊರಗೆ ಹೋಗುತ್ತ ಕ್ಷಣಾರ್ಧ ನಿಂತು, ನನಗಷ್ಟೇ ಕೇಳಿಸುವಂತೆ, **"You are a damned westernised Indian!"** ಇಷ್ಟೇ ಹೇಳಿ ಹೊರಟುಹೋದರು. ನಾನು ತಬ್ಬಿಬ್ಬಾದೆ. ಭಾರತೀಯ ಸಂಸ್ಕೃತಿಯ ಕಟ್ಟಾ ಅನುಮೋದಕನಾದ ನನ್ನ ಭಾಷಣ-ಲೇಖನಗಳನ್ನು ಓದಿದವರು, ನನ್ನನ್ನು **`fanatic Indian'** ಎಂದವರು ಹಲವರು. ಅವರ ಬುದ್ಧಿ ಅಷ್ಟೇ. ಆದರೆ ಸೂಕ್ಷ್ಮಮತಿ ಲಂಕೇಶ್ (ಹೊರಗೆ ಸೈತಾನನಂತೆ ನಗುತ್ತಿದ್ದರೂ) ನನ್ನ ಬಾಹ್ಯ **fanaticism** ದ ಹಿಂದೆ ಅಡಗಿದ ಪಾಶ್ಚಾತ್ಯ ವಿಜ್ಞಾನ-ಸಾಹಿತ್ಯ ತತ್ವಜ್ಞಾನಗಳ ಅಭ್ಯಾಸದ ಮೇಲೆ ನನ್ನ ನೇರ ವಿಚಾರಸರಣಿ ನಿಂತಿದೆಯೆಂದು ಗುರುತಿಸಿದರು. ಆ ಕ್ಷಣ ನನ್ನ ಕಣ್ಣು ಒದ್ದೆಯಾದವು. ಯಾರೂ ಗುರುತಿಸದ ನನ್ನನ್ನು ಗುರುತಿಸಿದ ಶತ್ರು, ಲಂಕೇಶ! ನನ್ನ ಭಾರತೀಯ ವಿಚಾರಸರಣಿಗೆ ಅನೇಕ ನವ್ಯರು ಬೇಸರಗೊಂಡಿದ್ದಾರೆ. ನನ್ನ ನಿಷ್ಠುರ. ವಿಕ್ಷಿಪ್ತ ಅಭಿಪ್ರಾಯಗಳಿಗೆ ಹಿರಿಯರು ಬೇಸತ್ತಿದ್ದಾರೆ. ನಾನು ಮೆಚ್ಚಿದ ಹಿರಿಯರೂ ನನ್ನ ಶ್ಲಾಘನೆಯಲ್ಲಿಯೇ ತುಸು **lukewarm** ಎಂದು ಕಂಡುಬಂದ ಅಂಶಗಳ ಬಗ್ಗೆ ಸಿಟ್ಟಿಗೇಳುತ್ತಾರೆ. ನಾನು ಏನೂ ಟೀಕೆ ಮಾಡದಿದ್ದಾಗಲೂ ನನ್ನ ವಿಮರ್ಶೆಯಲ್ಲಿ ಅವರ ನಮೂದು ಇಲ್ಲದ್ದಕ್ಕಾಗಿ ಸಿಟ್ಟಿಗೇಳುತ್ತಾರೆ. ನಾನೇನು ಪರಬ್ರಹ್ಮನೆ? ಸರ್ವಸಾಕ್ಷಿಯೆ? ನನ್ನ ಸೀಮೆಗಳನ್ನು, ದೌರ್ಬಲ್ಯಗಳನ್ನು ಲಂಕೇಶ ಅರಿವಷ್ಟರ ಅರೆಪಾಲನ್ನಾದರೂ ಇತರರು ಅರಿಯಬಲ್ಲರಾದರೆ, ನನಗೆ ಕ್ಷೇಮ. ಕೌತುಕಾಸ್ಪದವೆಂದರೆ, ನನ್ನ ವಿರುದ್ಧ ಧ್ರುವವಾಗಿ ನಿಂತು, ತನ್ನ ಯಶಸ್ಸು ಮರೆತು, **westernised Indian** ಎಂದು ಕರೆದ ಲಂಕೇಶರಿಗೆ ನಾನು ಚಿರಋಣಿ. ಅದು ಬೈಗುಳವೋ ಹೊಗಳಿಕೆಯೋ ನಾನರಿಯೆ. ಅಂದು ಓದಿದ ಪೇಪರು ನನ್ನ ಶ್ರೇಷ್ಠ ಪೇಪರ್ ಎಂದು ಹೇಳಲಾರೆ. ಬೆಂಗಳೂರು ವಿ.ವಿ.ದ ಕನ್ನಡ ಕೇಂದ್ರಕ್ಕಾಗಿ ಇನ್ನೂ ಒಳ್ಳೆಯ ಪೇಪರ್ ಓದಿದ್ದೇನೆ. ಒಂದೆರಡು ಬಾರಿ ಲಂಕೇಶರನ್ನು ಟೀಕಿಸಿದ್ದೇನೆ. ಅದಾವುದನ್ನೂ ಮನಸ್ಸಿನಲ್ಲಿ ಹಿಡಿಯದೆ, ಪೂರ್ವಾಗ್ರಹವನ್ನು ಬದಿಗಿರಿಸಿ, ಸೂಕ್ಷ್ಮಗ್ರಹಣ ಮಾಡಿದ ಈ ಬುದ್ಧಿವಂತಿಕೆ 'ಲಂಕೇಶ್ ಪತ್ರಿಕೆ'ಯಾಗಿ ಹರಿದದ್ದು ಕನ್ನಡ ಸಾಹಿತ್ಯಕ್ಕೆ ಆರೋಗ್ಯಕರವೆಂದು ನನಗೆ ತೋರುವುದಿಲ್ಲ. ಇನ್ನು ಹತ್ತು ವರ್ಷಗಳ ನಂತರ, ಪುನರಾವಲೋಕಿಸಿದಾಗ ಈ ಯಶಸ್ಸು ಪರಿಮಿತವೆಂದು ಕಂಡೀತು. ಯಾವ ಬಗೆಯ ಅಲೆಯನ್ನೂ ಭಾರತೀಯ ಮನಸ್ಸು ಒಪ್ಪುವುದಿಲ್ಲ. ಅದು ತನ್ನ ಪರಿಮಿತಿಯೂ ಹೌದು. ನನ್ನ ಅತಿ **fanaticism** ಹೇಗೆ ಭಾರತೀಯರಿಗೆ ಅಗ್ರಾಹ್ಯವೆಂದು ಅನಿಸಬಹುದೋ ಹಾಗೆಯೇ ಲಂಕೇಶರ ಅತಿ ಉದ್ದಾಮ ಬರಹವೂ ಅನಿಸೀತು. ನನ್ನ ಅರಿಕೆ ಇಷ್ಟೆ-ಬುದ್ಧಿಜೀವಿಗಳ ಒಂದು ಬಗೆಯ ವಿಕೃತಿಯನ್ನು ನಡುದಾರಿಗೆ ಎಳೆಯಲಿಕ್ಕೆ ನನ್ನ ಅಲೆ ಒಂದು ಉಪಾಯವಾದರೆ, ಲಂಕೇಶರ ಅಲೆ ಇನ್ನೊಂದು ಬಗೆಯ ವಿಕೃತಿಯನ್ನು ನಡುದಾರಿಗೆ ಎಳೆಯುವ ಉಪಾಯ. ನಾವಿಬ್ಬರೂ ಮಕ್ಕಳೊಡನೆ ಅದೇ ಆಟವಾಡುತ್ತಿದ್ದೇವೆ. ಸೌಮ್ಯ ವಿವೇಕವನ್ನು ಇಂದಿನ ಜನಾಂಗದ ವಿಕೃತಿ ಕೇಳಲಿಕ್ಕೆ ಸಿದ್ಧವಾಗುತ್ತಿಲ್ಲ. ಅದಕ್ಕಾಗಿಯೇ ನಾವಿಬ್ಬರೂ 'ಅಲೆ'ಯನ್ನೇ ಆಶ್ರಯಿಸಿದ್ದೇವೆ. ನಮ್ಮನ್ನು ಓದುಗರು ಅಕ್ಷರಶಃ ನಂಬುವರೆಂದು ನಾವು ಎಂದೂ ನಂಬಿಲ್ಲ. ಅಂತೆಯೇ ನಿರ್ಭೀತಿಯಿಂದ ನಮ್ಮ 'ಅಲೆ'ಯ ಆಟವನ್ನು ಆಡಲು ಬಿಡಿ. ನಮ್ಮ ಉದ್ದೇಶ ಒಂದೇ-ಎರಡು ಬಗೆಯ ವಿಕೃತಿಗಳನ್ನು ನಡುದಾರಿಗೆ ಎಳೆದು ತಂದು, ಕಣ್ಮರೆಯಾಗುವುದು. ಆ ವಿಕೃತಿಗಳ ರೂಪವನ್ನು ವಿವರಿಸುವ ಅಗತ್ಯವಿಲ್ಲ. ಆದರೆ, ನಮ್ಮಿಂದ ಒಬ್ಬನ ಮೇಲೆ ಕೇಡಾಗುವುದಿಲ್ಲವೆಂದು ಖಾತ್ರಿ ಕೊಡಬಲ್ಲೆವು. ಏಕೆಂದರೆ, ಕಾಲದ ಅಗತ್ಯದ ಅನುಸಾರವಾಗಿಯೇ ನಾವು ನಮ್ಮ ಅಲೆಯನ್ನು ಆಯ್ಕೆ ಮಾಡಿದ್ದೇವೆ. ಗೆಲ್ಲುವುದು ನಮ್ಮ ಉದ್ದೇಶವಲ್ಲ. ನಡುದಾರಿಗೆ ಎಳೆಯುವುದೇ ನಮ್ಮ ಉದ್ದೇಶ. ಅಂತೆಯೇ ನಮ್ಮ ಉದ್ದಿಶ್ಯ ಭಿನ್ನವಾಗಿ ಕಂಡರೂ ನಿಜವಾಗಿ ಒಂದೇ. ಅದೇ ಒಬ್ಬರ ಪ್ರತಿಭೆಯನ್ನು ಇನ್ನೊಬ್ಬರು ಅರಿತುಕೊಂಡಿದ್ದೇವೆ. ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಬಂದಮೇಲೆ ಅವರು ನನ್ನ ಮಾರ್ಗಕ್ಕೆ ಬರುವರೆಂದು ಆಸೆಪಟ್ಟುಕೊಂಡಿದ್ದೆ. ಅವರ 'ತಿಮಿಂಗಿಲ' ದಿನಗಳು ಮುಗಿದವೆಂದು ಭಾವಿಸಿದ್ದೆ. ಆದರೆ 'ಪತ್ರಿಕೆ' ಅವರಿಗೆ ನೀಡಿದ ಯಶಸ್ಸು ಅವರನ್ನು ಸೃಷ್ಟಿಶೀಲತೆಯಿಂದ ಪರಾವೃತ್ತಗೊಳಿಸಿತು. ನಾನೂ ಒಂದು ಬಗೆಯ ಪತ್ರಕಾರ. ಪತ್ರಿಕೆಗಳಿಗೆ ಪತ್ರ ಬರೆಯುವುದರಲ್ಲಿ ನನ್ನ ಸೃಜನಶೀಲತೆಯಿಂದ ಪರಾವೃತ್ತಗೊಂಡಿದ್ದೇನೆ. ನಮಗೆ ಯಾರೂ ವಿವೇಕ ಹೇಳುವ ಕಾರಣವಿಲ್ಲ. ನಾವು ಏನು ಮಾಡುತ್ತಿದ್ದೇವೆಂಬುದು ನಮಗೆ ಚೆನ್ನಾಗಿ ಗೊತ್ತಿದೆ. ನಮ್ಮ ಯುಗವೇ ಆ ರೀತಿಯ **restlessness** ಹುಟ್ಟಿಸುತ್ತದೆ. ಅದರ ಆಹ್ವಾನವನ್ನು ನಮ್ಮ ನಮ್ಮ ವಿರುದ್ಧ ರೀತಿಯಲ್ಲಿ ಸ್ವೀಕರಿಸಿದ್ದೇವೆ. ನಮ್ಮ ಯುಗದ ಬದುಕು **peripheral** ಅಗತ್ಯಗಳನ್ನು ನಮ್ಮ ಅಲೆಯ ಉಪಾಯದಿಂದ ಮಧ್ಯಕ್ಕೆ ತಂದುಬಿಟ್ಟರೆ ಅದರಲ್ಲಿಯೇ ನಮ್ಮ ಅನಾಮಿಕ ಯಶಸ್ಸು. ನಮ್ಮನ್ನು ಅಕ್ಷರಶಃ ಯಾರೂ ಸ್ವೀಕರಿಸಲಾರರು. ಸ್ವೀಕರಿಸಬಾರದು. ನಮ್ಮ ಅಪೇಕ್ಷೆಯೂ ಅದಲ್ಲ. ವಿರುದ್ಧ ಧ್ರುವದ ನಮನ, ಶುಭಾಶಯ.





● ಶಂಕರ ಮೊಕಾಶಿ ಪುಣೇಕರ

'ಲವ್ ಜಿಹಾದ್' ಎಂಬ ಪುಸ್ತಕ ನಂಜು ಕಾರಿಕೊಂಡ ಮನೆಹಾಳರು....

ಕಳೆದ ವರ್ಷ ಅಕ್ಟೋಬರ್-ನವೆಂಬರ್‌ನಿಂದ ಚಾಲ್ತಿಗೆ ಬಂದ 'ಲವ್ ಜೆಹಾದ್' ಎಂಬ ಕಾಗಕ್ಕ-ಗುಬ್ಬಕ್ಕನ ಕತೆಯನ್ನು ಹರಡುತ್ತಿರುವ ಚೆಡ್ಡಿಪಡೆಗಳಿಗೆ ಜನರಿಂದ ನಿರೀಕ್ಷಿಸಿದಷ್ಟು ಪ್ರತಿಕ್ರಿಯೆ ಬರದಿರುವುದು ಹಿನ್ನಡೆ ಉಂಟು ಮಾಡಿದೆ. ಆದರೆ ಎಂದಿನಂತೆ ಈ ಮಂಗಗಳು ತಮ್ಮ ಕಂತ್ರಿ ಕೆಲಸವನ್ನು ಸೈಲೆಂಟಾಗಿ, ಒಮ್ಮೊಮ್ಮೆ ಬಹಿರಂಗವಾಗಿಯೇ ಮುಂದುವರೆಸಿವೆ.

ಕರಾವಳಿಯ ಇವತ್ತಿನ ಕೋಮುದ್ವೇಷದ ಪರಿಸ್ಥಿತಿಯ ಹಿಂದೆ ಚೆಡ್ಡಿಗಳ ಸಾಕಷ್ಟು ಹೋಮ್‌ವರ್ಕ್ ಇದೆ. ಕಳೆದ ದಶಕದಿಂದಲೇ ಅಲ್ಲಿ ಸಮಾಜವನ್ನು ಒಡೆಯುವ ಕೆಲಸವನ್ನು ಸಣ್ಣಗೆ, ತಣ್ಣಗೆ ಶುರು ಮಾಡಿದ್ದ ಹಿಂದೂತ್ವವಾದಿಗಳು ಈಗ ಕರಾವಳಿಯ ತುಂಬಾ ನಂಜು ಹರಡಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ.

ಈದ್ಗಾ ವಿವಾದದ ಮೂಲಕ ಉತ್ತರ ಕರ್ನಾಟಕ ಅದರಲ್ಲೂ ಮುಂಬೈ ಕರ್ನಾಟಕ ಭಾಗದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರ ಆರಂಭಿಸಿದ ಧೂರ್ತರು ಅದರಲ್ಲಿ ಅಷ್ಟೇನೂ ಸಫಲರಾಗಲಿಲ್ಲ. ಆದರೀಗ 'ಲವ್ ಜೆಹಾದ್' ಎಂಬ ಕಪೋಲಕಲ್ಪಿತ ಭಯವನ್ನು ಹರಡಲು ಯತ್ನಿಸಿದ್ದಾರೆ. ಭಜರಂಗಿಗಳಿಗಿಂತ ಆ ಕೆಲಸವನ್ನು ಇಲ್ಲಿ 'ಶ್ರದ್ಧೆ'ಯಿಂದ ಮಾಡುತ್ತಿರುವುದು ಶ್ರೀರಾಮಸೇನೆಯ ಮನೆಹಾಳರು. ಅವರಿಗೆ 'ಅಧಿಕೃತತೆ' ತಂದುಕೊಡಲು ಸಾಥ್ ನೀಡುತ್ತಿರುವವರು ಸಂಘ ಪರಿವಾರದ ಸೆಗಣಿ ತಿಂದು ಬದುಕುತ್ತಿರುವ ಜನದ್ರೋಹಿ ಪತ್ರಕರ್ತರು.



ಬರೀ ಸುಳ್ಳು, ಪ್ರಚೋದನೆಗಳೇ ತುಂಬಿರುವ ಈ 'ಲವ್ ಜೆಹಾದ್' ಎಂಬ ಪುಸ್ತಕವನ್ನು ಬಾಗಲಕೋಟೆ, ಬಿಜಾಪುರ, ಗದಗ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಉಚಿತವಾಗಿ ಹಂಚುತ್ತಿರುವ ಶ್ರೀರಾಮ ಸೇನೆಯವರು ಕಾಲೇಜಿನ ಮುಗ್ಧ ವಿದ್ಯಾರ್ಥಿಗಳನ್ನು ದಾರಿ ತಪ್ಪಿಸಲು ನೋಡುತ್ತಿದ್ದಾರೆ. ಈ ಪುಸ್ತಕದಲ್ಲಿರುವ ಜೀವದ್ರೋಹಿ ಭಾಷೆ, ಸುಳ್ಳು ಮಾಹಿತಿ, ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರ- ಈ ಎಲ್ಲವನ್ನೂ ಪರಿಗಣಿಸಿದರೆ ಈ ಪುಸ್ತಕವನ್ನು ಹಂಚುವವರನ್ನು ಪೊಲೀಸರು ಬಂಧಿಸಬೇಕಾಗುತ್ತದೆ. ಏಕೆಂದರೆ ಈ ಭಾಗದಲ್ಲಿ 'ಶ್ರೀರಾಮಸೇನೆಯ ಕಾರ್ಯಕರ್ತರು' ಎಂಬ ಗೂಂಡಾಗಳು ಹುಬ್ಬಳ್ಳಿ ಕೋರ್ಟ್‌ನಲ್ಲಿ ಸ್ಫೋಟ ಮತ್ತು ಹಣಕ್ಕಾಗಿ ಹಲವಾರು ಜನರನ್ನು (ಹಿಂದೂಗಳನ್ನು!) ಕೊಂದ ಆರೋಪ ಇರುವವರು.

ಈ ಪುಸ್ತಕವನ್ನು ಸಂಪಾದಿಸಿರುವ ಪುಣ್ಯಾತ್ಮ ಯಾರು ಗೊತ್ತೆ? ಶ್ರೀರಾಮಸೇನೆಯ 'ಪ್ರಮುಖ್ ಪ್ರಚಾರಕ್' ಅಂದುಕೊಳ್ಳುವ ಸಂಗು ಹುಂಡೇಕಾರ್ ಎಂಬ ಸೀಟಿ. 'ಲವ್ ಜೆಹಾದ್' ಹಿಂದೂ ಹೆಣ್ಮಕ್ಕಳನ್ನು ಅಡ್ಡದಾರಿ ಹಿಡಿಸಲು ಹುಟ್ಟಿರುವ ಭಯೋತ್ಪಾದಕ ಚಟುವಟಿಕೆ ಎಂದು ಒದರುವ ಈ ಹುಂಡೇಕಾರ್ ಮೊದಲ ಹೆಣ್ತಿಯನ್ನು ಬೀದಿಗೆ ತಳ್ಳಿದವ. ಎರಡನೇ ಹತ್ತಿಗೂ ಮೋಸ ಮಾಡಿದವ. ಇನ್ನು ಹಲವಾರು ಮಹಿಳೆಯರನ್ನು ಮದುವೆಯಾಗುವುದಾಗಿ ನಂಬಿಸಿ ಕೈಕೊಟ್ಟವ. ಅಂದಂತೆ ಈ 'ಶ್ರೀರಾಮ'ನಿಂದ ಅನ್ಯಾಯಕ್ಕೊಳಗಾದ ಹೆಣ್ಣುಮಕ್ಕಳೆಲ್ಲ ಹಿಂದೂಗಳೇ! ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಸತ್ಯವನ್ನು ಮೊದಲು ಅರಿಯಲಿ.


ಉದ್ದಾಮ ಸಂಶೋಧಕ ಚಿದಾನಂದಮೂರ್ತಿ ಲೆವೆಲ್ ಏನೆಂದು ತಿಳಿಯಲು ಈ ಪುಸ್ತಕದ ಮುನ್ನಡೆ (ಮುನ್ನುಡಿ ಅಲ್ಲ) ಓದಿದರೆ ಸಾಕು. ಸಂಶೋಧಕ ಚಿಮೂ ಭಜರಂಗಿಗಳು ನೀಡುವ ಅಂಕಿ-ಅಂಶಗಳನ್ನೇ ಅಧಿಕೃತ ಎಂದು ನಂಬಿದ್ದಾರೆ. ಅಥವಾ ಸತ್ಯ ಗೊತ್ತಿದ್ದರೂ ಅದ್ಯಾವುದೋ ಮರುಳು ಅವರ ಮೆದುಳನ್ನು ಆವರಿಸಿಬಿಟ್ಟಿದೆ. ಅಂದಂತೆ, ಈ ಮಹಾಶಯರು ಹಿಂದೆ ಹಂಪಿಯ ತುಂಗಭದ್ರಾ ನದಿಯಲ್ಲಿ ಮುಳುಗಿ ಆತ್ಮಾಹುತಿ ಮಾಡಿಕೊಳ್ಳಲು ಯತ್ನಿಸಿದಾಗ ಇವರನ್ನು ಪ್ರಾಣಾಪಾಯದಿಂದ ಪಾರು ಮಾಡಿದ್ದು, ನಂತರ ಇವರನ್ನು ಏಳು ದಿನಗಳ ಕಾಲ ತನ್ನ ಮನೆಯಲ್ಲಿಟ್ಟುಕೊಂಡು ಉಪಚರಿಸಿದ್ದು ಒಬ್ಬ ಮುಸ್ಲಿಂ ಬೆಸ್ತರ! ಇದೆಲ್ಲ ಚಿಮೂಗೆ ಚೆಡ್ಡಿಗಳಿಗೆ ಅರ್ಥವಾಗುವುದೇ?

ಇನ್ನು 'ಈ ಲವ್ ಜೆಹಾದ್' ಪುಸ್ತಕದ ತುಂಬಾ 'ಸಂಯುಕ್ತ ಕರ್ನಾಟಕ' ಎಂಬ ಬಿಜೆಪಿ ಮುಖವಾಣಿ ಪತ್ರಿಕೆಯ ವರದಿಗಾರರು, ಲೇಖಕರು ಬರೆದ ಲೇಖನಗಳೇ ತುಂಬಿವೆ. ಬಹಿರಂಗವಾಗಿಯೇ ಆರ್‌ಎಸ್‌ಎಸ್ ಪರ ಚಟುವಟಿಕೆಗಳನ್ನು ನಡೆಸುವ ಸಂ.ಕ.ದ ಅನಿಲಕುಮಾರ್ ಎಂಬ ಫುಲ್ ಚೆಡ್ಡಿ, ಸಿನಿಮಾ ಸುದ್ದಿ ಬರೆಯುತ್ತಲೇ 'ಲವ್ ಜೆಹಾದ್' ಎಂಬ ಸುಳ್ಳನ್ನು ಸಿನಿಮಾ ಶೈಲಿಯಲ್ಲೇ ಭೀಕರವಾಗಿ ಚಿತ್ರಿಸುವ ಅದೇ ಸಂ.ಕ.ದ ಸಾವಿತ್ರಿ, 'ಕರ್ಮವೀರ'ದ ತುಂಬಾ ಕೇಸರಿ ನಂಜನ್ನು ಎರಚುವ ಬಾಬುಕೃಷ್ಣಮೂರ್ತಿ ಎಂಬ ಆರ್‌ಎಸ್‌ಎಸ್ ಪ್ರಚಾರಕ್-ಹೀಗೆ ಇದರ ತುಂಬಾ ಸಂ.ಕ.ದ ಸೋಂಕುಪೀಡಿತ 'ಬರಹಗಾರ'ರ ಲೇಖನಗಳೇ ಇವೆ. ಜೊತೆಗೆ ವಿ.ಕ.ದ ರಾಘವೇಂದ್ರ ಭಟ್ಟ ಇತ್ಯಾದಿಗಳ ಲೇಖನಗಳಿಗೂ ಜಾಗವಿದೆ. 'ಹಾಯ್' ನ ರವಿ ಕುಲಕರ್ಣಿ, ಆರ್.ಕೆ. ಹೆಗ್ಡೆಗಳಿಗೆ ಜಾಗವಿಲ್ಲವೆಂದರೆ ಹೇಗೆ? ಅವರಿಗೂ ಸ್ಪೇಸ್ ನೀಡಲಾಗಿದೆ.

ಮುತ್ತಾಳ, ಮನೆಹಾಳ, ಮನೆಮುರುಕ, ಮಾನಗೇಡಿ, ಮಂಗ ನನ್ಮಗ ಮುತಾಲಿಕನ ನೇತೃತ್ವದಲ್ಲಿ ಹೊರಬಂದಿರುವ ಈ ಪುಸ್ತಕ ವಿದ್ಯಾರ್ಥಿ ಸಮೂಹದಲ್ಲಿ ಸುಳ್ಳುಗಳನ್ನು ಬಿತ್ತಲು ಪ್ರಯತ್ನಿಸುತ್ತಿದೆ.

ಮುಂಬೈ ಕರ್ನಾಟಕವನ್ನು ಮತ್ತೊಂದು ಕರಾವಳಿಯನ್ನಾಗಿ ಮಾಡಲು ಸಂಘಪರಿವಾರ ನಡೆಸುತ್ತಿರುವ ಹೋಮ್‌ವರ್ಕ್‌ನಲ್ಲಿ ಇದೂ ಒಂದು ಭಾಗವಾಗಿದೆ. ಪ್ರಗತಿಪರ ಸಂಘಟನೆಗಳು ತುರ್ತಾಗಿ ಕಾರ್ಯಾಚರಣೆಗಿಳಿದು ವಿದ್ಯಾರ್ಥಿಗಳಿಗೆ ಸತ್ಯದರ್ಶನ ಮಾಡಿಸಬೇಕಾಗಿದೆ.

● ಮಲ್ಲನಗೌಡರ್



ಬಿ.ಎಡ್
ವಿದ್ಯಾರ್ಥಿಗಳಿಗಾಗಿ
ಪಠ್ಯಪುಸ್ತಕ
ಪ್ರಖ್ಯಾತ ಶಿಕ್ಷಣ
ತಜ್ಞ ಅರವಿಂದ
ಚೊಕ್ಕಾಡಿಯವರ
ಪ್ರೌಢ ಶಿಕ್ಷಣ
ನಿರ್ವಹಣಾ
ಮನೋವಿಜ್ಞಾನ
ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಬಿ.ಎಡ್. ಕಾಲೇಜುಗಳ ಸಿಲಬಸ್‌ನಂತೆ ರೂಪಿಸಲಾಗಿರುವ ಹಾಗೂ ಬಿ.ಎಡ್. ವಿದ್ಯಾರ್ಥಿಗಳಿಗೆ ಉಪಯುಕ್ತ ಪಠ್ಯ ಪುಸ್ತಕ
ಸಗಟು ವ್ಯಾಪಾರಿಗಳು, ಪುಸ್ತಕ ಮಾರಾಟಗಾರರು ಹಾಗೂ ವಿದ್ಯಾರ್ಥಿಗಳು ಪ್ರತಿಗಳಿಗಾಗಿ ಸಂಪರ್ಕಿಸಿ
ಗೈಡ್ ಪ್ರಕಾಶನ
ನಂ.9, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು - 560 004.
ಇ-ಮೇಲ್: guidekannada@gmail.com
Phone : 080-26676427

ಬಟ್ಟಿ ಬದನೆಕಾಯೂ ಬ್ಯಾಡ ಪುಗಸಟ್ಟೆ ಪರಂಗಿನೂ ಬ್ಯಾಡ ಅತ್ತಗೆ


ಸೀರ, ಬಿ.ಟಿ. ಬದನೆ ಗಲಾಟೆಯನ್ನು ಕೇಳಿಸಿಕೊಂಡಿದ್ದ. ವಿಷಯ ಏನೆಂದು ಯನ್ನೇ ಕೇಳಿ ತಿಳಿದುಕೊಳ್ಳಲು ಉತ್ಸುಕನಾಗಿ,

"ಅದ್ಯಾಕ್ಲ ಉಗ್ರಿ ಪಾರಿನ್ನೋರು ಬಿಟ್ಟಿ ಬದ್ನೆಕಾಯಿ ಕೊಡ್ತಿನಿ ಅಂದಿದ್ಕೆ ಬ್ಯಾಡ ಅಂತ ಹೇಳಿದ್ರಂತೆ?" ಎಂದ.

"ನಿನ್ನ ಲೆಕ್ಕದಲ್ಲಿ ಈಸ್ಕಬೇಕಾಗಿತ್ತು ಅನ್ನು."

"ಚೆನ್ನಾಗಿದ್ರೆ ಈಸಗಳಕ್ಕಾಯ್ತಿರಲಿಲ್ವೆ?"

"ಅದು ಬಿಟ್ಟಿ ಬದನೆ ಅಲ್ಲ ಕಣೊ, ಬಿ.ಟಿ. ಬದನೆ ಅಂತ. ಅದ ನ್ನೋರು ಬಿ.ಟಿ ಹತ್ತಿ ತರ ಇಲ್ಲಿ ತಂದು ಬ್ಯಳಿರಿ ಅಂತ ಕುಂತವ್ರುರೆ."



"ಬ್ಯಳದರೇನಾದತ್ಲ?" ಎಂದಳು ಜುಮ್ಮಿ.

"ಬ್ಯಳದರೇನೂ ಆಗದಿಲ್ಲ, ಒಂದೊಂದು ಬದನೆ ಸ್ವಾತೆಕಾಯಿಗಾತ್ರ ಆಯ್ತವಂತೆ. ಬಾಗ್ಯೂ ಸಿಗತವೆ. ಕ್ರಮೇಣ ನಮ್ಮ ನಾಟಿ ಬದನೆ ವಂಟೋಯ್ತವೆ. ಆಗ ಲ್ಲಾರು ಈ ಬಿಟಿ ಬದನೆ ಕಾಯ್ಕಂಡು ಕೂತಗಬೇಕಾಯ್ತದೆ" ಎಂದ ಉಗ್ರಿ.

"ಹೈಬ್ರೀಡ್ ತಳಿ ಅನ್ನು" ಎಂದ ಕಾಳಮಾವ.

"ಊ ಕಣ ಮಾವ, ಅದರಲ್ಲಿ ಬದನೆಕಾಯಿ ಸೊಗಡು ಇರದಿಲ್ಲ, ನೂ ಇರದಿಲ್ಲ ಒಂಥರಾ ದನುಗು ಬದ್ನೆ ಕಾಯಿದ್ದಂಗೆ."

"ಅಂತವುನ್ನಲ್ಲ ಯಾಕ್ ತತ್ತರೆ ಈ ಸೂಳೆಮಕ್ಕಳೂ?"

"ಮುಂಡೇವು ಜಯರಾಮನೆಡ್ತಿ ನಿನ್ನಂಗೆ ಕೇಳ್ಳವುಳೆ."

"ಮಿನಿಟ್ರಾಗಿದ್ನಲ್ಲ ಅವುನೆಡ್ತೀ?"

"ಅವುಳಲ್ಲ ಕಣಮಾವ. ಅವುಳಿಗೆಲ್ಲಿ ಈ ತಲಿದ್ದತು. ಇವುಳು ರೈತ ದ ಲೀಡ್ರು. ಚೆನ್ನಾಗಿ ತಿಳಕಂಡವುಳೆ. ರೈತ ಸಂಘದೋರು ನ್ಯಟ್ಟಗಿದ್ರೆ ತ್ತಿಗೆ ಎಮ್ಮೆಲ್ಲೆ ಆಯ್ತಿದ್ಲು. ಅಂತ ಹೋರಾಟಗಾತಿ."

"ನಾನು ನೋಡಿದ್ದಿನಿ ಕಂದ್ಯ, ಅವುಳ ಬಾಸಣನೂ ಕೇಳಿದ್ದಿನಿ" ಎಂದಳು ಜುಮ್ಮಿ.

"ಆದ್ರು ನೀನವುಳಂಗೆ ಆಗಲಿಲ್ಲ ನೋಡು."

"ಅವುಳಂಗೆ ಓದಿಕಂಡಿದ್ರೆ ಆಗೇ ಆಯ್ತಿದೆ."

"ಓದೇ ಬ್ಯಾರೆ, ಹೋರಾಟನೆ ಬ್ಯಾರೆ ಕಣೆ. ಸುನಂದ ಆಗಿನಿಂದ ಹೋರಾಟ ಕೊಂಡು ಬಂದವುಳೆ. ಈಗ ಬದನೆಕಾಯಿ ವಿಷಯದಲ್ಲೂ ಮಂತ್ರಿಗೆ ತ್ವಂಗೆ ಹೇಳ್ಳವುಳೆ. 'ನಾವೇನು ಬದನೆಕಾಯಿ ಕೊಡ್ರಪ್ಪ ಅಂತ ನಿಮ್ಮ ? ನೀವು ಕೊಡದು ಬ್ಯಾಡ, ನಾವು ಬ್ಯಳಿಯದೂ ಬ್ಯಾಡ, ಜಾಗ ಖಾಲಿ ' ಅಂದವುಳೆ."

"ಸರಿಯಾಗೆ ಹೇಳ್ಳವುಳೆ ಬುಡು. ಏಟೇ ಆಗ್ಲಿ ರೈತನ ಮಗಳಲವೆ" ಕಾಳಮಾವ.

"ನಂಜುಂಡಸ್ವಾಮಿ ಇರಬೇಕಿತ್ತು ಕಂದ್ಯ ಈಗ" ಎಂದು ಸೀರ ನಕ್ಕ.

"ನಂಜುಂಡಸ್ವಾಮಿ ಇರಬೇಕಿತ್ತು ಅಂತ ನಗಾಡಿಯಲ್ಲೊ ಸೀರ ಮಾವ."

"ಊ ಕಂದ್ಯ, ಬಟ್ಟ ಬದನೆ ತಂದೋರಿಗೆ ಅದರಲ್ಲೇ ವಡದು ಕಳುಸೋನು!"

"ಅದೇನೊ ನಿಜ. ಇಂಥೋರಿಗ್ಯಲ್ಲ ಕ್ಯನ್ನಿಗೆ ಯಳದು ಬಾರಸೋನು. ನು ಅಂತ ಇವತ್ತು ಗೊತ್ತಾಯ್ತಾ ಆದೆ. ಯತ್ತ ಮುಂದಾಗಿ ನೋಡಿದ್ರೂ ಥೋನು ವಬ್ಬನೂ ಇಲ್ಲ ಕಣಮಾವ."

"ಅವುನಿಂದಿದ್ದೋರು ಏನಾದ್ರೂ?"

"ಅವು ಕಡದಾಡಿಕೊಂಡು ಕಾಲಹಾಕ್ತ ಅವೆ. ಕೆಲವು ಬಿಜೆಪಿ ಸೇರಿಕಂಡವೆ. ಇನ್ನು ಕೆಲವು ಲಿಂಗಾಯಿತ್ರ ಪೈಕಿವು ಎಡೂರಪ್ಪನ ಮನೆತ್ರ ನಿಂತವೆ. ಅಂತೂ ಅವುರದು ಯಾಟಗ ಗ್ಯಡಿತಾ ಆದೆ. ಅದ್ಕೆ ಸರಕಾರ ಬಿ.ಟಿ. ಬದನೆ, ಹತ್ತಿ ಟಮ್ಮಟೆ ಬೀಜ ತಂದು ರೈತರ ದಾರಿ ತಪ್ಪಸಕ್ಕೆ ನೋಡ್ತಾ ಆದೆ. ಎಡೂರಪ್ಪನಿಗಂತೂ ಯಾವುದ ಒಪ್ಪಬೇಕು ಯಾವುದ ಬುಡಬೇಕು ಅನ್ನದೆ ಸಮಸ್ಯಾಗ್ಯದೆ."

"ಅವುನ್ಯಾವ ಗೊಜಲು ಬುಡಿಸಿದ್ನನೂ. ಯಲ್ಲಾನು ಕಲಸಿ ಮೆಣಸಿಕ್ಕೊಂಡು ಮಡಿಕಂಡವುನೆ" ಎಂದು ಕಾಳಮಾವ ಮುಖ ಸಿಂಡಿರಿಸಿದಾಗ ಜುಮ್ಮಿ,

"ಆಂಬುಲೆನ್ಸ್ ಮ್ಯಾಲೆ ಎಡೂರಪ್ಪಂದು, ಇನ್ಯಾವಂದೊ ಪೋಟಾ ಅಂಟಿಸ್ಯವುರಲ್ಲ ಯಾಕ್ಲ?" ಎಂದಳು ಜುಮ್ಮಿ.

"ಅದರ ಕಾರಣ ನಾನೇಳ್ತಿನಿ ಕಣಕ್ಕ ನಿನ್ನ ಪ್ರಾಬ್ಲಮ್ ಏನೇಳು?" ಎಂದುಕೊಂಡು ವಾಟಿಸ್ಸೆ ಬಂದ.

"ಏನುವಿಲ್ಲ ಕಂದ್ಯ, ಮನ್ನೆ ದಿನ ಆಂಬುಲೇನ್ಸ್ ನೋಡಿದೆ. ಆದರಮ್ಯಾಲೆ ಎಡೂರಪ್ಪ ಆಮ್ಯಾಲೆ ಇನ್ಯಾವಂದೋ ಪೋಟಾ ಹಾಕಿದ್ರು ಕಂದ್ಯ."

"ಆ ಪೋಟೋ ಹಾಕಿರದು ತಮಾಸಿಗಲ್ಲ ಕಣಕ್ಕ. ಅದರಿಂದೆ ಒಂದು ಸೀರಿಯಸ್ಸಾಗಿರೊ ಮೆಸ್ಸೇಜದೆ ಗೊತ್ತೆ?"

"ಯಾವ ಮ್ಯಾಸೇಜಪ್ಪಾ?"

"ಮೆಸ್ಸೇಜು ಅಂದ್ರೆ ಸಂದೇಶ, ತಿಳಿವಳಿಕೆ, ಬೋಧನೆ ಇನ್ನು ಏನೇನೊ ಅರ್ಥಗಳು ಆ ಪೋಟೋದಿಂದೆ ಅವೆ ಕಣಕ್ಕ."

"ಏ ಅವುನೇಳ್ತನೆ ಅಂತ ಕೇಳ್ತಿಯಲ್ಲೆ ನೀನು. ಅದು ಸರ್ಕಾರದ ಆಂಬುಲೆನ್ಸು ಆದ್ರಿಂದ ಮುಖ್ಯಮಂತ್ರಿ ಎಡೂರಪ್ಪ, ಆರೋಗ್ಯ ಮಂತ್ರಿ ರಾಮುಲು ಪೋಟೊ ಹಾಕ್ಯವುರೆ ಗೊತ್ತೆ" ಎಂದ ಉಗ್ರಿ.



"ಅದೂ ಒಂದು ಕಾರಣ ಕಣಕ್ಕ. ಆದ್ರೆ ರಿಯಲ್ ಸ್ಟೋರಿನೇ ಬ್ಯಾರೆ. ಸಾಮಾನ್ಯವಾಗಿ ಆಂಬುಲೆನ್ಸಲ್ಲಿ ಓಡಾಡೋ ಜನಗಳೇ ಬ್ಯಾರೆ. ಅಂದ್ರೆ ಪೇಷಂಟ್‌ಗಳು. ಮೊದಲಿಂದ್ಲೂ ನಮ್ಮ ಎಡೂರಪ್ಪನ ಹೆಲ್ತೇ ಸರಿಲ್ಲ. ಉಪಮುಖ್ಯಮಂತ್ರಿಯಾಗಿದ್ದಾಗ ಇದ್ದಕ್ಕಿದ್ದಂತೆ ಹೋಗಿ ಸರ್ಕಾರಿ ಆಸ್ಪತ್ರೆಗೆ ಅಡಮಿಟ್ಟಾಗಿದ್ದ. ಅಮ್ಯಾಲೆ ಹ್ಯಲುಪ್ಯಲು ತರ ಮಾತಾಡ್ತಾನೆ. ಪರೆಗ್‌ಜಾಂಪಲ್ ಈಚೆಗೆ ಚರ್ಚಿನ ಮೇಲೆ ಯಾರೊ ಕಲ್ಲುತೂರಿ ಊರಿನ ಶಾಂತಿ ಹಾಳು ಮಾಡಿದ್ರು. ಅದ್ಕೆ ಎಡೂರಪ್ಪ ಏನಂದ ಗೊತ್ತೇ?"

"ಏನಂದ ಅಂತ ನನಿಗೇನು ಗೊತ್ಲ."

"ಶಾಂತಿ ಕಾಪಾಡೋರ ಮ್ಯಾಲೆ ಸರಿಯಾದ ಕ್ರಮ ತಗತಿನಿ ಅಂದ, ಇದಕೇನೇಳ್ತಿ."

"ಅಂಗಂದನೇನೊ?" ಎಂದ ಉಗ್ರಿ.

"ಊ ಕಣೊ, ನಾನೆ ನನ್ನ ಕಿವಿಯಾರ ಕೇಳಿದ್ದಿನಿ. ಇಂತ ಮಾತಾಡೊ ಮನ್ಸ ಆರೋಗ್ಯವಂತ ಅಂತ ಯಂಗೇಳ್ತೀ? ಆದ್ದರಿಂದ ಎಡೂರಪ್ಪನಿಗೆ ಯಾವಾಗ್ಲಾದ್ರು. ಆಂಬುಲೆನ್ಸ್ ಬೇಕಾಗಬವುದು. ಅದ್ಕೆ ಸಿಂಬಲ್ಲಾಗಿ ಅವ್ರುನ ಪೋಟಾ ಹಾಕ್ಯವುರೆ. ಇನ್ನ ಶ್ರೀರಾಮುಲು ಪೋಟೊ ಆಂಬುಲೆನ್ಸ ಮ್ಯಾಲೆ ಯಾವಾಗ್ಲು ಇರಬೇಕಾದ್ದೆಯ."

"ಅವುನಿಗೇನು ಕಾಯ್ಲೆನ್ಲ?"

"ಅವುನ ಕಾಯ್ಲವ ಸೀಕ್ರೇಟಾಗಿ ಮಡಿಕಂಡವುನೆ ಕಣಕ್ಕ, ಆದ್ರು ಅವುನ ಬಗ್ಗೆ ಯಾವ ಬರವಸೆನೂ ಇಲವಂತೆ. ಅದ್ಕೆ ಅವುನು ಬಾಸಣ ಮಾಡುವಾಗ ಇದೇ ನನ್ನ ಕೊನೆ ಭಾಸಣ ಆಗಬವುದು, ಇದೇ ನನ್ನ ಕಡೆ ಸಭೆ ಆಗಬವುದು ಅಂತನೆ."

"ಏ, ಅದು ಎಡೂರಪ್ಪನ ವಿರುದ್ಧ ತಿರುಗಿಬಿದ್ದಾಗ ಅಂಗಂದಿದ್ದ ಕಣೊ."

"ಅದು ನನಿಗೂ ಗೊತ್ತು ಕಣೊ ಉಗ್ರಿ. ಆದ್ರುವೆ ಅವುನ ನೋಡಿದ್ದಿಯಾ? ಯಾವಾಗ್ಲು ಒಂಥರಾ ಪೀಲಿಂಗ್ ಇರತದೆ. ಯಾವುದ್ಕು ಅಷ್ಟೊಂದು ಇಂಟ್ರೆಸ್ಟ್ ತೋರದಿಲ್ಲ, ಅದ್ಕೆ ಹೋಗೋ ಮುನ್ನ ಮಜ ಮಾಡಿಬುಡನ ಅಂತ ಮಗದೀರ್ ಸಿನುಮ ನೋಡ್ತನೆ. ಇನ್ನೂ ಏನೇನೊ ಮಾಡ್ತನೆ. ಅಂತೂ ಅವುನ ಪೋಟಾ ಯಾವಾಗ್ಲು ಅಂದ್ರೆ ಅವುನು ಇರೋವರಿಗೂ ಆಂಬುಲೆನ್ಸ್ ಮ್ಯಾಲೆ ಇರೊ ಅಂತದು."

"ಹಿಂದೆ ಯಾರೂ ಈ ತರ ಪೋಟಾ ಹಾಯ್ಕಂಡಿರಲಿಲ್ಲ ಅಲವೆ?"

"ಇಂತ ಪುಟಗೋಸಿ ಕ್ಯಲಸ ಯಾರು ಮಾಡಕ್ಕೋಗರೂ? ಅದ್ಯಾವಾಗ್ಲೊ ಕಾಂಗ್ರೆಸ್‌ನವ್ರು ಇಂದ್ರಾಗಾಂಧಿ ಪೋಟವಾ ರೇಸನ್ ಕಾರ್ಡಿಗಾಕಿದ್ದಾಗ ರಾಮಕೃಷ್ಣ ಹೆಗಡೆ ಬಾಯಿಗೆ ಬಂದಂಗೆ ಬೋದಿದ್ದ."

"ಬಡವರ ರೇಸನ್ ಕಾರ್ಡಿನ ಮ್ಯಾಲೆ ಇಂದ್ರಾಗಾಂಧಿ ಪೋಟಾ ಹಾಕಿದ್ದು ಸರಿ ಕಂದ್ಯ. ಬಡುವುರ್ಯಲ್ಲ ತಾಯಿ ನಮ್ಮವ್ವ ಅನ್ನೋರು" ಎಂದಳು ಜುಮ್ಮಿ.

"ಅದು ಹಿಂಗೆ ಕಣಕ್ಕ, ಅವುಳು ಬಂದೇಟಿಗೆ ಗರಿಬೀ ಹಟಾವ್ ಅಂದ್ಲು ನೋಡು ಅದ್ಕೆ ಬಡುವುರ್ಯಲ್ಲ ನಮ್ಮ ಪರ ಇದ್ದಳು ಅಂತ ಪೂಜೆ ಮಾಡಕ್ಕೆ ಸುರುಮಾಡಿದ್ರು."

"ನಿಜ ಕಂದ್ಯ. ಆ ಮುನೀರ್ ಸಾಬಿ ಯಂಗಾಡನು ಅಂತೀ" ಎಂದ ಸೀರ.

"ಯಾವ ಮುನೀರ್ ಸಾಬಿ ಚಿಗಪ್ಪ?"

"ಅದೇ ಇವುನು ಕಂದ್ಯ, ಖಾಲಿ ಸೀಸ ಕಬ್ಬಿಣ ಇತ್ತಾಳೆ ಪದಾರ್ಥ ತಗಂಡು ಮಿಠಾಯಿ ಕೊಡ್ತಿದ್ನಲ್ಲಾ. ಅವುನು ಇಂದ್ರಾಗಾಂಧಿ ಅಂದ್ರು ಸಾಕು. ಮೈಮ್ಯಾಲೆ ಬಂದಂಗಾಡನು."

"ಓ ಅವುನು, ಆ ತರಕಲ ಸಾಬಿಗೂ ಒಂದು ಗಂಡಾಂತ್ರ ತಂದು ಮಡಿಗ್ಯವುನೆ ಎಡೂರಪ್ಪ."

"ಎಡೂರಪ್ಪೇನು ಮಾಡಿದ್ದನ್ಲ ಅವುನಿಗೆ?"

"ಏನುಯಿಲ್ಲ, ಇನ್ನು ಮುಂದೆ ದನಿನಬಾಡ ತಿನ್ನಂಗಿಲ್ಲ ಅವುನು. ಅಕಸ್ಮಾತ್ ತಿಂದ್ರೆ ಆಚಾರಿ ಹಿಡುದು ಜ್ಯೆಲಿಗಾಕುಸ್ತನೆ."

"ಅದೇನು ಸರಿಯಾಗೇಳ್ಳ" ಎಂದ ಕಾಳಮಾವ.

"ಗೋಹತ್ಯೆ ನಿಷೇಧ ಜಾರಿಗೆ ತತ್ತಾ ಅವುನೆ ದ್ವಡಪ್ಪ ಎಡೂರಪ್ಪ. ಆದ್ರಿಂದ ಸಾಬರು ದನ ತಿನ್ನದ ಬುಡಬೇಕಾಗ್ಯದೆ. ಇಲ್ಲ ಅಂದ್ರೆ ಆಡುಕುರಿ ಬಾಡಿಗೆ ಗಂಟು ಬೀಳಬೇಕು. ಆಗ ಕೇಜಿ ನಾನೂರುಪಾಯಿ ಆಯ್ತದೆ."

"ಗೋಹತ್ಯೆ ನಿಲ್ಲಿಸಿದ್ದು ವಳ್ಳೆದು ಕಂದ್ಯ."

"ಅಂಗರೆ ಯಮ್ಮೆ ಹತ್ಯೆ ನ್ಯಡಿಬವುದು ಅನ್ನು. ನೀನೇಳದ್ಯಂಗಾಯ್ತು ಅಂದ್ರೆ ನಿನ್ನನ್ನ ಸಾಯಿಸುಂಗಿಲ್ಲ, ಬೇಕಾದ್ರೆ ಸೀರ ಚಿಗಪ್ಪನ್ನ ಸಾಯಿಸಬವುದು."

"ನಾನೆಲ್ಲಿ ಅಂಗೇಳಿದುನ್ಲ, ಸುಮ್ಮನೆ ತಲಿಯಲ್ಲ ಮಾತಾಡಬ್ಯಾಡ."

"ನೋಡು ದ್ವಡಪ್ಪ, ಈ ಬಿಜೆಪಿ ನನಮಕ್ಕಳಿಗೆ ಆಡಳಿತ ಮಾಡಕ್ಕೆ ಬರದೆ ಏನೇನೊ ಮಾಡ್ತ ಅವ್ರೆ. ಅದು ಆರೆಸೆಸ್ ಹೇಳಿದಂಗೆ ಕೇಳಿಕಂಡು. ಅದರ ಫಲವೆ ಈ ನಿಷೇಧ. ನೀನು ಇನ್ನು ಮ್ಯಾಲೆ ನಿನ್ನ ಮನೇಲಿ ವಯಿಸಾಗಿರೊ ದನವ ಮಾರಂಗಿಲ್ಲ, ತಗಂಡೋಗಿ ಎಡೂರಪ್ಪನ ಮನೆತ್ರ ಬುಟ್ಟು ಬಾ. ಅದೇನು ಮಾಡ್ತನೆ ನೋಡು."

"ಅವುನಿನ್ನೇನು ಮಾಡ್ತನೊ, ಶಿಕಾರಿಪುರದ ಸಾಬರಿಗೆ ಮಾರ್‍ತನೆ!"

...ಂದವರ್ಧಕ

...ಚೆಗೆ ಒಂದು ಗುಳಿಗೆಯ ಬಗ್ಗೆ ಓದಿದೆ. ಡಾ. ಕ್ರೇಮರ್ ಎಂಬುವನೊಬ್ಬ ಒಂದು ಗುಳಿಗೆ ...ಂಡಿದಿದ್ದಾನೆ; ಅದರ ಹೆಸರು ಪ್ರೊಸಾಕ್. ತುಂಬ ದುಗುಡಗೊಂಡವನು (depressed) ಬೆಳಗ್ಗೆ ...ಳಿಗೆಯನ್ನು ನುಂಗಿದರೆ ಎಲ್ಲ ದುಗುಡ ಹೊರಟುಹೋಗುತ್ತದೆ; ಮಾತಾಡುವ, ಕೆಲಸ ಮಾಡುವ ...ವ, ಗೆಲ್ಲುವ ಚೈತನ್ಯ ದೊರೆಯುತ್ತದೆ. ಟೆಸ್ ಎಂಬ ಹೆಂಗಸು ಅಳುಮುಂಜಿಯಾಗಿದ್ದಳು; ಆಕೆ ...ಬೇಸರ, ದುಗುಡದಲ್ಲಿ ಮುಳುಗಿದ್ದು ತಾನು ಒಬ್ಬಂಟಿ, ಅಸಹಾಯಕಿ, ನಿಷ್ಪ್ರಯೋಜಕಿ ...ಕೊಂಡಿದ್ದಳು. ಈ ಬೇಸರದಿಂದ ಅವಳ ಚೆಂದ ಕೂಡ ಕೆಟ್ಟಿತ್ತು. ಕೆಲಸದಲ್ಲಿ ಆಸಕ್ತಿ ಇಲ್ಲದೆ ಎಲ್ಲರ ...ಕ್ಕೊಳಗಾಗಿದ್ದಳು. ಈ ಹುಡುಗಿ ಪ್ರೊಸಾಕ್ ತೆಗೆದುಕೊಂಡೊಡನೆ ಹೊಸ ವ್ಯಕ್ತಿಯಂತಾದಳು. ...ಕಾಯಿಲೆಗಳು, ಒಬ್ಬಂಟಿತನ ಎಲ್ಲ ಹೊರಟುಹೋದವು. ಹೊಸ ಹುಮ್ಮಸ್ಸು ತುಂಬಿಕೊಂಡಿತು. ...ಪರಿಣಾಮಗಳು (side effects) ಕೂಡ ಇರಲಿಲ್ಲ.


ಗುಳಿಗೆ ಪ್ರಸಿದ್ಧವಾಗುತ್ತಿದೆ; ಮನುಷ್ಯನ ವ್ಯಕ್ತಿತ್ವವನ್ನೇ ಬದಲಿಸಿ ಹೊಸ ಜೀವ ತುಂಬಬಲ್ಲ ಈ ...ಯ ವಿರುದ್ಧ ಮಾತಾಡುವವರು ಇದ್ದಾರೆ. "ಮನುಷ್ಯನಿಗೆ ದುಗುಡ ಕೂಡ ಮುಖ್ಯ; ಎಲ್ಲ despair, ದುಗುಡದಿಂದಲೇ ದೊಡ್ಡ ಕಲೆ, ಸಾಹಿತ್ಯ ಸಂಗೀತ ಬಂದಿರುವುದು" ಎಂದು ಇವರು ವಾದಿಸುತ್ತಾರೆ.




ಸಾಹಿತ್ಯದಲ್ಲಿ ದುಗುಡಕ್ಕೆ, ನಿಟ್ಟುಸಿರಿಗೆ ಪ್ರಖ್ಯಾತರಾದವರು ದೋಸ್ತೋವ್‌ಸ್ಕಿ ಮತ್ತು ಕಾಫ್ಕ. ಅವರಿಗೆ ಈ ಗುಳಿಗೆ ಕೊಟ್ಟಿದ್ದರೆ ಏನಾಗುತ್ತಿತ್ತು? ಅವರು ಬರೆಯುವ ರೀತಿ, ಮನೋಲಹರಿ ಬೇರೆಯಾಗುತ್ತಿತ್ತೆ? ಅವರು ಮನುಷ್ಯನ ಬದುಕನ್ನು ಮುಗುಳ್ನಗುತ್ತ ನೋಡುವುದು ಸಾಧ್ಯವಾಗುತ್ತಿತ್ತೆ? ಇಂಥ ಪ್ರಶ್ನೆಗಳಿಗೆ ಉತ್ತರ ಕಷ್ಟ. ಯಾಕೆಂದರೆ ಮಾನವನ ಮೂಲಭೂತ ನೋವು ಮತ್ತು ಸಂಕಟ ಇಲ್ಲವಾಗುವ ಸಂಭವ ಕಡಿಮೆ; ಆನಂದದಂತೆಯೇ ಸಂಕಟವನ್ನು ಕೂಡ ಮನುಷ್ಯ ಬಯಸುತ್ತಾನೆ-ಪಡೆಯುವುದರಂತೆಯೇ ಕೊಡುವುದನ್ನು ಆತ ಇಷ್ಟಪಡುತ್ತಾನೆ.

ಆದರೆ ತೀರಾ ಪರಬಾಡುವ ಸಾಹಿತಿಗೆ ಈ ಗುಳಿಗೆ ಕೊಡುವುದು ಒಳ್ಳೆಯದು.

'ಚೀಟಿಂಗ್'



ಈ ಹಾಲಿವುಡ್ ಎಂಥ ವಿಷಯವೆಂದರೆ, ಅದು ಒಂದೊಂದು ದಿಕ್ಕಿನಿಂದ ಒಂದೊಂದು ತರಹ ಕಾಣುತ್ತದೆ. ಸುಮ್ಮನೇ ದೊಡ್ಡದೊಡ್ಡ ಚಿತ್ರಗಳನ್ನು ನೆನಪಿಕೊಂಡರೆ ಬೆನ್‌ಹರ್, ಕೊವಾಡಿಸ್, ಸ್ಪಾರ್ಟಕಸ್ ಮುಂತಾದವು ನೆನಪಾಗುತ್ತದೆ; ಹಾಗೆಯೇ ನಮ್ಮನ್ನು ಕಾಡಿದ, ಮಾನಸ ಲೋಕದಲ್ಲಿ ಸೇರಿಹೋದ ಚಿತ್ರಗಳು. ಅದಿರಲಿ, ಒಂದು ವಿಚಿತ್ರ ಹೇಳುತ್ತೇನೆ. ಸಿನಿಮಾ ದಾಖಲಿಸುವ ಮಾಧ್ಯಮ; ಕ್ಯಾಮರಾ ಮೂಲಕ ಇದ್ದದ್ದನ್ನು ಇದ್ದಹಾಗೆ ಪ್ರತಿಬಿಂಬಿಸುತ್ತದೆ. ಈ ದಾಖಲೆಯ ಗುಣವನ್ನು ಇಟ್ಟುಕೊಂಡೇ ಭ್ರಾಮಕಲೋಕ, ಕನಸಿನಲೋಕ ಕೊಡಬೇಕಾಗುತ್ತದೆ. (ಅದೆಲ್ಲ ಬೇಕಾಗಿದ್ದರೆ).




ಈ ಮಾಧ್ಯಮವನ್ನು ತಿರುಚುತ್ತಾ ಹೋದರೆ ಇದಕ್ಕೆ ನಂಬಿಸುವ ಶಕ್ತಿ ಇಲ್ಲವಾಗುತ್ತದೆ. ಉದಾಹರಣೆಗೆ special effects ಮೂಲಕ ಪರಲೋಕದ ಜನ ಬಂದಂತೆ, ಭೂಮಿಯ ಮೇಲೆ ಆಗಬಾರದ ಅದ್ಭುತ ಆದಂತೆ ತೋರಿಸಿದರೆ ಅದು ಕೃತಕವಾಗುತ್ತದೆ; ಸ್ಪೀಲ್‌ಬರ್ಗ್ ಕೆಲವು ಸಲ ಸೋಲುವುದು ಇಲ್ಲಿಯೇ. ಅದೇ ಇಂಗ್‌ಮಾರ್ ಬರ್ಗ್‌ಮನ್ ಸಾವಿನ ಜೊತೆ ಸಂಭಾಷಣೆ ನಡೆಸಿದರೂ, ಒಬ್ಬ ಮುದುಕನ ಬಾಲ್ಯ, ಯೌವ್ವನ ತೋರುತ್ತಲೇ ವರ್ತಮಾನದ ಆತನ ತಳಮಳ ತೋರಿದರೂ ಅದು ಸಹಜವಾಗಿ ಇರುತ್ತದೆ. ಭೂತಕಾಲಕ್ಕೆ ಹೋಗುವುದು (ಅಂದರೆ flash-back) ಮತ್ತು ಸನಿಹದ ಚಿತ್ರ ತೆಗೆದು ಚಿತ್ರವನ್ನು ಬಿಂಬಿಸುವುದು (ಅಂದರೆ close-up) ಸಿನಿಮಾದ ಎರಡು ವಿಶೇಷ ಗುಣಗಳು. ನಾಟಕದಲ್ಲಿ ಇದು ಕಷ್ಟ ಮತ್ತು ಪ್ರಯತ್ನಿಸಿದರೆ ಗೊಂದಲವಾಗುತ್ತದೆ.

ಸಿನಿಮಾ ರಂಗದಲ್ಲಿ ಒಂದು ಪಾರಿಭಾಷಿಕ ಪದವಿದೆ-ಅದು cheating. ಸಿನಿಮಾ ಮಾಡುವಲ್ಲಿ ಇದು ಮೋಸವಲ್ಲ, cheating ಅಂದರೆ ನೀವು ಒಂದು ಮನೆಯನ್ನು ಪ್ರವೇಶಿಸುತ್ತಿದ್ದಂತೆ ತೋರಿಸಿ ಇನ್ನೊಂದು ನಿಲುವಿನಿಂದ ಇನ್ನೊಂದು ಮನೆಯೊಳಕ್ಕೆ ಬರುತ್ತಿರುವಂತೆ ತೋರಬಹುದು. ಈ cheating ಪದರ ದುರ್ಬಳಕೆಯಾದರೆ ನೀವು ನಿಮ್ಮ ಪ್ರೇಕ್ಷಕರು ನಂಬದಂಥ ಕೃತಕಲೋಕ ಸೃಷ್ಟಿಸುತ್ತೀರಿ. ಕಾವ್ಯ ಓದುವಾಗ suspension of disbelief ಬಗ್ಗೆ ಮಾತಾಡುತ್ತಾರೆ; ಅಂದರೆ ಕಾವ್ಯದ ಪ್ರಪಂಚವನ್ನು ನಂಬುವುದಕ್ಕಾಗಿ ಅಪನಂಬಿಕೆಯನ್ನು ತೊಡೆದುಹಾಕಿರುತ್ತೀರಿ; ಆ ಮಾತು ಈಗ ಸಿನಿಮಾಕ್ಕೆ ಚೆನ್ನಾಗಿ ಅನ್ವಯಿಸುತ್ತದೆ.

-ಜೂನ್ 30, 1993

ಸಕ್ಕರೆ ತಿನ್ನದಿದ್ರೆ ಯಾರಾದ್ರೂ ಸಾಯ್ತಾರಾ...

ಅಣಕ



ಎಚ್.ಎಲ್. ಕೇಶವಮೂರ್ತಿ

ಅದೇ ಅಪ್ಪ ಸಕ್ಕರೆ ತಿಂದ್ರೆ ಸಕ್ಕರೆ ಕಾಯಿಲೆ ಬತ್ತದೆ. ಸಕ್ಕರೆ, ಉಪ್ಪು ಹೆಚ್ಚು ತಿನ್ನಬ್ಯಾಡಿ, ಹಂಗೆ ಮಾಡಿದ್ರೆ ಅದು ಯಿಸ ಯಿಸ ತಿಂದಂಗೇಯ ಅಂತ ಡಾಕುಟ್ರುಗಳೇ ಹೇಳ್ತಾ ಬದ್ದಾವ್ರೆ. ಇದ ಅರೀದೆ ಸಕ್ಕರೆ ಬೆಲೆ ಏರದೋ, ಸಕ್ಕರೆ ಬೆಲೆ ಏರದೋ ಅಂತ ಕೂಗಾಡೋದು ತರವಲ್ಲ ಬುಡಿ. ಆಹಾರದ ಬೆಲೆ ಹೆಚ್ಚಾಯ್ತು ಅಂತಾರೆ. ಎಷ್ಟು ಮಹಾ ಹೆಚ್ಚಾಗಿರೋದು ಅಂತಾವ. ಅದನ್ನ ಎಷ್ಟ್ರೀ ಬಳಸ್ತೀರಿ ಮನೇಲಿ. ಅಮ್ಮಮ್ಮ ಅಂದ್ರೆ ನಿಮ್ಮ ಆದಾಯದಲ್ಲಿ ನಾಕಾಣೆ ಭಾಗಾನೂ ಇಲ್ಲ, ಉಳಿದ ಹಣಾನೆಲ್ಲ ಸ್ನೋ ಪೌಡ್ರು, ಬಟ್ಟೆ ಬರೆ, ಮೋಟ್ರುಗೀಟ್ರು ಅಂತ ಶೋಕೀಗೆ ಹಾಕ್ತೀರಿ. ಅದರ ಬೆಲೆ ಏನು ಏರದ ಹಂಗೇ ಇದ್ದತಾ. ಅದರ ಬಗ್ಗೆ ಯಾಕ್ರೀ ಯಾರೂ ಪಿಟ್‌ಪೀ ಅನ್ನಲ್ಲ, ಬರೀ ಆಹಾರ ಪದಾರ್ಥಗಳ ಬೆಲೆ ಗಗನಮುಟ್ಟದೆ ಅಂತ ಆಕಾಸಾನೆ ಕಳಚಿ ತಲೆ ಬಿದ್ದಂಗೆ ಆಡ್ತಿದೀರಲ್ಲ.....

ವಾಚಕ ಮಹಾಶಯರೆ ಈ ವಾದವನ್ನು ಮಂಡಿಸುತ್ತಿರುವವರು ನಾವಲ್ಲ, ಎನ್‌ಸಿಪಿಯ ತುತ್ತೂರಿ 'ರಾಷ್ಟ್ರವಾದಿ' ಎಂಬ ನಿಯತಕಾಲಿಕದ ಸಂಪಾದಕರು. ಆ ಮಹಾಶಯರಿಗೆ ಕೇಂದ್ರ ಆಹಾರ ಮಂತ್ರಿ ಶರದ್ ಪವಾರ್ ಮೇಲೆ ಆರೋಪ ಹೊರಿಸುತ್ತಿರುವುದು ಅರ್ಥಶೂನ್ಯ ಎನ್ನಿಸಿದೆ. 'ಸಕ್ಕರೆ ಬೆಲೆ ಏರಿದೆ' ಎಂದು ಹೇಳಿದರೆ 'ಸಕ್ಕರೆ ತಿನ್ನುವುದನ್ನು ಬಿಡಿ' ಎಂಬುದು ಅವರ ಬುದ್ಧಿಮಾತು!

ಆಹಾ ಎಂತಹ ಅದ್ಭುತ ಸಲಹೆ!

ಈ ಅಮೋಘ ಸಲಹೆಯನ್ನು ಚಾಚೂತಪ್ಪದೆ ಅನುಸರಿಸದಲ್ಲಿ.....

'ಆಹಾರ ಪದಾರ್ಥಗಳ ಬೆಲೆ ಏರಿತು.'

'ಆಹಾರ ಪದಾರ್ಥ ಬಳಕೆ ಮಿತಗೊಳಿಸಿ!'

ಕನ್ನಡದ ನಾಟಕಕಾರ ಶ್ರೀರಂಗ ಅವರು ಇಂಗ್ಲೆಂಡಿನಿಂದ ಹಿಂತಿರುಗಿದಾಗ ನಿರುದ್ಯೋಗಿಯಾಗಿದ್ದು ಹಣದ ಕೊರತೆಯಿಂದಾಗಿ ಒಂದು ತಿಂಗಳಲ್ಲಿ ಎರಡೇ ಊಟ ಮಾಡುತ್ತಿದ್ದರಂತೆ. ಅವರ ಮಾದರಿಯನ್ನು ಅನುಸರಿಸಿ ಎಂಬುದಿರಬೇಕು. ಯಾಕೆ ಅಂದರೆ ಅವರು ತಿಂಗಳಿಗೆರಡು ಊಟದ ಶ್ರೀರಂಗರಾಗಿದ್ದುದು ಮುಂಬಯಿಯಲ್ಲಿ!

ಆಯಿತು, ಮಿತಗೊಳಿಸಿದೆವು.

'ಸಾರಿಗೆ ದರ ಏರಿತು.'

'ಪ್ರಯಾಣ ಯಾಕೆ ಮಾಡ್ತೀರಿ? ಅದನ್ನ ನಿಲ್ಲಿಸಿ'

ಪ್ರಯಾಣ ಮಾಡಿದರೆ ಸಾವು ಸಂಭವಿಸುವ ಸಂದರ್ಭ ಒದಗಿಬರಬಹುದು. ಪ್ರಯಾಣಿಸದೇ ಇದ್ದಲ್ಲಿ? ಯಾರೂ ಸಾಯುವುದಿಲ್ಲವಲ್ಲ! ಅದನ್ನೂ ಜಾರಿಗೆ ತಂದೆವು.

'ಬಟ್ಟೆ ಬೆಲೆ ಏರಿತು'

'ಬಟ್ಟೆ ತೊಡಬೇಡಿ!'

ಹೌದಲ್ಲಾ! ಬಟ್ಟೆ ತೊಡದಿದ್ದರೆ ಯಾರೂ ಸಾಯೋಲ್ಲವಲ್ಲಾ...

ಯಾಕೋ ಏನೋ ತಮ್ಮ ಪಕ್ಷ ತುತ್ತೂರಿಯ ಸಂಪಾದಕರ ಸಲಹೆ ಪಕ್ಷದವರಿಗೇ ಹಿಡಿಸಿಲ್ಲವಂತೆ. ಹಾಗಂತ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೇನು ಸುಮ್ಮನೆ ಕೂತಿರಲಿಲ್ಲ. ಎಲ್ಲ ಪಕ್ಷದವರೂ, ಕಾಂಗ್ರೆಸೂ ಒಳಗೊಂಡಂತೆ, ತಾರಾಮಾರಾ ಜಾಡಿಸಲು ಹಚ್ಚಿಕೊಂಡಾಗ ಕೇಂದ್ರ ಆಹಾರ ಮಂತ್ರಿ ಏನು ಮಾಡಿದ್ದರಪ್ಪ ಅಂದರೆ....

ಆಹಾರ ಬೆಲೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಿಲ್ಲ, ಪರಂತು ಮುಂಬಯಿಯ 'ಮಾತೃಶ್ರೀ'ಗೆ ತಮ್ಮ ಪಾದ ಬೆಳೆಸಿದರು. ಕಾಗದದ ಹುಲಿ ಬಿರುದಾಂಕಿತ ಬಾಳಠಾಕ್ರೆಯ ಕೃಪಾಶೀರ್ವಾದ ಪಡೆದರು!

ನೀತಿಗೆಟ್ಟ ರಾಜಕೀಯದಲ್ಲಿ ಶಾಶ್ವತ ಶತ್ರುವೂ ಇಲ್ಲ ಶಾಶ್ವತ ಮಿತ್ರರೂ ಇಲ್ಲ ಎಂಬುದರ ಸಂಪೂರ್ಣ ಅರಿವಿದ್ದ ಕಾಂಗ್ರೆಸ್ ನಾಯಕರು ಹೀಗಾಗಬಹುದು ಎಂದು ಮುಂಚಿಯೇ ವಾಸನೆ ಹಿಡಿದಿದ್ದರಿಂದ ಏನು ಮಾಡಿದರಪ್ಪ ಅಂದರೆ ಆಹಾರ ಬೆಲೆ ನಿಯಂತ್ರಣಕ್ಕೆ ಸಮಿತಿ ರಚಿಸಿ ತಿಪ್ಪೆ ಸಾರಿಸಿದರು! ಹೀಗೆ ಮಾಡಿದ್ದು ನ್ಯಾಯಾನೆ ಇದೆ ಅನ್ನಿ. ಎರಡು ಸಾವಿರದ ಹದಿನಾಲ್ಕಕ್ಕೆ ಯುವರಾಜ ರಾಹುಲ್ ಗಾಂಧಿಯ ಪಟ್ಟಾಭಿಷೇಕ ಆಗಬೇಕು. ಮಹಾರಾಷ್ಟ್ರದಲ್ಲಿ ತಾನಾಗೆ ಗೆಲ್ಲೋಕೆ ಕಾಂಗ್ರೆಸ್‌ಗೆ ಶಕ್ತಿ ಸಾಲದು. ಎನ್‌ಸಿಪಿ ಅಂತ ಪಕ್ಷದ ಊರುಗೋಲು ಬೇಕೇಬೇಕು ಕಾಂಗ್ರೆಸ್ ಮುದುಕಿಗೆ. ಏನೆಲ್ಲ ತಯಾರಿ ನಡೆಸಬೇಕೋ ಅದ ನಡೆಸಲೇಬೇಕಲ್ಲಾ....

ಅದು ಸರಿ. ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರಿರೋ ವಿಷಯ... ಅಯ್ಯೋ ರಾಮನೆ ಇದ್ದೋರು ತಿಂತಾರೆ, ಇಲ್ದಿದ್ದೋರು ಹಂಗೇ ಇರ್ತಾರೆ.

ಅದೂಅಲ್ಲದೆ ರಾಹುಲ್ ಪ್ರಧಾನಿ ಆಗಲಿಲ್ಲವಲ್ಲ ಅನ್ನೊ ನೋವಿನಲ್ಲಿ ಜನ ಸಾಯಬಹುದು, ಆಹಾರ ಇಲ್ಲ ಅಂತ ಯಾರಾದ್ರೂ ಸಾಯ್ತಾರೇನ್ರೀ.....!

ರಾಜ್ಯ ಒಂದೇ-ನಾಲ್ವರು ಮುಖ್ಯಮಂತ್ರಿಗಳು!

ಇದು ಹೇಗೆ ಸಾಧ್ಯ?

ಈ ದೇಶದಲ್ಲಿ ಯಾವುದು ಸಾಧ್ಯ ಇಲ್ಲ ಹೇಳಿ.

ಟೀವೀಲಿ ಜ್ಯೋತಿಷ್ಯ ಅಂತ ಬುರುಡೆ ಬಿಡ್ತಾರೆ. ಬಾಯಿಬಿಟ್ಟುಗೊಂಡು ನೋಡ್ತಾ ಕುಂತಿರ್ತೀವಿ.

ಪುನರ್ಜನ್ಮ ಅಂತ ಕಗ್ಗ ಹೊಸೀತಾರೆ ಟೀವೀಲಿ. ಆಹಾಹಾ ಅಂತ ಬಾಯಿ ಚಪ್ಪರಿಸ್ತೀವಿ.

ಯಾವ್ನೋನೋ ಸುಡುಗಾಡು ಸಿದ್ಧ ಲಿಂಗ ನುಂಗ್ತಾನೆ. ನುಂಗಿದ ಮೇಲೆ ಅದು ಎಲ್ಲಿಂದ ಬರಬೇಕೋ ಅಲ್ಲಿ ಹೊರಬರಬೇಕು ತಾನೆ? ಲಿಂಗ ಅಲ್ಲಿ ಬರೋದು ಅಪವಿತ್ರ ಅಂತಾನೋ ಏನೋ, ಮತ್ತೆ ಬಾಯಲ್ಲೇ ಬರುಸ್ತಾನೆ.

ನಾವೇನು ಮಾಡ್ತೀವಿ? ಆಹಾ ಪವಾಡ ಪುರುಷ, ಓಹೋ ಪವಾಡ ಪುರುಷ ಅಂತ ಕೊಂಡಾಡ್ತೀವಿ.

ವಂಚನೆ ಕೃತ್ಯಗಳೆಲ್ಲ ಪವಾಡವಾಗಿ ಗೋಚರಿಸುತ್ತವೆ!

ಬ್ರಿಟಿಷರು ಭಾರತಕ್ಕೆ ಕಾಲಿಟ್ಟಾಗ ಊರಿಗೊಬ್ಬರಾಜ ಇದ್ದನಂತೆ. ಅವನಿಗೆ ಸುಂದರವಾದ ಅರಮನೆ, ಬೇಜಾನು ಆಳೂಕಾಳು ಎಲ್ಲ ಇದ್ದರಂತೆ. ಅಂತಃಪುರಾನ ಇತ್ತಂತೆ. ಅದು ಇದ್ದ ಮೇಲೆ ಕನಿಷ್ಠ ಐದಾರಾದರೂ ಸುಂದರ ಹೆಣ್ಣುಗಳಿದ್ದರೇ ಅದಕ್ಕೆ ಕಳೆ ಅಲ್ವಾ. ಅದ್ಕೆ ಒಬ್ಬೊಬ್ಬ ರಾಜನೂ ತನ್ನ ಶಕ್ತ್ಯಾನುಸಾರ ಮಹಿಳಾಮಣಿಗಳನ್ನ ಕಟ್ಟಿಕೊಂಡಿದ್ದನಂತೆ. ಇದರಿಂದ ಅವನಿಗೆ ಕೆಲವು ಅನುಕೂಲಾನು ಇತ್ತಂತೆ. ಹೆಚ್ಚೆಚ್ಚು ಹೆಂಡಿರನ್ನು ಕಟ್ಟಿಕೊಂಡಷ್ಟೂ ಪ್ರಜೆಗಳು 'ರಾಜ ಅಂದ್ರೆ ಹಿಂಗಿರ್ಬೇಕು ಕನಯ್ಯ' ಅಂತ ಮೆಚ್ಚುಗೆ ಸೂಚಿಸುತ್ತಿದ್ದುದಲ್ಲದೆ, ಬೇರೆ ರಾಜರು ಇವನ ಮೇಲೆ ದಂಡೆತ್ತಿ ಬಂದಾಗ ಮಾವನ ಕಡೆಯವರ ಸಹಾಯ ಸಿಗ್ತಿತ್ತಂತೆ. ಇಷ್ಟೆಲ್ಲ ಅನುಕೂಲಗಳಿದ್ದರೂ ಅವರನ್ನೆಲ್ಲ ಸಾಕಬೇಕಲ್ಲ. ಅದಕ್ಕೆ ಬೇಕಾದ ಆದಾಯ ಇರಲಿಲ್ಲವಂತೆ. ಆಗ ಅವರೇನು ಮಾಡುತ್ತಿದ್ದರಪ್ಪ ಅಂದರೆ ಕಳ್ಳರ ಗುಂಪನ್ನ ಸಾಕಿಕೊಂಡು ಅವರು ತಂದ ಲೂಟೀಲಿ ಪಾಲು ಪಡೆದು ಹೇಗೋ ಸಂಸಾರ ತೂಗಿಸುತ್ತಿದ್ದರಂತೆ. ಇದು ಸಾಲದೆ ಬಂತು ಅಂದ್ರೆ ಸ್ವತಃ ಮಹಾರಾಜರೆ ಮಾರುವೇಶದಲ್ಲಿ ರಾತ್ರಿ ವೇಳೆ ಕೊಲೆ, ಸುಲಿಗೆ, ಕಳ್ಳತನ, ದರೋಡೆ ಇವನ್ನೆಲ್ಲ ಮಾಡ್ತಿದ್ದರಂತೆ. ಬೆಳಗಾಗುತ್ತಿದ್ದಂತೆ ಮಹಾರಾಜನಂತೆ



ಮೆರೀತಿದ್ದರಂತೆ. ಆಸ್ಥಾನದಲ್ಲಿ ಸಿಂಹಾಸನವನ್ನಲಂಕರಿಸಿ ಪ್ರಜೆಗಳಿಂದ ದೂರುಗಳನ್ನು ಸ್ವೀಕರಿಸುತ್ತಿದ್ದರಂತೆ. ಮಾರುವೇಶದಲ್ಲಿ ತಾನು ಮಾಡಿದ ಅಕೃತ್ಯಗಳಿಗೆ ದೊರೆಯ ದಿರಿಸಿನಲ್ಲಿ ನ್ಯಾಯ ದೊರಕಿಸುವ ಅಶ್ವಾಸನೆ ನೀಡುತ್ತಿದ್ದನಂತೆ. ಪ್ರಜೆಗಳು ಕಳೆದುಕೊಂಡ ಚಿರಾಸ್ತಿಗಳಿಗೆ ಪರಿಹಾರ ಅಂತ ಅಷ್ಟೋ ಇಷ್ಟೋ ಹಣ ನೀಡಿ ಸಾಂತ್ವನ ಹೇಳುತ್ತಿದ್ದುದೂ ಉಂಟಂತೆ. ಇದರಿಂದ ಸಂತೃಪ್ತಿಗೊಂಡ ಪ್ರಜೆಗಳು 'ಆಹಾ ದೊರೆಯೆ', 'ಓಹೋ ದೊರೆಯೆ' ಎಂದು ಮುಗ್ಧತೆಯಿಂದ ಕೊಂಡಾಡಿ 'ಬಹು ಪರಾಕ್' ಅನ್ನುತ್ತಿದ್ದರಂತೆ.

ಆಹಾ ಎಂತಹ ವಂಚಕರು ಈ ಮಹಾರಾಜರು ಅನ್ನಿಸಿಕೊಂಡೋರು ಅಂತಾವ ನಾವೇನು ಮಾಡಿದ್ವಿ ಅವರನ್ನ ಕಿತ್ತೊಗ್ದು ನಮ್ಮ ಕೈಗೇ ಆಡಳಿತ ಸೂತ್ರ ತಗೊಂಡ್ರೆ ಈ ಆಡಳಿತದ ಪರಿಯ ಲಾಲಿಸುವಂತ ವರಾಗಿ...

ಭರತ ವರ್ಷ ಎಂಬ ಈ ಪುಣ್ಯಭೂಮಿಯಲ್ಲಿ ಮೇಘಾಲಯ ಎಂಬ ರಾಜ್ಯ ಇರುವುದಷ್ಟೇ. ಈ ರಾಜ್ಯದ ಪ್ರಜೆಗಳ ಶಾಂತಿ, ಸುಖ, ಸಮೃದ್ಧತೆಗಾಗಿ ಡಿ.ಡಿ. ಲಪಾಂಗ್ ಎನ್ನುವ ಪ್ರಜಾಸೇವಕನು ಮುಖ್ಯಮಂತ್ರಿ ಪದವಿಯನ್ನ ಲಂಕರಿಸಿದ್ದನು. ಆ ರಾಜ್ಯದ ಶ್ರೇಯೋಭಿವೃದ್ಧಿಯನ್ನು ಸಹಿಸದ ಅನೇಕ ದುಷ್ಟರಿದ್ದರು. ಅವರಲ್ಲಿ ಪ್ರಮುಖರಾದವರೆಂದರೆ ರಾಜ್ಯದ ಯೋಜನಾ ಮಂಡಳಿಯ ಅಧ್ಯಕ್ಷ ಡೊಂಕುಪಾರ್ ರಾಯ್ ಮತ್ತು ಮೇಘಾಲಯ ಆರ್ಥಿಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಜೆ.ಡಿ. ರಿಂಬಾಯ್ ಎಂಬುವವರಾಗಿದ್ದರು. ನಾವು ಸಂತೃಪ್ತಿಗೊಂಡರೆ ಯೋಜನೆಗಳೂ ಸುಗಮವಾಗಿ ಜಾರಿಗೆ ಬರುತ್ತವೆ, ಆರ್ಥಿಕ ಅಭಿವೃದ್ಧಿಯೂ ಯಥೇಚ್ಛವಾಗಿ ವೃದ್ಧಿಯಾಗುತ್ತದೆ ಎಂಬ ಮನೋಭಾವ ಹೊಂದಿದ್ದು ಸಹಜವೇ ಆಗಿತ್ತು. ಮುಖ್ಯಮಂತ್ರಿ ಇದಕ್ಕೆ ಸ್ಪಂದಿಸದೇ ಹೋದರೆ ಬಂಡಾಯ ಏಳುವುದು ಅನಿವಾರ್ಯವಾಗುತ್ತದೆ ಎಂಬ ಸಂದೇಶವನ್ನು ತಲುಪಿಸಿದರು. ಜನಗಳ ಶ್ರೇಯೋಭಿವೃದ್ಧಿಗೆ ಈ ಮುಂಡೇಮಕ್ಕಳು ಅಡ್ಡಿಪಡಿಸುತ್ತಿದ್ದಾರಲ್ಲ, ನಾನು ಈ ಸ್ಥಾನದಿಂದ ಇಳಿದರೆ ಮೇಘಾಲಯವೇ ವಿನಾಶವಾಗುತ್ತಲ್ಲಾ ಎಂದು ಚಿಂತಾಕ್ರಾಂತನಾದನು. ಯಾರು? ಮುಖ್ಯಮಂತ್ರಿ! ಪ್ರಜೆಗಳ ಹಿತವೇ ನನಗೆ ಮುಖ್ಯ ಎಂದು 'ಹಾಳಾಗಿ ಹೋಗಿ, ನೀವೂ ಮುಖ್ಯಮಂತ್ರಿಗಳಾಗಿ' ಎಂದು ಶಪಿಸುತ್ತವೇ ಆ ಗೌರವವನ್ನು ಅವರಿಗೆ ನೀಡಿದನು. ದುಡ್ಡಿಲ್ಲ ಕಾಸಿಲ್ಲ ಸಂಪತ್ತಯ್ಯಂಗಾರ್ ಎಂಬ ರೀತಿಯಲ್ಲಿ ಅವರೂ ಅಧಿಕಾರವಿಲ್ಲದ ಮುಖ್ಯಮಂತ್ರಿಗಳು ಎಂದು ಪ್ರಜೆಗಳು ಭಾವಿಸಿ ತಟಸ್ಥರಾಗಿದ್ದರು. ಅಧಿಕಾರವಿಲ್ಲದಿದ್ದರೂ ಮುಖ್ಯಮಂತ್ರಿಸ್ಥಾನದ ಸಕಲಸವಲತ್ತೂ ಅವರಿಗೆ ದೊರಕಿದ್ದರಿಂದ ಇನ್ನು ರಾಜ್ಯದ ಯೋಜನೆಗಳು, ಆರ್ಥಿಕ ಅಭಿವೃದ್ಧಿ ಸುಗಮವಾಗಿ ಸಾಗುತ್ತದೆ ಎಂದು ಸಂಬಂಧಿಸಿದವರೆಲ್ಲರೂ ನಿಶ್ಚಿಂತೆಯಿಂದ ಇರಲಾಗಿ....


ಮಂಡಳಿಗಳೇನಿದ್ದರೂ ಹೀಗೆ ಮಾಡಿದರೆ ಉತ್ತಮ ಎಂದು ಸಲಹೆ ನೀಡಬಹುದೇ ಪರಂತು ಅದನ್ನು ಜಾರಿಗೊಳಿಸುವವರು ಮಂತ್ರಿಮಂಡಳದವರು. ಹೀಗಿರುವಲ್ಲಿ ಕೇವಲ ಉಪಮುಖ್ಯಮಂತ್ರಿ ಸೌಲಭ್ಯ ಮಾತ್ರ ನನಗೆ ನೀಡಿರುವುದು ತವರಲ್ಲ ಎಂದು ಜೆ.ಎಂ. ಲಿಂಗ್ಡೊ ಮಹಾಶಯರು ಪರಿಭಾವಿಸಿ ಸದರಿ ವಿಷಯವನ್ನು ಲಪಾಂಗ್ ಗಮನಕ್ಕೆ ತರಲಾಗಿ....

ಮುಖ್ಯಮಂತ್ರಿಗಳು ಉಪಮುಖ್ಯಮಂತ್ರಿಗೆ ಮುಖ್ಯಮಂತ್ರಿಗಳಿಗೊದಗಿಸುವ ಸೌಲಭ್ಯದಿಂದ ವಂಚಿಸಿದರೆ ಸಂಭವಿಸಬಹುದಾದ ಕಂಪನದಿಂದ ತಮ್ಮ ಪೀಠವೇ ಕುಸಿದುಬಿದ್ದು.. ಆಹಾ ಜನರ ನೆಮ್ಮದಿಯೇ ಹಾಳಾಗುವುದಲ್ಲಾ... ಅದಕ್ಕಾಗಿಯೇ ಪ್ರಜಾಕಂಟಕನಾಗಿ ನಿಂತಿರುವನಲ್ಲಾ... ಎಂಬುದನ್ನೆಲ್ಲ ಚಿಂತಿಸಿ... 'ಅಹುದೌಹುದು' ಎಂದು ಲಿಂಗ್ಡೊ ಮಾತಿಗೆ ಸಮ್ಮತಿಸಿದರು. ಹೀಗಾಗಿ ಲಿಂಗ್ಡೋ ಸಾಹೇಬರು ಅಧಿಕಾರದಿಂದ ಉಪಮುಖ್ಯಮಂತ್ರಿಯಾಗಿದ್ದರೂ ಸೌಲಭ್ಯದ ದೃಷ್ಟಿಯಿಂದ ಮುಖ್ಯಮಂತ್ರಿಯೂ ಆಗಿ ವಿರಾಜಮಾನರಾಗಿರುತ್ತ ಇರಲಾಗಿ....

ಮಾಧ್ಯಮಗಳೀಗ ಮೌಢ್ಯದ ರಾಯಭಾರಿಗಳು...

ಮೊನ್ನೆಯ ನಿಮ್ಮ ಪತ್ರಿಕೆಯಲ್ಲಿ ನಮ್ಮ ದಾವಣಗೆರೆಯ ಹುಡುಗ ಸಂತೋಷ್ ದಾವಣಗೆರೆಯ ಕುರಿತು ಬರೆದದ್ದು ನೋಡಿ ಖುಷಿಯಾಯಿತು.

ಸಂತೋಷ್‌ರವರು 300ಕ್ಕೂ ಹೆಚ್ಚಿನ ಬೀದಿನಾಟಕಗಳನ್ನು, 35ಕ್ಕೂ ಹೆಚ್ಚಿನ ಧಾರಾವಾಹಿಗಳನ್ನು, 50ಕ್ಕೂ ಹೆಚ್ಚಿನ ಸ್ಟೇಜ್ ಶೋಗಳನ್ನು ಮಾಡಿದ್ದಾನೆಂದು ತಿಳಿದು ಹೆಮ್ಮೆಯಾಯಿತು. ನಾವು ದಾವಣಗೆರೆಯವರಾಗಿದ್ದೂ ಅವರನ್ನು ಗುರುತು ಹಿಡಿಯಲಾಗಿರಲಿಲ್ಲ, ನಿಮ್ಮ ಪತ್ರಿಕೆ ಅವರನ್ನು ಗುರುತು ಹಿಡಿದು ಬರೆದದ್ದು ಖುಷಿ ತಂದಿತು.



ಮೂಲತಃ ದಾವಣಗೆರೆ ರಂಗಭೂಮಿಯ ತವರು. ಮೊನ್ನೆಯಷ್ಟೇ ಕಣ್ಮರೆಯಾದ ಚಿಂದೋಡಿಲೀಲಾರವರು ದಾವಣಗೆರೆಗೆ ಒಂದು ಹೆಮ್ಮೆ. ನಿಮ್ಮ ಪತ್ರಿಕೆಯಲ್ಲಿ ಅವರ ಜೀವನದ, ಅವರ ಸಾಧನೆಗಳ ಬಗ್ಗೆ ವಿಸ್ತಾರವಾಗಿ ಬರೆಯಬೇಕಾಗಿತ್ತು, ಮುಂದೆಯೂ ಕೂಡ ಹೀಗೆಯೇ ಹೊಸಬರನ್ನು ಗುರುತಿಸಿ ಆಶೀರ್ವದಿಸಿ ಎಂದು ಹಾರೈಸುವೆ.

-ಲಯನೆಸ್ ಅಕ್ಕಮಹಾದೇವಿ ಮತ್ತು ಸಂಗಡಿಗರು, ದಾವಣಗೆರೆ

ತಾವೆಂದಂತೆ ಕರಾವಳಿಯಲ್ಲಿನ ಪತ್ರಿಕೋದ್ಯಮ ಮೌಲ್ಯರಹಿತ ಸೆನ್ಸೇಷನ್‌ಗಳಿಂದಾಗಿ ಗಬ್ಬೆದ್ದು ಹೋಗಿರುವುದು ನಿಜ(ಲಂಕೇಶ್ 10-2-10). ಈ ವಿಷಯದಲ್ಲಿ ರಾಜ್ಯಮಟ್ಟದ ಪತ್ರಿಕೆಯಾದ ವಿಜಯಕರ್ನಾಟಕ ಸಹ ಸ್ಥಳೀಯ ಸಣ್ಣ-ಸಣ್ಣ ಸಂಜೆ ಪತ್ರಿಕೆಗಳೊಡನೆ ಪೈಪೋಟಿಗಿಳಿದಿರುವುದು ಖೇದಕರ.

ಹಿರಿಯ ಪತ್ರಕರ್ತ ಸಾಯಿನಾಥರು ದಿ ಹಿಂದೂ ಪತ್ರಿಕೆಯಲ್ಲಿ ಲೇಖನ ಬರೆದು ರಾಷ್ಟ್ರಮಟ್ಟದ ಪತ್ರಿಕೆಗಳೂ ಪತ್ರಿಕಾ ಧರ್ಮ ಮರೆತು "ಕಾಸಿಗಾಗಿ ಸುದ್ದಿ" ಪ್ರಕಟಿಸುವುದನ್ನು ಬಹಿರಂಗಪಡಿಸಿದ್ದು ಈಗ ಪತ್ರಿಕಾ ಮಂಡಳಿಯಿಂದ ವಿಚಾರಣೆಯಾಗುತ್ತಿದೆ. ಇದು ಇಡೀ ದೇಶದ ಪತ್ರಿಕೋದ್ಯಮದಲ್ಲಿ ಕುಸಿಯುತ್ತಿರುವ ಮೌಲ್ಯವನ್ನು ಸೂಚಿಸುತ್ತದೆ. ಪತ್ರಿಕಾರಂಗದವರು ಬೇರೆಲ್ಲಾ ಕ್ಷೇತ್ರಗಳ ಹುಳುಕುಗಳನ್ನು ಎತ್ತಿ ತೋರಿಸುತ್ತಾರೆ, ಟೀಕಿಸುತ್ತಾರೆ, ವಿಶ್ಲೇಷಿಸುತ್ತಾರೆ, ತನಿಖೆ ಮಾಡುತ್ತಾರೆ. ಆದರೆ ತಮ್ಮದೇ ಪತ್ರಿಕಾರಂಗದ ಹುಳುಕುಗಳನ್ನು ಮಾತ್ರ ಸುತರಾಂ ಎತ್ತಿ ತೋರಿಸುವುದಿಲ್ಲ ಎಂಬ ಆಪಾದನೆ ಹಿಂದೆಲ್ಲಾ ಇತ್ತು ನಿಜ. ಆದರೆ ಈಗ ಹಿರಿಯ ಪತ್ರಕರ್ತರೇ ಇತರ ಹಿರಿಯ ಪತ್ರಕರ್ತರ ಹುಳುಕುಗಳನ್ನು ಬಹಿರಂಗಪಡಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಗುಜರಾತ್ ಹಾಗೂ ಮಹಾರಾಷ್ಟ್ರಗಳಲ್ಲಿ ಕೇವಲ 'ಹಣಕ್ಕಾಗಿ ಸುದ್ದಿ' ಮಾತ್ರವಲ್ಲ 'ಸಂಪಾದನೆಗಾಗಿ ಸಂಪಾದಕೀಯ' ಎನ್ನುವಷ್ಟರ ಮಟ್ಟಿಗೆ ಸಂಪಾದಕೀಯವನ್ನೂ ಮೇಲು ಸಂಪಾದನೆಗಾಗಿ ಬಳಸಿಕೊಳ್ಳಲಾಗುತ್ತಿದೆಯಂತೆ. (ನಮ್ಮ ವಿ.ಕ.ದ ಸಂಪಾದಕರಿಗೆ 'ಹಗೆಸಾಧನೆ'ಗಾಗಿ ಸಂಪಾದಕೀಯ ಹಾಗೂ ವಾಚಕರ ವಿಜಯ)

ಕರ್ನಾಟಕದಲ್ಲೀಗ ಕೆಲವು ರಾಜ್ಯಮಟ್ಟದ ಪತ್ರಿಕೆಗಳೂ 'ಲೈಂಗಿಕ ಶಕ್ತಿ'ಯ ಔಷಧಿಗಳ ಪರೋಕ್ಷ ಜಾಹೀರಾತುಗಳನ್ನು ಸುದ್ದಿರೂಪದಲ್ಲಿ ಪ್ರಕಟಿಸುತ್ತಿವೆ. ಇಂತಹ ಛದ್ಮ-ಜಾಹೀರಾತುಗಳು (Surrogate Ads) ನೇರ ಜಾಹೀರಾತುಗಳಿಗಿಂತ ನೂರು ಪಾಲು ಹೆಚ್ಚು ಪರಿಣಾಮಕಾರಿ ಎಂದು ಎಲ್ಲರೂ ಬಲ್ಲರು. ಹಾಗಾಗಿ ಇಂತಹ 'ಸುದ್ದಿ ರೂಪದ' ಜಾಹೀರಾತುಗಳು ಹೆಚ್ಚುತ್ತಿವೆ ಹಾಗೂ ಪತ್ರಿಕಾಧರ್ಮ ಸಾಯುತ್ತಿದೆ. ಕರ್ನಾಟಕದಲ್ಲಿ ಜ್ಯೋತಿಷಿ, ವಾಸ್ತು ಪಂಡಿತರು, ಧರ್ಮದರ್ಶಿಗಳೊಂದಿಗೆ ಒಳ-ಒಪ್ಪಂದ ಮಾಡಿಕೊಂಡು ಕೆಲವು ಪತ್ರಿಕೆಗಳು ಇಂತಹ ಮೌಢ್ಯದ ರಾಯಭಾರಿಗಳನ್ನು 'ಆಧ್ಯಾತ್ಮಿಕ ಗುರುಗಳು', 'ಬ್ರಹ್ಮಾಂಡ ಜ್ಯೋತಿಷಿ', 'ಮಾತನಾಡುವ ದೇವರು'.... ಇತ್ಯಾದಿ ಬಿರುದುಗಳನ್ನು ಕೊಟ್ಟು ಸುದ್ದಿರೂಪದಲ್ಲಿ ಪ್ರಚಾರ ಮಾಡಿ ಓದುಗರನ್ನು ಆ ಢೋಂಗಿಗಳ ಜಾಲಕ್ಕೆ ನೂಕುತ್ತಿವೆ. ಈ ರೀತಿ "ಓದುಗ-ಪ್ರಭುಗಳು ಓದುಗ-ಕುರಿಗಳಾಗಿದ್ದಾರೆ". ಈ ಕುರಿಗಳ ನಡುವಿರುವ ಕೆಲವು ಟಗರುಗಳು ಮತ್ತೇರಿ ಯಾರ್‍ಯಾರಿಗೋ ಹಾಯುತ್ತವೆ, ಕರಾವಳಿ ಅಲೆಯ ಬಿ.ವಿ.ಸೀತಾರಾಮರಿಗೆ ಆದಂತೆ.

ಇಂಗ್ಲೆಂಡ್‌ನಲ್ಲಿ ಕಳೆದ ವರ್ಷ ನಡೆದ ಒಂದು ಸಮೀಕ್ಷೆಯಲ್ಲಿ ಕಂಡುಬಂದಿದ್ದೇನೆಂದರೆ ಆ ದೇಶದಲ್ಲಿ ಜನಸಾಮಾನ್ಯರು ಅತೀ ಹೆಚ್ಚು ದ್ವೇಷಿಸುವ ವರ್ಗಗಳಲ್ಲಿ ಮೊದಲನೆಯ ಗುಂಪೆಂದರೆ ರಾಜಕಾರಣಿಗಳದ್ದು ಹಾಗೂ ಎರಡನೆಯ ಗುಂಪೇ ಪತ್ರಕರ್ತರದಂತೆ. ಕಾರಣ ಆ ಮುಂದುವರೆದ ಸುಸಂಸ್ಕೃತ ದೇಶದಲ್ಲೂ ಒಟ್ಟು ಪತ್ರಕರ್ತರಲ್ಲಿ ಶೇ.30 ಪತ್ರಕರ್ತರು ಬ್ಲ್ಯಾಕ್‌ಮೇಲ್ ಪತ್ರಕರ್ತರಂತೆ. ಹಾಗಾದರೆ ಭಾರತದಲ್ಲಿ ಎಷ್ಟು ಸಂಖ್ಯೆಯಲ್ಲಿ ಬ್ಲ್ಯಾಕ್‌ಮೇಲ್ ಪತ್ರಕರ್ತರಿರಬಹುದು?

-ಪ್ರವೀಣ್ ವಿ.ಶೆಟ್ಟಿ, ಮಂಗಳೂರು

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ಉಪ್ಪಿ ಮತ್ತೆ ಸೂಪರ್ ಡೈರೆಕ್ಟರ್?



ಉಪೇಂದ್ರ ನಿರ್ದೇಶನದ ಚಿತ್ರ ನಾಡಿದ್ದು 18ರಂದು ...ರಲಿದೆ. ಇದು ಖಂಡಿತವಾಗಿಯೂ ಉಪೇಂದ್ರರ ...ಮಾನಿಗಳಿಗೆ ಸಂತೋಷ ನೀಡುವ ಸುದ್ದಿ. ಯಾಕೆಂದರೆ ಸುಮಾರು ಒಂಭತ್ತು ವರ್ಷಗಳ ನಂತರ ಉಪೇಂದ್ರ ...ವೊಂದನ್ನು ನಿರ್ದೇಶಿಸಲು ಹೊರಟಿದ್ದಾರೆ. ಚಿತ್ರದ ...ದು 'ಸೂಪರ್'. ಇದರ ನಿರ್ಮಾಪಕ ರಾಕ್‌ಲೈನ್ ...ಕಟೇಶ್. ನಾಯಕಿಯಾಗಿ ನಯನತಾರಾ ಈಗಾಗಲೇ ...ಮ್ಮಯಾಗಿ ಬಿಸಿಬಿಸಿ ಫೋಟೋ ಸೆಷನ್‌ಗಳಲ್ಲಿ ...ಸಿಕೊಂಡಿದ್ದಾಳೆ.

...ಮೂಲತಃ ತಂತ್ರಜ್ಞ ಮತ್ತು ನಿರ್ದೇಶಕರಾಗಿ ಹೆಸರು ...ಸಿದ ಉಪೇಂದ್ರ ಆಕಸ್ಮಿಕವಾಗಿ ನಾಯಕನಟನಾದವರು. ...ರೆ ಇತ್ತೀಚೆಗೆ ಅವರು ನಟಿಸುತ್ತಲೇ ಗಮನ ...ಸಿದ್ದರಿಂದ ಇನ್ನು ಮುಂದೆ ಅವರು ಯಾವ ಚಿತ್ರವನ್ನೂ ...ೇಶಿಸುವುದೇ ಇಲ್ಲವೇ ಎಂಬ ಜಿಜ್ಞಾಸೆ ಉದ್ಯಮದ ...ನ್ನು ಕಾಡುತ್ತಿತ್ತು.

...'ಓಂ' ಚಿತ್ರ ನಿರ್ದೇಶನದ ನಂತರ 'ಎ' ಚಿತ್ರವನ್ನು ...ತ್ತಿಕೊಂಡು ಅದರಲ್ಲಿ ನಾಯಕ ನಟನ ಪಾತ್ರವನ್ನು ...ಹಿಸುವ ಮೂಲಕ ಉಪೇಂದ್ರ ನಟನಾಗಿದ್ದರು. ...ರೆ ಆ ಚಿತ್ರದಲ್ಲಿ ನಾಯಕನ ಪಾತ್ರ ಸಿನಿಮಾ ನಿರ್ದೇಶಕ ...ಗಿದ್ದರಿಂದ ಆ ಪಾತ್ರ ಆತನಿಗೆ ಸರಿಹೊಂದಿತ್ತು. ...ಾಗಿ ಉಪೇಂದ್ರ ಅಂತಹ ಒಂದೆರಡು ಚಿತ್ರಗಳಲ್ಲಿ ...ಿ ಮತ್ತೆ ನಿರ್ದೇಶನಕ್ಕೆ ವಾಪಸ್ಸಾಗುತ್ತಾರೆ ಎಂದು ...ಧಿನಗರದ ನಿರ್ಮಾಪಕರು ಭಾವಿಸಿದ್ದರು.

...ಆದರೆ ಅದಾದನಂತರ ನಿರ್ಮಾಪಕರಿಗೆಲ್ಲಾ ...ೇಂದ್ರ ಎಂಬ ನಟನ ಕಾಲ್‌ಶೀಟ್ ಸಿಕ್ಕಿತ್ತೇ ವಿನಃ ...ೇಶಕನ ಕಾಲ್‌ಶೀಟ್ ಸಿಗಲೇ ಇಲ್ಲ. ಹೋಗಲಿ, ...ಪ್ಪ ಅವರ ಸ್ವಂತ ಬ್ಯಾನರ್‌ನ ಚಿತ್ರ ...ರಿದಾಗಲಾದರೂ ಉಪ್ಪಿ ಕ್ಯಾಮರಾ ಹಿಂದೆ ನಿಂತು ... ಕೈಚಳಕ ತೋರಿಸಬಹುದೆಂಬ ನಿರೀಕ್ಷೆಯೂ ...ಯಾಯಿತು. ಈ ಬಗ್ಗೆ ಕೇಳಿದಾಗಲೆಲ್ಲಾ "ಇಲ್ಲ ...ವೇ, ನನಗೂ ಚಿತ್ರ ನಿರ್ದೇಶಿಸಬೇಕೆಂಬ ಆಸೆ ... ಆದರೆ ಒಳ್ಳೆಯ ಕಥೆ ಸಿಗುತ್ತಿಲ್ಲ, ಏನೇ ಮಾಡಿದರೂ ...ಷ್ಟ ಮಟ್ಟದಲ್ಲಿ ಮಾಡಬೇಕಲ್ಲವೇ?" ಎಂದು ...ರಿಸುತ್ತಿದ್ದರು. ಆದರೆ ಅದೇ ಮಾತನ್ನು ಅವರು ...ವಾರು ವರ್ಷಗಳ ಕಾಲ ಮತ್ತೆ ಮತ್ತೆ ರಿಪೀಟ್ ...ಿದಾಗ ಯಾಕೋ ಉಪೇಂದ್ರ ಹಾರಿಕೆಯ ಉತ್ತರ ...ುತ್ತಿದ್ದಾರೆ ಎಂದೆನಿಸಿತ್ತು. ಅಷ್ಟೇ ಅಲ್ಲ, ಎಲ್ಲರಂತೆ ...ಗೂ ಈ ಮಾಯಾಬಜಾರ್‌ನ ಥಳುಕುಬಳುಕಿನ ಗೀಳು ...ೊಂಡು ಅವರಿಗೆ ನಿರ್ದೇಶನದತ್ತ ಆಸಕ್ತಿ ಉಳಿದಿಲ್ಲ ...ೂ ಅನ್ನಿಸಿತ್ತು.

ಈ ಎಲ್ಲ ಕಾರಣಗಳಿಗಾಗಿ ಈಗ ಇದ್ದಕ್ಕಿದ್ದಂತೆ ...ೇಂದ್ರ ಸಿನಿಮಾ ನಿರ್ದೇಶನ ಮಾಡಲು ...ಟಿರುವುದು ವಿಶೇಷ ಸುದ್ದಿಯಾಗಿ ಕಾಣಿಸುತ್ತಿದೆ. ... ಈ ನಿರ್ಧಾರದ ಹಿಂದೆ ನಿರ್ದೇಶನದ ಮೇಲೆ ...ೇಂದ್ರರಿಗೆ ಇರುವ ಮಮತೆ ಕಾರಣವೋ? ಅಥವಾ ...ಟಿಸಿರುವ ಚಿತ್ರಗಳು ಸಾಲುಸಾಲಾಗಿ ಸೋತಿದ್ದರಿಂದ ಆತನ ಸ್ಟಾರ್‌ಪಟ್ಟ ಅಲುಗಾಡುತ್ತಿದ್ದು ಆತ ನಿರ್ದೇಶನಕ್ಕೆ ಹಿಂದಿರುಗಿದ್ದಾರೋ ಗೊತ್ತಿಲ್ಲ.

ಹತ್ತು ವರ್ಷಗಳ ಹಿಂದೆ ಉಪೇಂದ್ರ ನಿರ್ದೇಶನ ಚಿತ್ರಗಳು ಟಾಕ್ ಆಫ್ ದಿ ಟೌನ್ ಆಗುತ್ತಿದ್ದವು. ಆತ ಬರೆದ ಸಂಭಾಷಣೆಯನ್ನು ಕೇಳಿ ಪಡ್ಡೆ ಹುಡುಗರೆಲ್ಲ ಕುಣಿದು ಕುಪ್ಪಳಿಸುತ್ತಿದ್ದರು. ಆತನ ವೇಷಭೂಷಣಗಳೂ ಚರ್ಚಾ ವಿಷಯವಾಗುತ್ತಿತ್ತು. ಆದರೆ ಅಂತಹ ಗಿಮಿಕ್ಕುಗಳು ಇವತ್ತು ವರ್ಕ್‌ಔಟಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಗಾಂಧಿನಗರದಲ್ಲಿ ಕಳೆದ ಒಂದು ದಶಕದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಪರಿಸ್ಥಿತಿ ಹೀಗಿರುವಾಗ ಉಪ್ಪಿ ತಮ್ಮ ಹಳೇ ಸೂತ್ರಕ್ಕೆ ಹೊಸ ಚಿತ್ರದಲ್ಲೂ ಗಂಟು ಬಿದ್ದಿದ್ದಾರೆಯೇ? ಹಳೆಯ ಗುಂಗಿನಿಂದ ಹೊರಬಂದು ಹೊಸದನ್ನು ನೀಡುತ್ತಾರೆಯೇ ಎಂಬುದು ಮುಖ್ಯವಾಗುತ್ತದೆ. ಆದರೆ ಹೊಸ ಚಿತ್ರದ ಫೋಟೋಗಳನ್ನು ನೋಡಿದರೆ ಉಪ್ಪಿಯ ಈ ಹೊಸ ಚಿತ್ರ 'ಎ' ಮತ್ತು 'ಉಪೇಂದ್ರ' ಚಿತ್ರಗಳ ಮಾದರಿಯಲ್ಲೇ ಇದೆಯೆಂದು ಭಾಸವಾಗುತ್ತದೆ.


ಉಪ್ಪಿ ನಿರ್ದೇಶಕನಾಗಿ ಜಯಭೇರಿ ಬಾರಿಸಿದ್ದು 'ಓಂ', 'ಎ' ಮತ್ತು 'ಉಪೇಂದ್ರ' ಚಿತ್ರಗಳಲ್ಲಿ. ಆದರೆ ಉಪ್ಪಿ ನಟನೆಯ ಕಡೆಗೆ ಹೋದನಂತರ ಯೋಗರಾಜ್ ಭಟ್, ಪ್ರೇಮ್, ಸೂರಿ, ಗುರುಪ್ರಸಾದ್.... ಮೊದಲಾದ ಯುವ ನಿರ್ದೇಶಕರು ಹೊಸ ಶೈಲಿಗಳನ್ನು ಅನುಸರಿಸಿ ಸ್ಟಾರ್ ಡೈರೆಕ್ಟರ್‌ಗಳಾಗಿದ್ದಾರೆ. ಉಪ್ಪಿಯ ಕಾಯಂ ಅಭಿಮಾನಿಗಳಾಗಿದ್ದ ಪಡ್ಡೆ ಹುಡುಗರು ಈಗ ಯೋಗರಾಜ್ ಭಟ್, ಪ್ರೇಮ್, ಗುರುಪ್ರಸಾದ್‌ರ ಕಡೆಗೆ ವಾಲಿದ್ದಾರೆ. ಉಪ್ಪಿ ಸಂಭಾಷಣೆಗಿಂತ ಭಟ್ಟರ ಸಂಭಾಷಣೆ ಇವರಿಗೆ ಹೆಚ್ಚು ಕಿಕ್ ನೀಡುತ್ತಿದೆ. ಹಾಗೆಯೇ ಗಿಮಿಕ್ ಮಾಡಿ ಪ್ರೇಕ್ಷಕರನ್ನು ಮೋಡಿ ಮಾಡುವುದರಲ್ಲಿ ಪ್ರೇಮ್ ಉಪ್ಪಿಗಿಂತ ಎಕ್ಸ್‌ಪರ್ಟ್ ಎನಿಸಿಕೊಂಡಿದ್ದಾರೆ. ಅಂದರೆ ಉಪ್ಪಿಯ ಒಂದೊಂದು ವಿಶೇಷ ಗುಣಗಳನ್ನು ಒಬ್ಬೊಬ್ಬ ನಿರ್ದೇಶಕ ಹೈಜಾಕ್ ಮಾಡಿದ್ದಾರೆ ಎನ್ನಬಹುದು. ಆದ್ದರಿಂದ ನಿರ್ದೇಶಕರಾಗಿ ಉಪ್ಪಿ ವಿಶೇಷವಾದ್ದದ್ದನ್ನು, ವಿಭಿನ್ನವಾದ್ದದ್ದನ್ನು, ಹೊಸದನ್ನು ನೀಡಿದರೆ ಮಾತ್ರ ಗೆಲ್ಲುತ್ತಾರೆ.

ಇನ್ನೊಂದು ಮುಖ್ಯ ವಿಷಯವೆಂದರೆ ಅಂದು ಉಪ್ಪಿ ಯೌವನದ ಪರಾಕಾಷ್ಠೆಯಲ್ಲಿದ್ದರು. ಅವರ ಉದ್ದೇಶವೂ ಪಡ್ಡೆ ಹುಡುಗರನ್ನು ರಂಜಿಸುವುದಾಗಿತ್ತು. ಆದರೀಗ ಪ್ರಿಯಾಂಕಳನ್ನು ಮದುವೆಯಾಗಿ ಎರಡು ಮಕ್ಕಳ ತಂದೆಯಾಗಿರುವ ಉಪ್ಪಿಯ ಚಿಂತನೆ, ಮನೋಸ್ಥಿತಿಯಲ್ಲೂ ಸಾಕಷ್ಟು ಬದಲಾವಣೆಯಾಗಿರುತ್ತದೆ. ಇವೆಲ್ಲವೂ ಖಂಡಿತವಾಗಿಯೂ ಉಪ್ಪಿಯ ಕಥೆ-ಚಿತ್ರಕಥೆ-ಸಂಭಾಷಣೆಯ ಮೇಲೆ 'ಪರಿಣಾಮ' ಬೀರುತ್ತವೆ. ಹೀಗಾಗಿ ಉಪ್ಪಿ ಪಾಲಿಗೆ ಈ ಹೊಸ ಚಿತ್ರ ಅವರ ವೃತ್ತಿ ಜೀವನದ ಅತ್ಯಂತ ಚಾಲೆಂಜಿಂಗ್ ಚಿತ್ರವಾಗಲಿದೆ.

ಒಂದಂತೂ ಸತ್ಯ: ತನ್ನ ಬತ್ತಳಿಕೆಯಲ್ಲಿ ನೂರಾರು ಅಸ್ತ್ರಗಳನ್ನು ಹೊಂದಿರುವ ಉಪ್ಪಿಯನ್ನು ಸುಲಭವಾಗಿ ನಿರ್ಲಕ್ಷಿಸಲಾಗುವುದಿಲ್ಲ. ಯಾವಾಗಲೂ ಯಾವುದಾದರೊಂದು ರೀತಿಯಲ್ಲಿ ಎಲ್ಲರನ್ನೂ ಅಚ್ಚರಿಪಡಿಸುವ ಉಪ್ಪಿ ತಮ್ಮ ನಿರ್ದೇಶನದ 'ಸೂಪರ್' ಚಿತ್ರದಲ್ಲಿ ಏನು ಮಾಡುತ್ತಾರೋ? ಕಾದು ನೋಡೋಣ.

● ಶೆಣೈ


ಹರಿ ಹರಿ ಜೋಗಯ್ಯ!



'ಜೋಗಯ್ಯ' ಚಿತ್ರಕ್ಕೆ ಸಂಗೀತ ನಿರ್ದೇಶಕ ಹರಿಕೃಷ್ಣ ಅವರನ್ನು ಆಯ್ಕೆ ಮಾಡುವ ಮುಖಾಂತರ ನಿರ್ದೇಶಕ ಪ್ರೇಮ್ ತಾವೇ ಪಾಲಿಸಿಕೊಂಡು ಬಂದಿರುವ ಒಂದು ಸೂತ್ರವನ್ನು ಮುರಿದಿದ್ದಾರೆ! ಅದೇನೆಂದರೆ ಸಾಧಾರಣವಾಗಿ ಚಿತ್ರ ಹಿಟ್ ಅಥವಾ ಫ್ಲಾಪ್ ಆಗಲಿ ಆ ಫಲಿತಾಂಶವನ್ನು ಮಾನದಂಡವನ್ನಾಗಿಸದೇ ಚಿತ್ರದ ಸಂಗೀತ ನಿರ್ದೇಶಕರನ್ನು ಬದಲಾಯಿಸುವುದು ಅವರ ಶೈಲಿ.

ಉದಾಹರಣೆಗೆ 'ಕರಿಯ' ಚಿತ್ರಕ್ಕೆ ಗುರುಕಿರಣ್ ಒಳ್ಳೆಯ ಹಾಡು ಕೊಟ್ಟರೂ 'ಎಕ್ಸ್‌ಕ್ಯೂಸ್ ಮೀ'ಗೆ ಆರ್.ಪಿ.ಪಟ್ನಾಯಕರನ್ನು ಪ್ರೇಮ್ ಕರೆತಂದಿದ್ದರು. ಹಾಗೆಯೇ 'ಜೋಗಿ'ಗೆ ಮತ್ತೆ ...ಕಿರಣ್ ಅವರನ್ನು ಆಯ್ಕೆ ಮಾಡಿದರು. ಆ ನಂತರ ಸ್ವತಃ ತಾವೇ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಚಿತ್ರಕ್ಕೆ ...ಶಕನಾಗಲು ಹೊರಟಾಗ ಮತ್ತೆ ಪ್ರೇಮ್ ಮೊರೆಹೋದದ್ದು ಪಟ್ನಾಯಕ್‌ರಿಗೆ. ಮೊನ್ನೆ 'ರಾಜ್' ಚಿತ್ರಕ್ಕೆ ಹರಿಕೃಷ್ಣ ...ೀತ ನೀಡಿದ್ದರು. ಚಿತ್ರ ಅಷ್ಟೇನೂ ಯಶಸ್ಸು ಕಾಣದಿದ್ದರೂ ಪ್ರೇಮ್ ತನ್ನ ಮಹತ್ವಾಕಾಂಕ್ಷೆಯ 'ಜೋಗಯ್ಯ' ಚಿತ್ರಕ್ಕೆ ...ದುವರನ್ನು ಕರೆಯದೆ ಮತ್ತೆ ಹರಿಕೃಷ್ಣ ಅವರನ್ನೇ ಉಳಿಸಿಕೊಂಡು ಎಲ್ಲರನ್ನೂ ಅಚ್ಚರಿಪಡಿಸಿದ್ದಾರೆ.

'ಸೈಕಲ್' ಮ್ಯಾಲೆ 'ಅಗ್ನಿ'



'ಕಾನೂನು ವಿರುದ್ಧ ಹೋರಾಟ ಮಾಡಿ ಕಾವೇರಿ ಕೊಡಿಸು ಅಂತಾಳೆ.

ಕಾಶ್ಮೀರ ಕೇಳಿದಿದ್ದರೆ ಕೊಡುತ್ತಿದ್ದೇನೋ

ಕೇಳ್ತಾಯಿರೋದು ಕಾವೇರಿನಾ.

ತಾಯಿ ಲಾಡಿ ಬಿಚ್ಚೋ ಕೆಲಸ ನನ್ನ ಕೈಯಲ್ಲಿ ಆಗಲ್ಲ, ಅವ್ಳಿಗ್ ಹೇಗ್ ಹೇಳಲಿ...'




– ಇಂಥ ಘನಗೋರ ಸಾಲುಗಳೇ 'ಸೈಕಲ್' ಎಂಬ ಮಹಾನ್ ಚಿತ್ರದ ಟ್ಯಾಗ್ ಲೈನ್!

ಹಿಂದೆ 'ಭಕ್ತ' ಎಂಬ ಹಾರಿಬಲ್ ಸಿನಿಮಾವನ್ನು ಮಾಡಿದ್ದ ಅಗ್ನಿ ಎಂಬ ಪ್ರತಿಭೆಯ ಎರಡನೇ ಕಲಾಕೃತಿಯಿದು.

ಚಿತ್ರದ ಟ್ಯಾಗ್ ಲೈನ್ ಬೆಚ್ಚಿಬೀಳಿಸುವಂತಿರುವಾಗ ಇನ್ನು ಸಿನಿಮಾದಲ್ಲಿ ಇರಬಾರದ್ದು ಏನೇನಿದೆಯೋ...

ತಮಾಷೆಯೆಂದರೆ, 'ಕಾಶ್ಮೀರ ಕೇಳಿದಿದ್ದರೆ ಕೊಡುತ್ತಿದ್ದೇನೋ' ಎಂಬ ದೊಡ್ಡದೊಡ್ಡ ಮಾತುಗಳನ್ನಾಡಿರುವ ಈ ಅಗ್ನಿ ಮಹಾಶಯ ಪತ್ರಿಕಾಗೋಷ್ಠಿ ನಡೆಸಿ, ಗ್ರೀನ್ ಹೌಸ್‌ನವರಿಗೆ ಎರಡು ಸಾವಿರ ರುಪಾಯಿ ಬಿಲ್ಲನ್ನೂ ಕೊಡದೆ 'ಸೈಕಲ್' ಏರಿ ಎಸ್ಕೇಪ್ ಆಗಿಬಿಟ್ಟಿದ್ದಾನೆ.

ಮತ್ತೆ ಗೆದ್ದೆತ್ತಿನ ಹಿಂದೆ



ಇದೀಗ ಬಂದ ಸುದ್ದಿ.


ಎಸ್.ನಾರಾಯಣ್ ಗೆದ್ದೆತ್ತಿನ ಬಾಲ ಹಿಡಿಯುವ ತನ್ನ ಹಳೇ ಚಾಳಿಯನ್ನು ಮತ್ತೆ ಪುನರಾರಂಭಿಸಿದ್ದಾರೆ. ಗಾಂಧಿನಗರದ ಲೇಟೆಸ್ಟ್ ಸುದ್ದಿಯ ಪ್ರಕಾರ ಸುದೀಪ್ ನಾಯಕನಾಗಿ ನಟಿಸಲಿರುವ ಚಿತ್ರವನ್ನು ಎಸ್.ನಾರಾಯಣ್ ನಿರ್ದೇಶಿಸಲಿದ್ದಾರಂತೆ. ಕಳೆದ ಒಂದೂವರೆ ದಶಕಗಳಿಂದ ನಾರಾಯಣ್ ಗಾಂಧಿನಗರದಲ್ಲೇ ಇದ್ದೂ ಯಾವತ್ತೂ ಸುದೀಪ್‌ನನ್ನು ಹಾಕಿಕೊಂಡು ಚಿತ್ರ ಮಾಡಲೇ ಇಲ್ಲ ಎಂಬುವನ್ನು ಇಲ್ಲಿ ಸ್ಮರಿಸಬಹುದು.

'ಮುಂಗಾರು ಮಳೆ' ಹಿಟ್ ಆದನಂತರ ದಿಢೀರನೆ ಗಣೇಶ್ ಕಾಲ್‌ಶೀಟ್ ಪಡೆದು 'ಚೆಲುವಿನ ಚಿತ್ತಾರ' ಮಾಡಿ ನಾರಾಯಣ್ ಹಣ ಮಾಡಿದ್ದರು. ಅದೇ ರೀತಿ ವಿಜಿ 'ದುನಿಯಾ'ದಲ್ಲಿ ಜಯಭೇರಿ ಬಾರಿಸಿದ ಕೂಡಲೇ ಅದೇ ವಿಜಿಯನ್ನು ಹಾಕಿಕೊಂಡು ನಾರಾಯಣ್ 'ಚಂಡ' ಮಾಡಿ ಪ್ರಚಂಡ ಹಣ ಮಾಡಿದರು. ಅನಂತರ ತನ್ನ ಮಗನನ್ನು ಹಾಕಿಕೊಂಡು ಎರಡು ಚಿತ್ರ ಮಾಡಿ ಹಣ ಕಳೆದುಕೊಂಡರು. ಇದೀಗ ಸುದೀಪ್ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿ ಬೇಡಿಕೆ ಪಡೆದಿರುವ ಸಂದರ್ಭದಲ್ಲಿ ಈ ನಾಣಿ ಸುದೀಪ್ ಕಾಲ್‌ಶೀಟ್ ಪಡೆದಿರುವುದು ವಿಶೇಷವೆನಿಸುತ್ತದೆ. ಇದನ್ನೇ ಗೆದ್ದೆತ್ತಿನ ಬಾಲ ಹಿಡಿಯುವುದು ಎಂದು ಹೇಳುವುದಲ್ಲವೆ?

'ಲವ್ ಗುರು'ವಿನ 'ಗಾನಾ ಭಜಾನಾ...!'

ರಾಮ್ ಚಿತ್ರದ 'ಹೊಸ ಗಾನಾ ಬಜಾನಾ...' ಹಾಡು ಸೂಪರ್ ಹಿಟ್ ಆಗಿದ್ದು ನಿಮಗೆ ಗೊತ್ತೇ ಇದೆಯಲ್ಲಾ? ಇದಕ್ಕೆ ಪುನೀತ್ ಮತ್ತು ಪ್ರಿಯಾಮಣಿ ಬಿಂದಾಸಾಗಿ ನರ್ತಿಸಿದ್ದು ಎಷ್ಟುಮುಖ್ಯ ಕಾರಣವೋ, ಈ ಹಾಡನ್ನು ಬರೆದ ಯೋಗರಾಜ್ ಭಟ್ಟರ ಗೀತಾಸಾಹಿತ್ಯವೂ ಅಷ್ಟೇ ಮುಖ್ಯ ಕಾರಣ!

ಈಗ 'ಗಾನಾ ಬಜಾನಾ..' ಎಂಬ ಹೆಸರಿನ ಹೊಸ ಚಿತ್ರವೊಂದು ಸೆಟ್ಟೇರುತ್ತಿದೆ. 'ಲವ್‌ಗುರು' ಚಿತ್ರವನ್ನು ನಿರ್ದೇಶಿಸಿದ್ದ ಪ್ರಶಾಂತ್‌ರಾಜ್ ಮತ್ತವರ ತಂಡವೇ ಈ ಚಿತ್ರದಲ್ಲೂ ಕಾಣಿಸಿಕೊಳ್ಳುತ್ತಿದೆ. 'ಲವ್‌ಗುರು' ತರಹ 'ಗಾನಾ ಬಜಾನಾ'ದಲ್ಲೂ ಅದೇ ತರುಣ್ ಮತ್ತು ರಾಧಿಕಾ ಪಂಡಿತ್ ಯುವ ಜೋಡಿಯಾಗಿ ಕಾಣಿಸಿಕೊಳ್ಳಲಿದ್ದಾರಂತೆ. ನೋಡೋಣ ಹೊಸ ಯುವ ಜೋಡಿಯ 'ಗಾನಾ..' ಎಲ್ಲರಿಗೂ ಕೇಳಿಸಲಿದೆಯೇ ಎಂದು..



'ಮೈಲಾರಿ' ಮಹಾತ್ಮೆ!


ಯಾರದ್ದೋ ಸೊತ್ತನ್ನು ಮತ್ತ್ಯಾವನೋ ಮಾರಿದ ಕಥೆಯಂತಿದೆ ಈ 'ಮೈಲಾರಿ'ಯ ಮಹಾತ್ಮೆ..

ಪ್ರಚಾರಪ್ರಿಯ ನಿರ್ದೇಶಕ 'ತಾಜ್‌ಮಹಲ್' ಚಂದ್ರು ಈಗ ಶಿವಣ್ಣ ನಟನೆಯ 99ನೇ ಚಿತ್ರ 'ಮೈಲಾರಿ'ಯನ್ನು ನಿರ್ದೇಶಿಸುತ್ತೇನೆ ಎಂದು ಅನೌನ್ಸ್ ಮಾಡಿದ್ದಾನೆ.



ಅಸಲಿಗೆ 'ಮೈಲಾರಿ' ಚಿತ್ರದ ಟೈಟಲ್ ಅಶ್ವಿನಿ ಸಂಸ್ಥೆಯ ರಾಮ್‌ಪ್ರಸಾದ್ ಅವರ ಬಳಿಯಿದೆ. ಮಾತ್ರವಲ್ಲ, ಅದನ್ನು ನಿರ್ದೇಶಿಸಲಿರುವ ಸಂಭಾಷಣೆಕಾರ ಮಳವಳ್ಳಿ ಸಾಯಿಕೃಷ್ಣ ಆಗಲೇ ಕಥೆಯೊಂದನ್ನು ಸಿದ್ಧ ಮಾಡಿಕೊಂಡಿದ್ದಾರೆ. ಆದರೆ ಈ ಮಧ್ಯೆ ಈ ಚಂದ್ರು ತಾನು ಇದನ್ನು ಮಾಡುತ್ತಿದ್ದೇನೆ ಎಂದಿರುವುದು ಕೆಲವರಿಗೆ ಶಾಕ್ ನೀಡಿದೆ.

ನಿರ್ದೇಶಕ ಪ್ರೇಮ್‌ನನ್ನು ಮತ್ತೆ ನಾಯಕನಟನನ್ನಾಗಿಸಿ ಸಿನಿಮಾವೊಂದನ್ನು ಚಂದ್ರು ನಿರ್ದೇಶಿಸುವ ಪ್ಲಾನ್ ಇತ್ತೀಚೆಗೆ ನಡೆದಿತ್ತು. ಆದರೆ ಪ್ರೇಮ್ 'ಜೋಗಯ್ಯ'ದಲ್ಲಿ ತೊಡಗಿದ್ದರಿಂದ ಆ ಯೋಜನೆ ಅಲ್ಲಿಗೇ ಡ್ರಾಪ್ ಆಗಿತ್ತು. ಆದರೆ ಪ್ರೇಮ್ "ನನ್ನ ಚಿತ್ರ ಮಾಡದಿದ್ದರೇನು? ನಿನಗೆ 'ಮೈಲಾರಿ' ಟೈಟಲ್ ಕೊಡ್ತೀನಿ. ಶಿವಣ್ಣನ್ನ ಹಾಕ್ಕೊಂಡು ಸಿನಿಮಾ ಮಾಡು" ಎಂದರಂತೆ. ಪ್ರೇಮ್‌ನ ಮಾತು ಕೇಳಿ ಥ್ರಿಲ್ ಆದ ಚಂದ್ರು ಒಮ್ಮೆಲೇ "ನನ್ನ ಮುಂದಿನ ಚಿತ್ರ 'ಮೈಲಾರಿ'. ಅದನ್ನು ಕನಕಪುರ ಶ್ರೀನಿವಾಸ್ ನಿರ್ಮಿಸಲಿದ್ದಾರೆ" ಎಂದು ಅನೌನ್ಸ್ ಮಾಡಿದ.



ಇದರಿಂದ ಕುಪಿತಗೊಂಡ ಅಶ್ವಿನಿ ರಾಮ್‌ಪ್ರಸಾದ್ "ಏನೇ ಆದರೂ ನಾನು 'ಮೈಲಾರಿ' ಟೈಟಲ್ ಅನ್ನು ಬೇರೆಯವರಿಗೆ ಕೊಡುವುದಿಲ್ಲ. ಆ ಚಿತ್ರವನ್ನು ನಾನೇ ನಿರ್ಮಿಸುತ್ತೇನೆ. ಮಳವಳ್ಳಿ ಸಾಯಿಯೇ ಅದರ ನಿರ್ದೇಶಕ" ಎಂದು ಅಬ್ಬರಿಸಿದ್ದಾರೆ.

ಈ ನಡುವೆ ಚಂದ್ರು ತನ್ನದು 'ಶಿವಣ್ಣ ಅಭಿನಯದ 99ನೇ ಚಿತ್ರ' ಎಂದು ಹೇಳಿರುವುದರಿಂದ ವ್ಯಗ್ರಗೊಂಡಿರುವ ಮತ್ತೊಬ್ಬ ನಿರ್ದೇಶಕ ರಾಘವ್ ಲೋಕಿ "ನನ್ನ ನಿರ್ದೇಶನದ 'ನಾ ರಾಜಕುಮಾರ' ಚಿತ್ರವೇ ಶಿವರಾಜ್ ಕುಮಾರ್ ಅಭಿನಯದ 99ನೇ ಚಿತ್ರವಾಗಲಿದೆ" ಎಂದು ಕದನಕ್ಕಿಳಿದಿದ್ದಾರೆ.

ಇದ್ದಕ್ಕಿದ್ದಂತೆ ಮಧ್ಯನುಗ್ಗಿ ಎಲ್ಲರಲ್ಲೂ ಗೊಂದಲ ಸೃಷ್ಟಿಸಿರುವ ಚಂದ್ರು 'ಹೀಗೂ ಪ್ರಚಾರ ಪಡೆಯಬಹುದು' ಎಂಬುದನ್ನು ತೋರಿಸಿದ್ದಾರೆ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 24 -02-2010 RNI No. KARKAN2005/14048



ಸುದೀಪ್, ರಮ್ಯಾ ಪಾಸ್ ಇದು ಜಸ್ಟ್ ಮಾತಲ್ಲ!

'ಜಸ್ಟ್ ಮಾತ್‌ಮಾತಲ್ಲಿ' ಚಿತ್ರದ ಬಗ್ಗೆ ಒಂದೆರಡು ಅನಿಸಿಕೆಗಳನ್ನು ಹಂಚಿಕೊಳ್ಳಬೇಕಿದೆ. ಇದರ ನಿರ್ದೇಶಕ ಸುದೀಪ್ ಪರಿಶ್ರಮ ಚಿತ್ರದುದ್ದಕ್ಕೂ ಕಾಣಿಸುತ್ತದೆ. ನಿರ್ದೇಶಕನಾಗಿ ಸುದೀಪ್ ಇನ್ನೊಂದು ಮೆಟ್ಟಿಲನ್ನು ಹತ್ತಿ ನಿಂತಿದ್ದಾರೆ ಎಂದರೆ ತಪ್ಪಾಗಲಾರದು. ಯಾಕೆಂದರೆ ಇದು ಅವರ ಹಿಂದಿನ ಚಿತ್ರಗಳಂತೆ ರಿಮೇಕ್ ಅಲ್ಲ.

ಆದರೆ ಇಡೀ ಚಿತ್ರ ನೋಡಿದ ನಂತರ ಮನಸ್ಸಿನಲ್ಲಿ ಉಳಿಯುವುದು ಚೆಲ್ಲುಚೆಲ್ಲಾಗಿ ನಟಿಸಿರುವ ನಾಯಕಿ ರಮ್ಯಾಳ ಪಾತ್ರ. ಈಕೆಯ ನಟನೆಯನ್ನು ನೋಡಿದಾಗ ಈ ಹುಡುಗಿಯಲ್ಲಿ ಇಷ್ಟೊಂದು ಪ್ರತಿಭೆಯಿದೆಯಾ? ಎಂದು ಅಚ್ಚರಿಯಾಗುತ್ತದೆ. ಹಿಂದಿಯ 'ಜಬ್ ವಿ ಮೆಟ್' ಚಿತ್ರದಲ್ಲಿ ಕರೀನಾ ಕಪೂರ್ ನಟಿಸಿದಂತೆ 'ಜಸ್ಟ್ ಮಾತ್‌ಮಾತಲ್ಲಿ' ರಮ್ಯಾ ಮಾತಿನ ಮಲ್ಲಿಯಾಗಿ, ಉತ್ಸಾಹದ ಬುಗ್ಗೆಯಾಗಿ ನಿಮಗೆ ಇಷ್ಟವಾಗುತ್ತಾಳೆ.

ಒಂದು ವರ್ಷದ ಹಿಂದೆ 'ಮುಸ್ಸಂಜೆ ಮಾತು' ಚಿತ್ರದಲ್ಲಿ ಇದೇ ಸುದೀಪ್ ಮತ್ತು ರಮ್ಯಾ ಜೋಡಿ ಮನೋಜ್ಞವಾಗಿ ನಟಿಸಿ ಎಲ್ಲರನ್ನೂ ಅಚ್ಚರಿಪಡಿಸಿದ್ದರು. ಆ ಚಿತ್ರ ಅವರಿಬ್ಬರಿಗೂ ಮತ್ತೆ ಸ್ಟಾರ್‌ವ್ಯಾಲ್ಯೂ ತಂದುಕೊಟ್ಟಿತ್ತು. ಅದಾದನಂತರ ಪ್ರಾರಂಭವಾಗಿದ್ದೇ 'ಜಸ್ಟ್ ಮಾತ್‌ಮಾತಲ್ಲಿ'. ಆದರೆ ಈ ಚಿತ್ರ ಮುಗಿಯುವ ಮುನ್ನವೇ ಈ ಯುವ ಜೋಡಿಯ ನಡುವೆ ಬಿರುಕು ಕಾಣಿಸಿಕೊಂಡಿತು. ಹೀಗಾಗಿ ರಮ್ಯಾಳನ್ನು ಸಂಪೂರ್ಣವಾಗಿ ಕೈಬಿಟ್ಟ ನಿರ್ದೇಶಕ ಸುದೀಪ್ ತನ್ನ ಇತಿಮಿತಿಯಲ್ಲಿ ಗ್ರಾಫಿಕನ್ನು ಬಳಸಿ ಚಿತ್ರವನ್ನು ಮುಗಿಸಿದ್ದಾರೆ. ಅಪ್ಪ-ಅಮ್ಮರ ಜಗಳದಲ್ಲಿ ಕೂಸು ಬಡವಾಯಿತು ಅಂತಾರಲ್ಲ, ಅದೇ ರೀತಿ ಸುದೀಪ್-ರಮ್ಯಾಳ ಮುನಿಸಿನಿಂದಾಗಿ 'ಜಸ್ಟ್ ಮಾತ್‌ಮಾತಲ್ಲಿ' ಸೊರಗಿದೆ ಎನ್ನುವುದು ಚಿತ್ರ ನೋಡಿದಾಗ ಗೊತ್ತಾಗುತ್ತದೆ. ಯಾಕೆಂದರೆ ವಿರಾಮದ ನಂತರ ರಮ್ಯಾ ಚಿತ್ರದಿಂದ ನಾಪತ್ತೆಯಾಗಿಬಿಡುತ್ತಾಳೆ! ಆಕೆ ಮತ್ತೆ ಕಾಣಿಸಿಕೊಳ್ಳುವುದೇ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ! ಇದರ ಬದಲಿಗೆ ವಿರಾಮದ ನಂತರವೂ ಅಲ್ಲೊಮ್ಮೆ ಇಲ್ಲೊಮ್ಮೆ ಬೆಳದಿಂಗಳ ಬಾಲೆಯಂತೆ ಈಕೆ ಕಾಣಿಸಿಕೊಂಡಿದ್ದರೆ ಚಿತ್ರದ ಬ್ಯೂಟಿಯೇ ಬೇರೆಯದಾಗಿರುತ್ತಿತ್ತು. ಅದು ಸಾಧ್ಯವಾಗದಿರುವುದರಿಂದ ಕನ್ನಡ ಚಿತ್ರರಂಗಕ್ಕೆ ಒಂದು ಒಳ್ಳೆಯ ಚಿತ್ರ ಸ್ವಲ್ಪದರಲ್ಲಿಯೇ ಕೈತಪ್ಪಿಹೋಗಿದೆ. ಈ ಕಾರಣಕ್ಕಾಗಿಯೇ ಚಿತ್ರ ಚೆನ್ನಾಗಿದೆ ಎಂದು ಭೇಷರತ್ತಾಗಿ ತೀರ್ಪು ಕೊಡುವ ಬದಲು ರಮ್ಯಾ ಚೆನ್ನಾಗಿ ನಟಿಸಿದ್ದಾಳೆ, ಸುದೀಪ್ ನಿರ್ದೇಶಕನಾಗಿ ಮಿಂಚಿದ್ದಾರೆ ಎಂದಷ್ಟೇ ಹೇಳಬೇಕಾಗುತ್ತದೆ.

ಈ ಚಿತ್ರಕ್ಕೆ ಈಗಾಗಲೇ ಪ್ರೇಕ್ಷಕರಿಂದ ನಿರುತ್ಸಾಹದ ಪ್ರತಿಕ್ರಿಯೆ ದೊರೆತಿದೆ. ಇದನ್ನು ನೋಡಿಯಾದರೂ ರಮ್ಯಾ ಮತ್ತು ಸುದೀಪ್ ಮುಂಬರುವ ದಿನಗಳಲ್ಲಿ ತಮ್ಮೆಲ್ಲಾ ವೈಮನಸ್ಯಗಳನ್ನು ಬದಿಗಿಟ್ಟು ತಮ್ಮನ್ನು ತಾವು ಸಂಪೂರ್ಣವಾಗಿ ಚಿತ್ರದಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ರಮ್ಯಾ ಮುಂದಿನ ಚಿತ್ರ 'ಹುಚ್ಚ-ಕಿಚ್ಚ'ದಲ್ಲಿ ಸುದೀಪ್ ಜೊತೆ ನಟಿಸುತ್ತಿದ್ದಾಳೆ.

ಅದರಲ್ಲಾದರೂ ಇವರಿಬ್ಬರು ತಮ್ಮ 'ಹುಚ್ಚಾ'ಟವನ್ನೆಲ್ಲ ಬಿಟ್ಟು ಜಸ್ಟ್ ಮಾತ್‌ಮಾತಾಡುತ್ತಲೇ ಕೆಲಸ ಮಾಡುವಂತಾಗಲಿ.

'ಆಪ್ತರಕ್ಷಕ'ನಿಂದ ವಿಷ್ಣು ಬಯಕೆ ಈಡೇರುತ್ತಾ?

"ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಇದು ಅದ್ದೂರಿ ವೆಚ್ಚದ ಚಿತ್ರ" - ಹೀಗೊಂದು ಸುಳ್ಳು ಹೆಡ್ಡಿಂಗು ಬರೆಸಿ ಪ್ರೇಕ್ಷಕರು ಮತ್ತು ಇಡೀ ಉದ್ಯಮದವರ ಕಿವಿ ಮೇಲೆ ಫ್ಲವರ್ ಇಡಲು ಹೊರಟಿರುವವರು ನಿರ್ಮಾಪಕ ಕೃಷ್ಣಕುಮಾರ್ ಅಲಿಯಾಸ್ ಕೃಷ್ಣಪ್ರಜ್ವಲ್. ಈತ ಹೀಗೆ ರೀಲು ಬಿಡುತ್ತಿರುವುದು ಬೇರೆ ಯಾವುದೋ ಚಿತ್ರಕ್ಕಲ್ಲ, ಸಾಹಸಸಿಂಹ ವಿಷ್ಣುವರ್ಧನ್ ನಟನೆಯ ಕೊನೆಯ ಮತ್ತು ಇನ್ನೂರನೇ ಚಿತ್ರ 'ಆಪ್ತ ರಕ್ಷಕ' ಸಿನೆಮಾಕ್ಕೆ.

ಬಹುಶಃ ಈ ಕೃಷ್ಣಕುಮಾರ್ ಕಳೆದ ನಾಲ್ಕೈದು ವರ್ಷಗಳಲ್ಲಿ ಕನ್ನಡದಲ್ಲಿ ನಿರ್ಮಾಣಗೊಂಡಿರುವ ಯಾವ ಚಿತ್ರವನ್ನೂ ನೋಡಿದ ಹಾಗಿಲ್ಲ. ಕಳೆದ ವರ್ಷವೊಂದರಲ್ಲೇ ಪುನೀತ್ ಅಭಿನಯದ 'ರಾಜ್', ಶಿವಣ್ಣನ 'ಮಾದೇಶ', ಉಪೇಂದ್ರರ 'ರಜನಿ' ಮುಂತಾದ ಸಿನೆಮಾಗಳಿಗೆ ನಾಲ್ಕೈದು ಕೋಟಿಗಳಿಗೆ ಮೀರಿದ ಬಂಡವಾಳ ಹೂಡಲಾಗಿತ್ತು. ಇನ್ನು ಈಗಷ್ಟೇ ಚಿತ್ರೀಕರಣದ ಕೊನೆಯ ಹಂತದಲ್ಲಿರುವ ಎನ್.ಎಂ. ಸುರೇಶ್ ನಿರ್ಮಾಣದ, ಪ್ರಪಂಚದ ಆರೇಳು ಅದ್ಭುತ ತಾಣಗಳಲ್ಲಿ ಚಿತ್ರೀಕರಣಗೊಂಡಿರುವ 'ಚೆಲುವೆಯೇ ನಿನ್ನೆ ನೋಡಲು' ಚಿತ್ರಕ್ಕಾಗಿ ಈಗಾಗಲೇ ಅತಿ ಹೆಚ್ಚು ಹಣ ವೆಚ್ಚವಾಗಿದೆ.

ಹೀಗಿರುವಾಗ "ನಿಮ್ಮ 'ಆಪ್ತರಕ್ಷಕ'ನಿಗೆ ಒಟ್ಟು ಎಷ್ಟು ಕೋಟಿ ಖರ್ಚಾಗಿದೆ?" ಎಂದು ಕೇಳಿದರೆ ಕೃಷ್ಣಕುಮಾರ್ ಉತ್ತರಿಸದೇ "ಸಿನಿಮಾ ನೋಡಿದ ಮೇಲೆ ನಿಮಗೇ ಗೊತ್ತಾಗುತ್ತದೆ" ಎಂದು ಪುಂಗಿ ಊದುತ್ತಾರೆ. ಹಾಗಿದ್ದಮೇಲೆ ಈ ಮನುಷ್ಯ "ಇತಿಹಾಸದಲ್ಲೇ ಅತಿ ಅದ್ದೂರಿ ಚಿತ್ರ" ಎಂದು ಚಿತ್ರದ ಪೋಸ್ಟರ್‌ಗಳಲ್ಲಿ ಬರೆಸಿಕೊಳ್ಳುವ ಅಗತ್ಯವಾದರೂ ಏನಿತ್ತು? ಇಷ್ಟು ಮಾತ್ರವಲ್ಲದೇ "'ಆಪ್ತಮಿತ್ರ' ಚಿತ್ರತಂಡದಿಂದ ಮತ್ತೊಂದು ಚಿತ್ರ" ಎಂದೂ ಜಾಹೀರಾತನ್ನು ನೀಡಿದ್ದಾರೆ. ವಾಸ್ತವವಾಗಿ 'ಆಪ್ತಮಿತ್ರ'ದ ವಿಷ್ಣುವರ್ಧನ್, ಗುರುಕಿರಣ್ ಮತ್ತು ನಿರ್ದೇಶಕ ವಾಸು ಅವರನ್ನು ಬಿಟ್ಟರೆ 'ಆಪ್ತರಕ್ಷಕ'ದಲ್ಲಿ ಆ ಚಿತ್ರದ ಬೇರೆ ಕಲಾವಿದ-ತಂತ್ರಜ್ಞರೂ ಇಲ್ಲ.



ಖರ್ಚಾಗಿರುವುದಾದರೂ ಎಷ್ಟು?

ಈ ಚಿತ್ರಕ್ಕಾಗಿ ವಿಷ್ಣು ಪಡೆದ 70 ಲಕ್ಷ ಸಂಭಾವನೆ, ಸಂಗೀತ ನಿರ್ದೇಶಕ ಗುರುಕಿರಣ್ ಮಾಡಿಸಿರುವ ಖರ್ಚು, ನಿರ್ದೇಶಕ ವಾಸು ಅವರ ಸಂಭಾವನೆ ಮತ್ತು ಗ್ರಾಫಿಕ್ಸ್‌ಗಾಗಿ ಮಾಡಿರುವ ವೆಚ್ಚವನ್ನು ಹೊರತುಪಡಿಸಿದರೆ ಮಿಕ್ಕೆಲ್ಲಾ ಮಾಮೂಲಿ ಸಿನಿಮಾಗೆ ಆಗುವಷ್ಟೇ ವೆಚ್ಚ ಇಲ್ಲೂ ಆಗಿದೆಯಷ್ಟೇ. ಗಾಂಧಿನಗರದವರ ಅಂದಾಜಿನ ಪ್ರಕಾರ ಈ ಚಿತ್ರಕ್ಕೆ ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗಿರುವ ಸಾಧ್ಯತೆಯೇ ಇಲ್ಲ, ಹಾಗಾದರೆ "ಈ ಸಿನೆಮಾ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಅದ್ದೂರಿ ವೆಚ್ಚದ ಚಿತ್ರ"ವಾಗುವುದಾದರೂ ಹೇಗೆ?

ನಿರ್ಮಾಪಕ ಕೃಷ್ಣಕುಮಾರ್ ಹೀಗೆ ಕೀಳು ಮಟ್ಟದ ಪ್ರಚಾರ ಪಡೆಯಲು ಯತ್ನಿಸುತ್ತಿದ್ದರೆ ನಿರ್ದೇಶಕ ಪಿ. ವಾಸು ಮಾತ್ರ ಇಂಥವನ್ನೆಲ್ಲ ವಿರೋಧಿಸುತ್ತಿದ್ದಾರೆ. "ನಮ್ಮದು ಇತಿಹಾಸ ಸೃಷ್ಟಿಸುವಷ್ಟು ಬಜೆಟ್ ಹೊಂದಿರುವ ಚಿತ್ರವಲ್ಲ, 'ಆಪ್ತಮಿತ್ರ' ಮತ್ತು 'ಆಪ್ತರಕ್ಷಕ' ಎರಡೂ ಒಂದೇ ತಾಂತ್ರಿಕ ವರ್ಗವನ್ನೂ ಹೊಂದಿಲ್ಲ, ಇನ್ನು ನಾಗವಲ್ಲಿ ಕಾಟಕ್ಕೂ ನಮ್ಮ ಸಿನಿಮಾಗೂ ಯಾವ ಸಂಬಂಧವೂ ಇಲ್ಲ, ನಾಗವಲ್ಲಿ ಒಂದು ಪಾತ್ರವಷ್ಟೇ. ಈ ಕಲ್ಪಿತ ಪಾತ್ರಕ್ಕೆ ಜೀವ ನೀಡಿ ಪ್ರಚಾರ ಪಡೆಯುವುದು ದೊಡ್ಡ ತಪ್ಪು..." ಹೀಗೆ ಮೊನ್ನೆ ನಡೆದ ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಕೃಷ್ಣಕುಮಾರ್ ಎದುರಿಗೇ ವಾಸು ಗುಡುಗಿದರು.



ಇದು ಪಿ. ವಾಸು ಅವರ ಅನುಭವ ಮತ್ತು ವೃತ್ತಿಪರತೆಯನ್ನು ತೋರುತ್ತದೆ. ಆದರೆ ಇನ್ನೂ ಈಗಷ್ಟೇ ಚಿತ್ರರಂಗದಲ್ಲಿ ಕಣ್ಣುಬಿಡುತ್ತಿರುವ ನಿರ್ಮಾಪಕ ಮಾತ್ರ ಇಂಥ ಸೂಕ್ಷ್ಮಗಳನ್ನು ಅರಿತುಕೊಳ್ಳಬೇಕಿದೆ.

ಸಿಂಪತಿ ತೋರದ ಪ್ರೇಕ್ಷಕ...



ಬೇರೆ ಭಾಷೆಯ ಚಿತ್ರಾಭಿಮಾನಿಗಳ ಮನಸ್ಥಿತಿ ಒಂದು ತೆರನಾದರೆ, ನಮ್ಮ ಕನ್ನಡದ ಪ್ರೇಕ್ಷಕ ಪ್ರಭು ಎಂದೂ ದಯೆ, ದಾಕ್ಷಿಣ್ಯಕ್ಕೆ ಕಟ್ಟುಬಿದ್ದವನೇ ಅಲ್ಲ. ಹಾಗೊಮ್ಮೆ ಸಿಂಪತಿಗೆ ಒಳಗಾಗಿದ್ದೇ ಆಗಿದ್ದಲ್ಲಿ ವಿಷ್ಣು ನಿಧನಾನಂತರ ಬಿಡುಗಡೆಯಾದ 'ಸ್ಕೂಲ್ ಮಾಸ್ಟರ್' ಈ ಹೊತ್ತಿಗೆ ಸೂಪರ್ ಡ್ಯೂಪರ್ ಹಿಟ್ ಆಗಬೇಕಿತ್ತು, ಆದರೆ ಅದು ಬಾಕ್ಸ್ ಆಫೀಸಿನಲ್ಲಿ ಹೀನಾಯವಾಗಿ ಸೋತಿದೆ.

ವಿಷ್ಣು ವಿಧಿವಶರಾಗುತ್ತಿದ್ದಂತೇ 'ಈ ತಕ್ಷಣವೇ ಸಿನಿಮಾ ರಿಲೀಸ್ ಮಾಡಿಬಿಟ್ಟರೆ ಒಳ್ಳೇ ಕಾಸು ಮಾಡಿಕೊಳ್ಳಬಹುದು' ಎಂಬ ಲೆಕ್ಕಾಚಾರದಿಂದ ಆ ಚಿತ್ರದ ನಿರ್ಮಾಪಕ ಸಿ.ಆರ್. ಮನೋಹರ್ ತರಾತುರಿಯಲ್ಲಿ 'ಮಾಸ್ಟರ್'ನನ್ನು ತೆರೆಗೆ ತಂದರು. ಮೊದಲ ದಿನದ ಓಪನಿಂಗ್ ಬಿಟ್ಟರೆ, ಮರುದಿನದಿಂದಲೇ ಪ್ರೇಕ್ಷಕರು ಚಿತ್ರಮಂದಿರದಿಂದ ದೂರುದ್ದ ನಿಂತುಬಿಟ್ಟರು. ಇದಕ್ಕೆ ಕಾರಣ ಚಿತ್ರದ ಕಳಪೆ ಗುಣಮಟ್ಟವೇ ಹೊರತು ಬೇರೇನಲ್ಲ. ಪರಿಣಾಮವಾಗಿ ನಿರ್ಮಾಪಕ ಮನೋಹರ್ ಲಾಭ ಮಾಡುವುದಕ್ಕಿಂತ ಎರಡೂವರೆ ಕೋಟಿಯ ಲುಕ್ಸಾನು ಅನುಭವಿಸುವಂತಾಗಿದೆ.

'ರಕ್ಷಕ' ರಕ್ಷಿಸುತ್ತಾನಾ?

'ಆಪ್ತರಕ್ಷಕ' ಚಿತ್ರದ ಬಗ್ಗೆ ಮೊದಲಿನಿಂದಲೂ ಒಳ್ಳೆಯ ಮಾತು ಕೇಳಿಬರುತ್ತಿದೆ. ಗುರುಕಿರಣ್ ಸಂಗೀತ ನಿರ್ದೇಶನದ ಈ ಚಿತ್ರದ ಆಡಿಯೋ ಈಗಾಗಲೇ ಸೂಪರ್‌ಹಿಟ್ ಆಗಿದ್ದು ಕಾಳಸಂತೆ, ಪೈರಸಿಗಳ ನಡುವೆಯೂ ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯ ಸೀಡಿಗಳು ಮಾರಾಟವಾಗಿವೆ.

ಚಿತ್ರದ ಹಂಚಿಕೆಗಾಗಿ ಎಲ್ಲೆಡೆಯಿಂದ ವಿತರಕರು ಮುಗಿಬಿದ್ದರೂ ಯಾವ ಏರಿಯಾಗಳನ್ನೂ ಮಾರಾಟ ಮಾಡದ ಕೃಷ್ಣಕುಮಾರ್ ಬಾಷಾ ಅವರ ಬಹರ್ ಫಿಲಂಸ್ ಮೂಲಕ ಕರ್ನಾಟಕದಾದ್ಯಂತ ಬಿಡುಗಡೆ ಮಾಡುತ್ತಿದ್ದಾರೆ. ಏಕಕಾಲಕ್ಕೆ 120 ಥಿಯೇಟರುಗಳಲ್ಲಿ ಬಿಡುಗಡೆಯಾಗುತ್ತಿರುವುದರಿಂದ ಮೊದಲ ವಾರದಲ್ಲೇ ಒಳ್ಳೆ ಕಲೆಕ್ಷನ್ ಹರಿದುಬರುವುದಂತೂ ಗ್ಯಾರಂಟಿ.

ಈಡೇರುತ್ತಾ ವಿಷ್ಣು ಬಯಕೆ?

ವಿಷ್ಣು ಅವರಿಗೆ ತಮ್ಮ ಇನ್ನೂರನೇ ಚಿತ್ರವನ್ನು ಹೇಗಾದರೂ ಮಾಡಿ ಗೆಲ್ಲಿಸಬೇಕೆಂಬ ಅದಮ್ಯ ಬಯಕೆಯಿತ್ತು. ನಮ್ಮ ನಿರ್ದೇಶಕರಿಗೆ ಇಂಥದೊಂದು ಜವಾಬ್ದಾರಿಯನ್ನು ಕೊಟ್ಟರೆ ನಂಬುವುದು ಕಷ್ಟ ಎನ್ನುವ ಕಾರಣಕ್ಕೇ ತಮಿಳಿನಿಂದ ವಾಸು ಅವರನ್ನು ಕರೆಸಿ ಅವರಿಗೆ ತಮ್ಮ 200ನೇ ಚಿತ್ರದ ಜವಾಬ್ದಾರಿ ನೀಡಿದ್ದರು. ಆ ಸಂದರ್ಭದಲ್ಲಿ ವಾಸು ಬಾಲಿವುಡ್‌ನಲ್ಲಿ ಅದ್ದೂರಿ ಚಿತ್ರವೊಂದನ್ನು ನಿರ್ದೇಶಿಸಲು ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಆದರೆ ವಿಷ್ಣು ಅವರ ಕರೆಗೆ ಓಗೊಟ್ಟು ತಮ್ಮೆಲ್ಲಾ ಪ್ರಾಜೆಕ್ಟ್‌ಗಳನ್ನು ಬದಿಗೊತ್ತಿ ಸುಮಾರು ಒಂದು ವರ್ಷಗಳ ಕಾಲ ಈ ಚಿತ್ರಕ್ಕಾಗಿ ಶ್ರಮಿಸಿದರು. ವಾಸುಗೆ ವಿಷ್ಣು ಮೇಲೆ ಈ ಪರಿಯ ಭಕ್ತಿ ಇರಲೂ ಕಾರಣವಿದೆ. ಅದೇನೆಂದರೆ, ವಾಸು ನಿರ್ದೇಶನದ ಮೊದಲ ಚಿತ್ರ 'ಕಥಾನಾಯಕ'ದಲ್ಲಿ ನಟಿಸಿ ಅವರನ್ನು ಪ್ರೋತ್ಸಾಹಿಸಿದ್ದು ಇದೇ ವಿಷ್ಣು!

'ಆಪ್ತರಕ್ಷಕ' ಗೆಲ್ಲಬೇಕು ಎಂಬ ವಿಷ್ಣು ಅವರ ಬಯಕೆಗೆ ತಕ್ಕಂತೆ ಚಿತ್ರತಂಡದ ಎಲ್ಲರೂ ಶ್ರಮಿಸಿದ್ದಾರೆ. ಸಾಹಸಸಿಂಹನ ಕಡೇ ಬಯಕೆ ಈಡೇರಬೇಕಿದೆ ಅಷ್ಟೇ...

● ಅರುಣ್ ಕುಮಾರ್.ಜಿ



ಸ್ಪರ್ಧಾ ಗೈಡ್ ಇದೀಗ ಮಾರುಕಟ್ಟೆಯಲ್ಲಿ..

KAS ನೇಮಕಾತಿ ವಿಶೇಷಾಂಕ

ಸಂಪೂರ್ಣ ಮಾಹಿತಿ ಹಾಗೂ ವಿಶೇಷ ಲೇಖನಗಳ ಸಂಚಿಕೆ

268 ಹುದ್ದೆಗಳು

ಎಲ್ಲೆಡೆ ಲಭ್ಯ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44